## 01- 03-2021

### ಐಗಾ ಸ್ವಾಟೆಕ್ ಅವರಿಗೆ ಅಡಿಲೇಡ್ ಪ್ರಶಸ್ತಿ




* ಫ್ರೆಂಚ್ ಓಪನ್ ಚಾಂಪಿಯನ್ ಆಗಿರುವ ಐಗಾ ಸ್ವಾಟೆಕ್ ವಿಶ್ವದ 12ನೇ ಕ್ರಮಾಂಕದ ಆಟಗಾರ್ತಿ ಆಗಿರುವ ಬೆಲಿಂಡಾ ಬೆನ್ಸಿಕ್ ಅವರ ವಿರುದ್ಧ ಅಡಿಲೇಡ್ ಇಂಟರ್‌ನ್ಯಾಶನಲ್ ಪ್ರಶಸ್ತಿ ತಮ್ಮದಾಗಿಸಿಕೊಂಡರು.
* ಐಗಾ ಸ್ವಾಟೆಕ್ 19 ವರ್ಷ ವಯಸ್ಸಿನವರಾಗಿದ್ದು, ತಮ್ಮ ವೃತ್ತಿ ಜೀವನದ ಎರಡನೇ ಪ್ರಶಸ್ತಿಯನ್ನು ಪಡೆದುಕೊಂಡರು. ಈ ಮೊದಲು ಇವರು ವಿಶ್ವದ ಆರನೇ ಕ್ರಮಾಂಕದ ಸೋಫಿಯಾ ಕೆನಿನ್‌ರ ವಿರುದ್ಧ ಫ್ರೆಂಚ್‌ಓಪನ್‌ಚಾಂಪಿಯನ್‌ಆಗಿದ್ದರು.

### ದಿ ಇಂಡಿಯಾ ಟಾಯ್ಸ್ ಫೇರ್ 2021| ಚನ್ನಪಟ್ಟಣ ಗೊಂಬೆಗೆ ವಿಶ್ವಮಾನ್ಯತೆ



ಚನ್ನಪಟ್ಟಣ: ಆತ್ಮನಿರ್ಭರ ಭಾರತ ಯೋಜನೆಯಡಿ ಇತ್ತೀಚೆಗೆ ಆರಂಭಗೊಂಡ "ದಿ ಇಂಡಿಯಾ ಟಾಯ್ಸ್ ಫೇರ್ 2021" ನಲ್ಲಿ ರಾಜ್ಯದ ಪ್ರಸಿದ್ಧ ಚನ್ನಪಟ್ಟಣ ಗೊಂಬೆಗಳನ್ನೂ ವರ್ಚುವಲ್ ಪ್ರದರ್ಶನಕ್ಕಿಡಲಾಗಿದ್ದು, ಈ ಮೂಲಕ ಗೊಂಬೆಗಳಿಗೆ ವಿಶ್ವ ಮಾನ್ಯತೆದೊರೆತಿದ್ದು, ಈ ಮೂಲಕ ಚನ್ನಪಟ್ಟಣವೂ ಸೇರಿದಂತೆ ದೇಶದ ವಿವಿಧ ಗೊಂಬೆ ತಯಾರಕರಲ್ಲಿ ಹೊಸ ಭರವಸೆ ಮೂಡಿದೆ. ಚನ್ನಪಟ್ಟಣದ ಗೊಂಬೆಗಳ ಉದ್ಯಮದ ಬಗ್ಗೆ :
* ಚನ್ನಪಟ್ಟಣದಲ್ಲಿ ಸುಮಾರು 2 ಸಾವಿರ ಕರಕುಶಲಕರ್ಮಿಗಳು ಸುಮಾರು 200 ವರ್ಷಗಳಿಂದ ಗೊಂಬೆ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.
* ಚನ್ನಪಟ್ಟಣದ ಗೊಂಬೆಗಳನ್ನು ಯಾವುದೇ ರಾಸಾಯನಿಕಗಳನ್ನು ಬಳಸದೆ ತಯಾರಿಸಲಾಗುತ್ತದೆ.
* ಈ ಗೊಂಬೆ ತಯಾರಿಕಾ ಉದ್ಯಮದಲ್ಲಿ ಶೇ.80ರಷ್ಟು ಮಂದಿ ಪುರುಷರು, ಶೇ. 20ರಷ್ಟುಮಹಿಳೆಯರುಪಾಲ್ಗೊಂಡಿದ್ದಾರೆ.

### ಜಾನ್ಸನ್ ಆಯಂಡ್ ಜಾನ್ಸನ್ ಸಂಸ್ಥೆಯ ಕೋವಿಡ್ ಲಸಿಕೆ ತುರ್ತು ಬಳಕೆಗೆ ಅನುಮತಿ ನೀಡಿದ ಅಮೇರಿಕಾ




ಅಮೆರಿಕದಲ್ಲಿ ಕೋವಿಡ್ 19 ವಿರುದ್ಧದ ಸಮರಕ್ಕೆ ಮತ್ತೊಂದು ಲಸಿಕೆ ಜೊತೆಗೂಡಿದ್ದು, ತುರ್ತು ಸಂದರ್ಭದ ಬಳಕೆಗಾಗಿ ಜಾನ್ಸನ್ ಆಯಂಡ್ ಜಾನ್ಸನ್ ಸಂಸ್ಥೆಯ ಲಸಿಕೆಯನ್ನು ಬಳಸಿಕೊಳ್ಳಲು ಅಮೆರಿಕಾವು ಅನುಮತಿ ನೀಡಿದೆ.
* ಕೊರೊನಾ ವೈರಸ್ ಸೋಂಕಿನಿಂದ ಅಮೇರಿಕಾದಲ್ಲಿ ಇದುವರೆಗೆ ಸುಮಾರು 5,00,000ಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ.
* ಜಾನ್ಸನ್ ಆಯಂಡ್ ಜಾನ್ಸನ್ ಸಂಸ್ಥೆಯ ಲಸಿಕೆಯು ಹೊಸ ಸ್ವರೂಪದ ಕೊರೊನಾ ವೈರಸ್ ಸೇರಿದಂತೆ ಕೋವಿಡ್ 19 ನಿಯಂತ್ರಣದಲ್ಲಿ ಲಸಿಕೆಯ ಬಳಕೆ ಪರಿಣಾಮಕಾರಿಯಾಗಲಿದೆ ಎಂದು ಆಹಾರ ಮತ್ತು ಔಷಧ ಆಡಳಿತ ಸಂಸ್ಥೆ ತಿಳಿಸಿದೆ.
* ಇನ್ನು ಅಮೇರಿಕಾದಲ್ಲಿ ಕೋವಿಡ್ ನಿಯಂತ್ರಣಕ್ಕೆ ಅನುಮತಿ ಪಡೆದುಕೊಂಡಿರುವ ಮೂರನೇ ಲಸಿಕೆ ಇದಾಗಿದ್ದು, ಕಳೆದ ಡಿಸೆಂಬರ್‌ನಲ್ಲಿ ಫೈಝರ್ ಮತ್ತು ಮಾಡರ್ನಾ ಲಸಿಕೆಗಳಿಗೆ ಅನುಮತಿ ದೊರೆತಿತ್ತು.

### ಇಸ್ರೋ ದಿಂದ ಈ ವರ್ಷದ ಮೊದಲ ಯಶಸ್ವೀ ಉಡಾವಣೆ



ಭಾರತದ ಬಾಹ್ಯಾಕಾಶ ಸಂಸ್ಥೆ 2021 ನೇ ಸಾಲಿನ ತನ್ನ ಮೊದಲ ಉಡಾವಣೆಯನ್ನು ದಿನಾಂಕ 28 ಫೆಬ್ರುವರಿ 2021 ರಂದು ಆಂಧ್ರದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿಸಿದ್ದು, ಈ ಉಡಾವಣೆಯಲ್ಲಿ ಬ್ರೆಜಿಲ್‌ನ ಅಮೇಜಾನಿಯಾ 1 ಸೇರಿದಂತೆ ಒಟ್ಟು 19 ಉಪಗ್ರಹಗಳನ್ನು ಆಗಸಕ್ಕೆ ಕಳುಹಿಸಲಾಯಿತು.
* PSLV C51 ರಾಕೆಟ್ ಮೂಲಕ ಈ 19 ಉಪಗ್ರಹಗಳನ್ನ ಉಡಾವಣೆ ಮಾಡಲಾಯಿತು.
* ಈ 19 ಉಪಗ್ರಹಗಳ ಪೈಕಿ ಬ್ರೆಜಿಲ್ ದೇಶದ ಅಮೇಜಾನಿಯಾ 1 ಉಪಗ್ರಹ ಪ್ರಮುಖವಾಗಿದ್ದು, ಇದು ಭಾರತದಲ್ಲಿ ಉಡಾವಣೆಗೊಂಡ ಬ್ರೆಜಿಲಿಯನ್ ನ ಮೊದಲ ಉಪಗ್ರಹವಾಗಿದೆ. ಈ ಉಪಗ್ರಹವು ಒಟ್ಟು 637 KG ತೂಕ ಹಿಂದಿದ್ದು, ಇದು ಅಮೇಜಾನ್ ಪ್ರದೇಶದ ಅರಣ್ಯನಾಶ ಹಾಗೂ ಬ್ರೆಜಿಲ್‌ನ ವೈವಿಧ್ಯಮಯ ಕೃಷಿಕಾರಿಕೆಯ ವಿಶ್ಲೇಷಣೆಗಾಗಿ ಬಳಕೆಯಾಗಲಿದೆ.
* ಇನ್ನು ಚೆನ್ನೈ ಮೂಲದ ಸ್ಪೇಸ್ ಕಿಡ್ಜ್ ಇಂಡಿಯಾ, ಸತೀಶ್ ಧವನ್ ಸ್ಯಾಟ್, ಯೂನಿಟಿ ಸ್ಯಾಟ್ 3 ಉಪಗ್ರಹ, ಇಸ್ರೋದ ನ್ಯೂಸ್ಪೇಸ್ ಇಂಡಿಯಾ ಸಂಸ್ಥೆಯ 14 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಯಿತು.
* ಈ ಬಾಹ್ಯಾಕಾಶ ನೌಕೆಯ ಮೇಲಿನ ಪ್ಯಾನೆಲ್ ನಲ್ಲಿ ಪ್ರಧಾನಿ ಮೋದಿ ಚಿತ್ರವನ್ನು ಮುದ್ರಿಸಲಾಗಿದ್ದು, SD ಕಾರ್ಡಿನಲ್ಲಿ ಭಗವದ್ಗೀತೆ ಹಾಗೂ ಎಸ್‌ಡಿ ಸ್ಯಾಟ್‌ನಲ್ಲಿ ಒಟ್ಟು 25,000 ಜನರ ಹೆಸರನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಯಿತು.
* ಅಮೆಜಾನಿಯ 1 ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ ಬಳಿಕ ಭಾರತದ ಪ್ರಧಾನಿ ಮೋದಿಯವರು ಬ್ರೆಜಿಲ್ ಅಧ್ಯಕ್ಷ ಜೇರ್ ಬೊಲ್ಸನಾರೊ ಅವರನ್ನು ಅಭಿನಂದಿಸಿದರು.

## ಸುಪ್ರೀಂಕೋರ್ಟ್ ನ ಅಧಿಕೃತ ಸಂವಹನಕ್ಕೆ ವಾಟ್ಸಪ್ ನಿಷೇದ



ಸುಪ್ರೀಂ ಕೋರ್ಟ್ ಇನ್ನು ಮೇಲೆ ತನ್ನ ಯಾವುದೇ ವಾಟ್ಸ್ ಆಯಪ್ (Messaging App) ಗ್ರೂಪ್ ಗಳ ಮೂಲಕ ಕೋರ್ಟ್ ವಿಚಾರಣೆಗಳ ವಿಡಿಯೋ ಕಾನ್ಫರೆನ್ಸ್ ಲಿಂಕ್ ಗಳನ್ನು ಹಂಚಿಕೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ರಿಜಿಸ್ಟ್ರಿ ಸ್ಪಷ್ಟಪಡಿಸಿದೆ. ಇನ್ನು ವಾಟ್ಸ್ ಆಪ್ ಬದಲಿಗೆ, ವರ್ಚುವಲ್ ಕೋರ್ಟ್ ವಿಚಾರಣೆಗಳ ಲಿಂಕ್ ಗಳನ್ನು ಇನ್ನು ನೋಂದಾಯಿತ ಇಮೇಲ್ ಐಡಿಗಳು ಅಥವಾ ನೋಂದಾಯಿತ ವಕೀಲರ ಮೊಬೈಲ್ ಸಂಖ್ಯೆಗಳಲ್ಲಿ ನೇರವಾಗಿ ಕಳುಹಿಸಲಾಗುವದು ಎಂದು ರಿಜಿಸ್ಟ್ರಿ ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಿದೆ.

## ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ ನಿರ್ಮಿಸಲು ಮುಂದಾದ ಭಾರತ



ಭಾರತವು ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಯನ್ನು ಜಮ್ಮು ಕಾಶ್ಮೀರದ ಚೇನಾಬ್ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿದ್ದು, ಕಾಮಗಾರಿ ಬಹುತೇಕ ಅಂತಿಮ ಹಂತಕ್ಕೆ ತಲುಪಿದೆ.
* ಒಟ್ಟು 1.3 ಕಿ.ಮೀ ಉದ್ದವಿರುವ ಈ ಸೇತುವೆ ನಿರ್ಮಾಣ ಪೂರ್ಣವಾದ ನಂತರ ಚೀನಾದ
* ಈ ಸೇತುವೆಯು ಚೇನಾಬ್ ನದಿ ಮಟ್ಟದಿಂದ ಒಟ್ಟು 359 ಮೀಟರ್ ಎತ್ತರದಲ್ಲಿ ನಿರ್ಮಾಣಗೊಳ್ಳುತ್ತಿದ್ದು, ಒಟ್ಟು 1.3 ಕಿ.ಮೀ ಉದ್ದವಿರಲಿದೆ.
* ಈ ಸೇತುವೆಯು ಜಮ್ಮುವಿನ ಕತ್ರಾದಲ್ಲಿರುವ ಬಕ್ಕಲ್ ಹಾಗೂ ಶ್ರೀನಗರದ ಕೌರಿ ನಡುವೆ ಸಂಪರ್ಕ ಕಲ್ಪಿಸಲಿದೆ. ಈ ಸೇತುವೆಯ ನಿರ್ಮಾಣ ಪೂರ್ಣಗೊಂಡ ಬಳಿಕ ಇದು ಚೀನಾದ 275 ಮೀ ಉದ್ದದ ಶೂಬೇ ರೈಲ್ವೆ ಸೇತುವೆಯ ದಾಖಲೆಯನ್ನು ಮುರಿಯಲಿದೆ.
* ಈ ಸೇತುವೆಯು ಉಗ್ರರ ದಾಳಿಯನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿರುವಂತೆ ತಂತ್ರಜ್ಞಾನರೂಪಿಸಲಾಗಿದೆ.

## ನೌಕಾಪಡೆಯ ಪಶ್ಚಿಮ ವಿಭಾಗಕ್ಕೆ ಮುಖ್ಯಸ್ಥರಾಗಿ ಆರ್. ಹರಿಕುಮಾರ್ ನೇಮಕ



* ಇತ್ತೀಚಿಗೆ ವೈಸ್ ಆಡ್ಮಿರಲ್ ಆರ್. ಹರಿಕುಮಾರ್ ಅವರು ನೌಕಾಪಡೆಯ ಪಶ್ಚಿಮ ವಿಭಾಗದ ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿ ನೇಮಕಗೊಂಡಿದ್ದಾರೆ.
* ಮೊದಲು ಈ ಹುದ್ದೆಯಲ್ಲಿದ್ದ ವೈಸ್ ಅಡ್ಮಿರಲ್ ಅಜಿತ್ ಕುಮಾರ್ ರವರು ಆರ್.ಹರಿಕುಮಾರ್ ಅವರಿಗೆ ಅಧಿಕಾರ ವರ್ಗಾಯಿಸಿದರು.
* ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ ಹಳೆ ವಿದ್ಯಾರ್ಥಿಯಾಗಿರುವ ಆರ್. ಹರಿಕುಮಾರ್ ಅವರು ಭಾರತೀಯ ನೌಕಾಪಡೆಗೆ ದಿನಾಂಕ 1983ರ ಜನವರಿ 1ರಂದು ನಿಯೋಜನೆಗೊಂಡಿದ್ದರು.

## ಐಸಿಸಿ ಟೆಸ್ಟ್ ಬ್ಯಾಟಿಂಗ್ ರ್‍ಯಾಂಕಿಂಗ್ ನಲ್ಲಿ 8ನೇ ಸ್ಥಾನ ಪಡೆದ ರೋಹಿತ್ ಶರ್ಮ



ಭಾರತದ ಆರಂಭಿಕ ಆಟಗಾರ ರೋಹಿತ್ ಶರ್ಮ ಅವರು ನೂತನವಾಗಿ ಬಿಡುಗಡೆಗೊಂಡ ICC ಟೆಸ್ಟ್ ಬ್ಯಾಟಿಂಗ್ ರ್‍ಯಾಂಕಿಂಗ್‌ನಲ್ಲಿ ಒಟ್ಟು 6 ಸ್ಥಾನಗಳ ಬಡ್ತಿ ಪಡೆದು 8ನೇ ಸ್ಥಾನ ಪಡೆದಿದ್ದರೆ, ಹಾಗು ಇದು ಅವರ ಜೀವನಶ್ರೇಷ್ಠ ಟೆಸ್ಟ್ ರ್‍ಯಾಂಕಿಂಗ್ ಆಗಿದೆ.
* ಇನ್ನುಳಿದಂತೆ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ 5ನೇ ಸ್ಥಾನ, ಕೇನ್ ವಿಲಿಯಮ್ಸನ್ ಮೊದಲ ಸ್ಥಾನ, ಮತ್ತು ನಂತರದ ಸ್ಥಾನಗಳನ್ನು ಸ್ಟೀವನ್ ಸ್ಮಿತ್, ಲಬು ಶೇನ್, ರೂಟ್ ಪಡೆದುಕೊಂಡಿದ್ದಾರೆ.
* ಇನ್ನು ಬೌಲಿಂಗ್ ವಿಭಾಗದ ರ್‍ಯಾಂಕಿಂಗ್‌ನಲ್ಲಿ ಆರ್. ಅಶ್ವಿನ್ 4 ಸ್ಥಾನ ಬಡ್ತಿ ಪಡೆದು ನಂಬರ್ 3 ಸ್ಥಾನಕ್ಕೇರಿದ್ದು,ಟಾಪ್ 10 ಪಟ್ಟಿಯಲ್ಲಿರುವಭಾರತದಏಕೈಕಬೌಲರ್ಆಗಿದ್ದಾರೆ.

# 02- 03- 2021

## ಭಾರತದಲ್ಲಿ ಎರಡನೇ ಹಂತದ ಕೋವಿಡ್ 19 ಲಸಿಕೆ ಅಭಿಯಾನಶುರು




ಇದೆಮಾರ್ಚ್01ರಿಂದದೇಶಾದ್ಯಂತ10ಕೋಟಿಜನರಿಗೆಲಸಿಕೆಹಾಕುವ'ಕೋವಿಡ್ 19' ಲಸಿಕೆ ಅಭಿಯಾನ ಎರಡನೇ ಹಂತದ ಅಭಿಯಾನವನ್ನು ಪ್ರಧಾನಿ ನರೇಂದ್ರ ಮೋದಿಯವರು ಲಸಿಕೆ ಪಡೆಯುವ ಮೂಲಕ ಚಾಲನೆ ನೀಡಿದರು.
* 60 ವರ್ಷ ಮೇಲ್ಪಟ್ಟವರು ಮತ್ತು 45 ವರ್ಷ ಮೇಲ್ಪಟ್ಟ ನಿರ್ದಿಷ್ಟ ಸಹ ರೋಗಲಕ್ಷಣಗಳನ್ನು ಹೊಂದಿರುವವರಿಗೆ ಲಸಿಕೆ ಯನ್ನು ಸರ್ಕಾರ ಉಚಿತವಾಗಿ ನೀಡಲಿದೆ.
* ಲಸಿಕೆ ಪಡೆಯಬಯಸುವ ಫಲಾನುಭವಿಗಳು ಕೇಂದ್ರ ಸರ್ಕಾರ ಆರಂಭಿಸಿರುವ ಕೋ ವಿನ್ ವೇದಿಕೆಯಲ್ಲಿ(CoWIN) ಹೆಸರು ನೋಂದಾಯಿಸಿಕೊಂಡು ಲಸಿಕೆ ಪಡೆಯಬಹುದಾಗಿದೆ.
* ಸರ್ಕಾರಿ ಆಸ್ಪತ್ರೆಯಲ್ಲಿ ಲಸಿಕೆ ಯನ್ನು ಉಚಿತವಾಗಿ ಹಾಗು ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆಗೆ 150 ರೂಪಾಯಿ ಹಾಗು ಸೇವಾ ಶುಲ್ಕ 100 ರೂ.ಗಳನ್ನು ಕೇಂದ್ರ ಸರ್ಕಾರನಿಗದಿಪಡಿಸಿದೆ.

## ಸಿಂಗಾಪುರ ಓಪನ್ | ಪಾಪಿರಿನ್ ಚಾಂಪಿಯನ್



ಸಿಂಗಾಪುರ: ಆಸ್ಟ್ರೇಲಿಯದ ಆಟಗಾರ ಅಲೆಕ್ಸಿ ಪಾಪಿರಿನ್ ರವರು ಸಿಂಗಾಪುರ ಓಪನ್ ನ ಅಂತಿಮ ಪಂದ್ಯದಲ್ಲಿ ಕಝಕಿಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಪರಾಭವಗೊಳಿಸಿ ಸಿಂಗಾಪುರ ಓಪನ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

## ಮ್ಯಾರಿಟೈಮ್ ಇಂಡಿಯಾ ಶೃಂಗಸಭೆ




ನವದೆಹಲಿ : ಭಾರತ ಸರ್ಕಾರದ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ ಆಯೋಜಿಸಿರುವ 'ಮ್ಯಾರಿಟೈಮ್ ಇಂಡಿಯಾ ಸಮ್ಮಿಟ್' ಇದೆ ಮಾರ್ಚ್ 02 ರಿಂದ 04ನೇ ತಾರೀಖಿನವರೆಗೆ ನಡೆಯಲಿದ್ದು, ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಉದ್ಘಾಟಿಸಲಿದ್ದಾರೆ.
* ಉದ್ಘಾಟನಾ ಸಮಾರಂಭ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಯಲಿರುವುದಾಗಿ ಪಿಎಂ ಸಚಿವಾಲಯ ತಿಳಿಸಿದೆ.
* ಈ ಶೃಂಗಸಭೆಯು ಮೂಲಕ ಬರುವ ದಶಕದಲ್ಲಿ ಭಾರತದ ಕಡಲ ಕ್ಷೇತ್ರಕ್ಕೆ ಮಾರ್ಗಸೂಚಿಯನ್ನು ತೋರಲಿದ್ದು, ಜಾಗತಿಕ ಕಡಲ ಕ್ಷೇತ್ರದಲ್ಲಿ ಭಾರತವನ್ನು ಮುಂಚೂಣಿಗೆ ತರವಲ್ಲಿ ಸಹಕಾರಿಯಾಗಲಿದೆ ಎಂದು ತಿಳಿಸಲಾಗಿದೆ.
* ಇನ್ನು ಈ ಮೂರು ದಿನಗಳ ಕಾಲ ನಡೆಯುವ ಈ ಶೃಂಗಸಭೆಯಲ್ಲಿ ಡೆನ್ಮಾರ್ಕ್ ದೇಶ ಪಾಲುದಾರನಾಗಿ ಕಾರ್ಯನಿರ್ವಹಿಸಲಿದೆ.

## ರಾಜ್ಯ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷ ಶ್ರೀಧರ ಮಾರುತಿರಾವ್ ಗೋರೆ ಇನ್ನಿಲ್ಲ



ಕರ್ನಾಟಕ ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷರಾಗಿದ್ದ ಶ್ರೀಧರ ಮಾರುತಿರಾವ್ ಗೋರೆಯವರು ತಮ್ಮ 66 ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಇತ್ತೀಚಿಗೆ ನಿಧನರಾದರು.
* ಇವರು ಕಳೆದ 21 ವರ್ಷಗಳಿಂದ ರಾಜ್ಯ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, ಪ್ರತಿ ಬಾರಿಯೂ ಅವಿರೋಧವಾಗಿ ಆಯ್ಕೆಯಾಗಿದ್ದರು.
* ಭಾರತ ಸೈಕ್ಲಿಂಗ್ ಫೆಡರೇಷನ್ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ ಉಪಾಧ್ಯಕ್ಷರೂ ಆಗಿದ್ದರು.

## ರಾಜ್ಯ ಸರ್ಕಾರದಿಂದ 68 ಲಕ್ಷ ರೈತರಿಗೆ 'ಸ್ವಾಭಿಮಾನಿ ರೈತ' ಗುರುತಿನ ಚೀಟಿ




ಕರ್ನಾಟಕ ರಾಜ್ಯ ಸರ್ಕಾರದಿಂದ ನಮ್ಮ ರೈತರಿಗಾಗಿ 'ಸ್ವಾಭಿಮಾನಿ ರೈತ' ಎಂಬ ವಿನೂತನ ಗುರುತಿನ ಚೀಟಿಯನ್ನು ವಿತರಿಸಲು ಮುಂದಾಗಿರುವುದರ ಕುರಿತು ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾಹಿತಿ ನೀಡಿದ್ದಾರೆ.
* ಈ ಗುರುತಿನ ಚೀಟಿಯಲ್ಲಿ ರೈತನ ಫೋಟೋ, ಆಧಾರ ಸಂಖ್ಯೆ, ಊರು, ವಿಳಾಸ ಹಾಗು QR code ಅನ್ನು ದಾಖಲಾಗಿರುತ್ತದೆ.
* ಈಗಾಗಲೇ ಕೊಪ್ಪಳ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ 1.5 ಲಕ್ಷ ರೈತರಿಗೆ ಈ ಕಾರ್ಡ್ ವಿತರಿಸಲಾಗುತ್ತಿದ್ದು ಬರುವ ದಿನಗಳಲ್ಲಿ ರಾಜ್ಯದ68ಲಕ್ಷರೈತರಿಗೆಈಯೋಜನೆವಿಸ್ತರಿಸುವಕುರಿತು ಸಚಿವರು ಮಾಹಿತಿ ನೀಡಿದ್ದಾರೆ.

## ಕಿಲಿಮಂಜಾರೊ ಪರ್ವತ ಏರಿದ ವಿಶ್ವದ 2ನೇ ಕಿರಿಯ ಸಾಧಕಿ




ಆಫ್ರಿಕಾ ಖಂಡದ ಅತೀ ಎತ್ತರದ ಪರ್ವತವಾಗಿರುವ ಕಿಲಿಮಂಜಾರೊ ಶಿಖರವನ್ನು ಆಂಧ್ರಪ್ರದೇಶ ರಾಜ್ಯದ ಅನಂತಪುರ ಜಿಲ್ಲೆಯ ಕೇವಲ 9 ವರ್ಷದ ಕುಮಾರಿ ಋತ್ವಿಕಾ ಶ್ರೀ ಏರುವ ಮೂಲಕ ಈ ಸಾಧನೆ ಮಾಡಿದ ವಿಶ್ವದ 2ನೇ ಅತೀ ಕಿರಿಯ ಹಾಗೂ ಏಷ್ಯಾದ ಕಿರಿಯ ಸಾಧಕಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.
* ಋತ್ವಿಕಾ ಶ್ರೀ ಯವರು ಸಮುದ್ರ ಮಟ್ಟ ದಿಂದ 5,681 ಮೀಟರ ಎತ್ತರವಿರುವ ಗಿಲ್ಮನ್ ಎನ್ನುವ ಪಾಯಿಂಟ್ ತಲುಪುವಮೂಲಕ ಈ ಸಾಧನೆ ಮಾಡಿದರು.

# 03- 03- 2021

## ಅಸ್ಸಾಂನ ಖ್ಯಾತ ಕೊಳಲುವಾದಕ ಪ್ರಭಾತ್ ಶರ್ಮ ವಿಧಿವಶ



* ಅಸ್ಸಾಂನ ಪ್ರಭಾತ್ ಶರ್ಮರವರು ತಮ್ಮ 85ನೇ ವಯಸ್ಸಿನಲ್ಲಿ ವಿಧಿವಶರಾದರು, ಇವರು ಪ್ರಸಿದ್ಧ ಮತ್ತು ಖ್ಯಾತ ಕೊಳಲುವಾದಕ, ಸಂಗೀತ ಸಂಯೋಜಕ ಹಾಗೂ ಗಾಯಕರಾಗಿದ್ದರು.
* ರಾಷ್ಟ್ರ ಪ್ರಶಸ್ತಿ ವಿಜೇತ ಹಾಗೂ ಇವರಿಗೆ 2003ರಲ್ಲಿ ಅವರಿಗೆ ಸಂಗೀತ ನಾಟಕ ಅಕಾಡೆಮಿ

ಪ್ರಶಸ್ತಿಯನ್ನು ಪಡೆದಿದ್ದರು.

## ಮೊದಲ ಬಾರಿಗೆ ಭಾರತೀಯ ವಾಯುಪಡೆಯಿಂದ UAEಯಲ್ಲಿ ಸಮರಾಭ್ಯಾಸ



* ಇದೇ ಮೊದಲ ಬಾರಿಗೆ ಭಾರತದ ವಾಯುಪಡೆಯು ಯುಎಇ(UAE)ನಲ್ಲಿ ಸಮರಾಭ್ಯಾಸ ನಡೆಸಲಿದ್ದು, ಈ ಸಮರಾಭ್ಯಾಸವು ಮಾರ್ಚ್ 3 ರಿಂದ ಆರಂಭಗೊಂಡು ಮಾರ್ಚ್ 21ರ ವರೆಗೆ ನಡುವೆ ನಡೆಯಲಿದ್ದು, ವಿವಿಧ ದೇಶಗಳ ವಾಯುಪಡೆಗಳು ಸಮರಾಭ್ಯಾಸದಲ್ಲಿ ಭಾವಹಿಸಲಿವೆ.
* ವಾಯುಪಡೆಗಳ ಸಮರಾಭ್ಯಾಸವು 'ಎಕ್ಸೈಸೈಜ್ ಡಸರ್ಟ್ ಫ್ಲ್ಯಾಗ್ 4' ಎಂದು ಕರೆಯಲ್ಪಡುವ ಅಲ್ ದಫ್ರಾ ವಾಯುನೆಲೆಯಲ್ಲಿ ಈ ಸಮರಾಭ್ಯಾಸ ನಡೆಯಲಿದೆ. ವಾಯುಪಡೆಯ ಸಮರಾಭ್ಯಾಸದಲ್ಲಿ ಭಾಗವಹಿಸುವ ದೇಶಗಳು:
* ಯುಎಇ, ಅಮೆರಿಕ, ಫ್ರಾನ್ಸ್, ಸೌದಿ ಅರೇಬಿಯಾ, ದಕ್ಷಿಣ ಕೊರಿಯಾ, ಬಹರೇನ್‌ನ ವಾಯುಪಡೆಗಳು ಈ ಸಮರಾಭ್ಯಾಸದಲ್ಲಿ ಭಾಗವಹಿಸಲಿವೆ ಎಂದು ಭಾರತೀಯ ವಾಯುಪಡೆಯ ಮೂಲಗಳು ಖಚಿತ ಪಡಿಸಿವೆ.
* ಒಟ್ಟಾರೆ ಈ ಸಮರಾಭ್ಯಾಸದಲ್ಲಿ ಭಾರತೀಯ ವಾಯುಪಡೆಯ 6 ಎಸ್‌ಯು 30 ಎಂಕೆಐ, ಎರಡು ಸಿ 17 ಹಾಗೂ ಒಂದು ಐಎಲ್ 78 ಟ್ಯಾಂಕರ್ ಯುದ್ಧವಿಮಾನಗಳು ಭಾಗವಹಿಸಲಿವೆ.
* ಈ ವಾಯುಪಡೆಯ ಸಮರಾಭ್ಯಾಸಕ್ಕೆ ಯುದ್ಧವಿಮಾನಗಳನ್ನು ಯುಎಇಗೆ ತೆಗೆದುಕೊಂಡು ಹೋಗಲು ಮತ್ತು ಮರಳಿ ಯುದ್ಧವಿಮಾನಗಳನ್ನು ತರುವ ಕಾರ್ಯಕ್ಕೆ ಸಿ 17 ಗ್ಲೋಬ್‌ಮಾಸ್ಟರ್‌ಅನ್ನು ಬಳಸಿಕೊಳ್ಳಲಾಗುತ್ತದೆ ಎಂದೂ ವಾಯುಪಡೆ ಮಾಹಿತಿಯನ್ನು ನೀಡಿದೆ.

## ಐಸಿಸಿ ತಿಂಗಳ ಆಟಗಾರ ಪ್ರಶಸ್ತಿ ಅಶ್ವಿನ್, ರೂಟ್, ಮೇಯರ್ ರೇಸ್ ನಾಮನಿರ್ದೇಶನ



* ಇನ್ನು ಪ್ರತಿ ತಿಂಗಳು 'ICC ತಿಂಗಳ ಆಟಗಾರ' ಪ್ರಶಸ್ತಿಯನ್ನು ನೀಡುವುದಾಗಿ ತಿಳಿಸಿತ್ತು, ಅದರಂತೆ ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಗೆ ಫೆಬ್ರವರಿ ತಿಂಗಳ 3 ಆಟಗಾರರ ಹೆಸರನ್ನು ನಾಮನಿರ್ದೇಶನ ಮಾಡಲಾಗಿದೆ. ನಾಮನಿರ್ದೇಶನ ಮಾಡಲಾದ 3 ಜನ ಆಟಗಾರರು:
* ಪುರುಷ ವಿಭಾಗದಿಂದ ಆರ್. ಅಶ್ವಿನ್, ಜೋ ರೂಟ್ ಮತ್ತು ಕೈಲ್ ಮೇಯರ್.
* ಮಹಿಳಾ ವಿಭಾಗದಿಂದ ಇಂಗ್ಲೆಂಡಿನ ಟಾಮಿ ಬೇಮಂಟ್, ನಥಾಲಿ ಶಿವರ್ ಮತ್ತು ನ್ಯೂಜಿಲ್ಯಾಂಡಿನ ಬ್ರೂಕ್ ಹಾಲಿಡೇ ಹೆಸರನ್ನು ನಿರ್ದೇಶನ ಮಾಡಲಾಗಿದೆ.
* ಮಾರ್ಚ್. 8ರಂದು ವಿಜೇತರ ಹೆಸರನ್ನು ಘೋಷಿಸಲಾಗುವುದು. ಪ್ರಸ್ತುತ ICCನ ತಿಂಗಳ ಚೊಚ್ಚಲ ಪ್ರಶಸ್ತಿಯನ್ನು ಭಾರತದ ವಿಕೆಟ್ ಕೀಪಿಂಗ್ ಬ್ಯಾಟ್ಸಮನ್ ರಿಷಭ್ ಪಂತ್ ಅವರು ಪಡೆದುಕೊಂಡಿದ್ದರು.
* ಭಾರತದ ಆರ್. ಅಶ್ವಿನ್ ಫೆಬ್ರವರಿ ತಿಂಗಳಲ್ಲಿ ಇಂಗ್ಲೆಂಡ್ ವಿರುದ್ಧ 3 ಟೆಸ್ಟ್ ಆಡಿದ್ದರು. ಈ ಪಂದ್ಯಗಳಿಂದ ಒಟ್ಟು 176 ರನ್ ದಾಖಲಿಸಿ ಹಾಗೂ 24 ವಿಕೆಟ್'ಗಳನ್ನೂ ಪಡೆದುಕೊಂಡಿದ್ದಾರೆ.
* ಜೋ ರೂಟ್'ರವರು 333 ರನ್ ಪಡೆದು ಅದರ ಜೊತೆಯಲ್ಲಿ ಬೌಲರ್ ಆಗಿ 6 ವಿಕೆಟ್ ಕೂಡ ಪಡೆದುಕೊಂಡಿದ್ದಾರೆ, ಮತ್ತು ಅಹ್ಮದಾಬಾದ್ ಟೆಸ್ಟ್‌ನಲ್ಲಿ ಉತ್ತಮ ಬೌಲಿಂಗ್ ಪ್ರದರ್ಶನವನ್ನು ನೀಡಿದ್ದಾರೆ.
* ವಿಂಡೀಸಿನ ಕೈಲ್ ಮೇಯರ್ ಅವರು ಬಾಂಗ್ಲಾದೇಶ ವಿರುದ್ಧ ಚೊಚ್ಚಲ ಟೆಸ್ಟ್ ಪಂದ್ಯದಲ್ಲೇಅಜೇಯದ್ವಿಶತಕಬಾರಿಸಿಉತ್ತಮಸಾಧನೆಮಾಡಿದ್ದಾರೆ.

## ಲೋಕಸಭಾ ಸಂಸದ ನಂದಕುಮಾರ್ ಸಿಂಗ್ ಚೌಹಾಣ್ ನಿಧನ



* ಮಧ್ಯಪ್ರದೇಶದ ಖಾಂಡ್ವಾ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದರಾಗಿರುವ ನಂದಕುಮಾರ್ ಸಿಂಗ್ ಚೌಹಾಣ್ ರವರು ಇತ್ತೀಚಿಗೆ ತಮ್ಮ 69 ವರ್ಷ ವಯಸ್ಸಿನಲ್ಲಿ ವಿಧಿವಶರಾದರು.
* ಒಟ್ಟು ಆರು ಬಾರಿ ಸಂಸದರಾಗಿದ್ದ ನಂದಕುಮಾರ್ ಸಿಂಗ್ ಚೌಹಾಣ್ ರವರು ತಮ್ಮ ರಾಜಕೀಯ ಜೀವನವನ್ನು 1978 ರಲ್ಲಿ ಶಾಹಪುರ ಪುರಸಭೆಯಿಂದ ಪ್ರಾರಂಭಿಸಿದರು ಮತ್ತು ನಂತರ ಶಾಸಕರಾಗಿ ಆಯ್ಕೆಯಾದರು.
* ಇವರು ಲೋಕಸಭಾ ಸದಸ್ಯರಾಗಿ ಆಯ್ಕೆಯಾದಾಗ 1985 ರಿಂದ 1996 ರವರೆಗೆ ಶಾಸಕರಾಗಿದ್ದರು, ಮತ್ತು ಇವರು 1998, 1999, 2004, 2014 ಮತ್ತು 2019 ರಲ್ಲಿ ಮರು ಆಯ್ಕೆಯಾಗಿದ್ದರು.
* ಪ್ರಧಾನಿ ನರೇಂದ್ರ ಮೋದಿ ಸೇರಿ ಹಲವು ಗಣ್ಯರು ಚೌಹಾಣ್ ಅವರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ.

## ಸಾಗರಮಾಲಾ ಯೋಜನೆ 2035ರ ವೇಳೆಗೆ ಬಂದರುಗಳಲ್ಲಿ 6 ಲ.ಕೋ.ರೂ.ಹೂಡಿಕೆ

* ಪ್ರಧಾನಿ ನರೇಂದ್ರ ಮೋದಿ ಅವರು 2021ರ ಸಾಗರ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದರು.
* ಸಾಗರಮಾಲಾ ಯೋಜನೆಯಡಿ ಭಾರತವು 2035ರ ವೇಳೆಗೆ ಬಂದರುಗಳಲ್ಲಿ 6ಲಕ್ಷ.ಕೋಟಿ.ರೂಗಳ ಹೂಡಿಕೆಯನ್ನು ಮಾಡಲಿದೆ ಎಂದು ತಿಳಿಸಿದರು. ಏನಿದು ಸಾಗರಮಾಲಾ ಯೋಜನೆ:
* ಸರಕಾರವು 2016ರಲ್ಲಿ ಸಾಗರಮಾಲಾ ಯೋಜನೆಯನ್ನು ಬಂದರುಗಳ ಅಭಿವೃದ್ಧಿಗಾಗಿ ಪ್ರಕಟಣೆ ಮಾಡಿತ್ತು.
* ಈ ಸಾಗರಮಾಲಾ ಯೋಜನೆಯ ಕಾರ್ಯಕ್ರಮದ ಅಡಿಯಲ್ಲಿ 2015 2035ರ ಅವಧಿಯಲ್ಲಿ 6 ಲಕ್ಷ.ಕೋಟಿ.ರೂ.ಗಳ ವೆಚ್ಚದಲ್ಲಿ 574

ಯೋಜನೆಗಳನ್ನು ಅನುಷ್ಠಾನಕ್ಕಾಗಿ ತರಲಾಗುವದು.
* ಸದ್ಯ ಬಂದರುಗಳಲ್ಲಿನ ಮೂಲಸೌಕರ್ಯಗಳನ್ನು ಉನ್ನತೀಕರಿಸುವದು ಮತ್ತು ಮುಂದಿನ ಪೀಳಿಗೆಯ ಮೂಲಸೌಕರ್ಯಗಳನ್ನು ಸೃಷ್ಟಿಸುವುದು ಯೋಜನೆಯ ಆದ್ಯತೆ ಆಗಿದೆ.
* ಪ್ರಸ್ತುತ ಈ ಯೋಜನೆಯಡಿಯಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿರುವ ಬಂದರುಗಳು ಮಹಾರಾಷ್ಟ್ರದ ವಾಧ್ವಾನ್, ಒಡಿಶಾದ ಪಾರಾದೀಪ್ ಮತ್ತು ಗುಜರಾತಿನ ದೀನದಯಾಳ್ ನಲ್ಲಿ ಬೃಹತ್ ಬಂದರುಗಳು.
* ಸರಕಾರವು 2030ರ ವೇಳೆಗೆ 23 ಜಲಮಾರ್ಗಗಳ ಕಾರ್ಯಾಚರಣೆಯ ಗುರಿಯನ್ನು ಹೊಂದಿದೆ.
* ಬಂದರುಗಳಲ್ಲಿ ಪರಿಣಾಮಕಾರಿ ಪ್ರಾದೇಶಿಕ ವ್ಯಾಪಾರ ಮತ್ತು ಸಹಕಾರಗಳನ್ನು ಹೆಚ್ಚಿಸಲು ಬಾಂಗ್ಲಾದೇಶ, ನೇಪಾಳ, ಭೂತಾನ ಮತ್ತು ಮ್ಯಾನ್ಮಾರ್‌ನೊಂದಿಗೆ ಪ್ರಾದೇಶಿಕ ಸಂಪರ್ಕಕ್ಕಾಗಿ ಪೂರ್ವ ಜಲಮಾರ್ಗ ಸಂಪರ್ಕ ಜಾಲವನ್ನು ಅಭಿವೃದ್ಧಿಪಡಿಸಲಾಗುವದು ಎಂದು ತಿಳಿಸಲಾಗಿದೆ.

## 04- 03- 2021

### 'ಸಂಸದ್ ಟಿವಿ' ನೂತನ ವಾಹಿನಿಗೆ ಚಾಲನೆ




* ರಾಜ್ಯಸಭಾ ಟಿವಿ ಹಾಗೂ ಲೋಕಸಭಾ ಟಿವಿ ಇದೀಗ ಒಗ್ಗೂಡಿಸಿ "ಸಂಸದ್ ಟಿವಿ" ಎಂಬ ನೂತನ ಹೆಸರಿನ ನೂತನ ವಾಹಿನಿಯನ್ನು ಆರಂಭಿಸಲಾಗಿದೆ.
* ಈ ನೂತನ ವಾಹಿನಿಯಲ್ಲಿ ಲೋಕಸಭೆ ಕಲಾಪಗನ್ನು ಹಿಂದಿ ಭಾಷೆಯಲ್ಲಿಯೂ ಹಾಗು ರಾಜ್ಯಸಭೆ ಕಲಾಪಗಳು ಇಂಗ್ಲಿಷ್ ಭಾಷೆಯಲ್ಲಿಯೂ ಪ್ರಸಾರ ಮಾಡಲಾಗುವದು.
*'ಸಂಸದ್ ಟಿವಿ'ವಾಹಿನಿಯ ಸಿಇಒ ಆಗಿ ನಿವೃತ್ತ ಐಎಎಸ್ ಅಧಿಕಾರಿ ರವಿ ಕಪೂರ್ ಅವರನ್ನು ಒಂದು ವರ್ಷದ ಅವಧಿಗೆ ನೇಮಕ ಮಾಡಲಾಗಿದೆ.
* ಲೋಕಸಭಾ ಟಿವಿ ಹಾಗೂ ರಾಜ್ಯಸಭಾ ಟಿವಿಗಳನ್ನು ಒಗ್ಗೂಡಿಸುವ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಹಾಗೂ ರಾಜ್ಯಸಭಾ ಸ್ಪೀಕರ್ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಜಂಟಿಯಾಗಿ ಸಹಮತದಿಂದ ತೀರ್ಮಾನಿಸಿದರು.

### ಮೊದಲ ಬಾರಿಗೆ ಪೊಲೀಸ್ ಇಲಾಖೆಗೆ ತೃತೀಯ ಲಿಂಗಿಗಳನ್ನು ನಿಯೋಜಿಸಿಕೊಂಡ ಛತ್ತೀಸ್‌ಗಡ



* ಛತ್ತೀಸ್‌ಗಡ ರಾಜ್ಯ ಪೊಲೀಸ್ ಇಲಾಖೆಯು ಇದೆ ಮೊದಲಬಾರಿಗೆ ಹದಿಮೂರು ತೃತೀಯ ಲಿಂಗಿಗಳನ್ನು ಕಾನ್‌ಸ್ಟೆಬಲ್‌ಗಳಾಗಿ ನಿಯೋಜಿಸಿಕೊಳ್ಳುವ ಮೂಲಕ ಮಾದರಿಯಾಗಿದೆ.
* ಇತ್ತೀಚಿಗೆ ಕಾನ್‌ಸ್ಟೆಬಲ್‌ನೇಮಕಾತಿ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಛತ್ತೀಸ್ ಗಡ ರಾಜ್ಯದ ನಾಲ್ಕು ಜಿಲ್ಲೆಗಳಿಗೆ ಒಟ್ಟು 13 ತೃತೀಯ ಲಿಂಗಿಗಳನ್ನು ಕಾನ್‌ಸ್ಟೆಬಲ್‌ಗಳಾಗಿ ಆಯ್ಕೆಯಾಗಿದ್ದಾರೆ.
* ಛತ್ತೀಸ್‌ಗಡದ ಹೊರತಾಗಿ ಈ ಮೊದಲು ತಮಿಳುನಾಡಿನಲ್ಲಿ ಒಬ್ಬರು ಹಾಗೂ ರಾಜಸ್ಥಾನದಲ್ಲಿ ಒಬ್ಬರು ತೃತೀಯ ಲಿಂಗಿ ಕಾನ್‌ಸ್ಟೆಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.
* ಇನ್ನು ಬಿಹಾರ ಸರ್ಕಾರ ಕೂಡ ತೃತೀಯ ಲಿಂಗಿಗಳನ್ನು ನೇಮಕ ಮಾಡಿಕೊಳ್ಳುವುದಾಗಿ ತಿಳಿಸಿದೆ.
* ಇನ್ನು ಸಂವಿಧಾನದಲ್ಲಿ ತೃತೀಯ ಲಿಂಗಿಗಳಿಗೆ ಮೂಲಭೂತ ಹಕ್ಕುಗಳ ಮೇಲೆ ಸಮಾನ ಅವಕಾಶವಿರುವುದಾಗಿ ಸುಪ್ರೀಂಕೋರ್ಟ್ 2014ರಲ್ಲಿ ಆದೇಶಿಸಿತ್ತು.

### ನೇಪಾಳ, ಭೂತಾನ್ ಗಡಿಗೆ 12 ಹೊಸ ಬೆಟಾಲಿಯನ್ ಸೇರ್ಪಡೆ




ಭಾರತೀಯ ಸೇನಾಪಡೆಯು ಭಾರತದ ನೆರೆಯ ರಾಷ್ಟ್ರಗಳಾದ ನೇಪಾಳ, ಭೂತಾನ್ ಮತ್ತು ಟಿಬೆಟ್ ಜತೆಗಿನ ಟ್ರೈಜಂಕ್ಷನ್ ಗಡಿಯಲ್ಲಿ ನೂತನವಾಗಿ ಸಶಸ್ತ್ರ ಸೇನಾ ಬಲಕ್ಕೆ (SSB) ಒಟ್ಟು 12 ಸೇನಾ ತುಕಡಿ(ಬಟಾಲಿಯನ್)ಗಳನ್ನು ಸೇರ್ಪಡೆಗೊಳಿಸಿದೆ.
* 12 ತುಕಡಿಗಳಲ್ಲಿ ಒಟ್ಟು 13 ಸಾವಿರ ಯೋಧರು ರಾಷ್ಟ್ರಕ್ಕೆ ಭದ್ರತೆ ನೀಡಲಿದ್ದಾರೆ.
* ಪ್ರಸ್ತುತ ನೇಪಾಳ (1,751 ಕಿ.ಮೀ.) ಮತ್ತು ಭೂತಾನ್ (699 ಕಿ.ಮೀ.) ಗಡಿಯಲ್ಲಿ SSBಯ 90 ಸಾವಿರ ಯೋಧರು ರಕ್ಷಣೆ ನಿರ್ವಹಿಸುತ್ತಿದ್ದಾರೆ.

### ರಾಜಕೀಯ ನಿವೃತ್ತಿ ಘೋಷಿಸಿದ ಶಶಿಕಲಾ ನಟರಾಜನ್



ಆದಾಯ ಮೀರಿ ಆಸ್ತಿ ಗಳಿಕೆ ವಿವಾದದಲ್ಲಿ ಕರ್ನಾಟಕದ ಜೈಲಿನಲ್ಲಿ ಒಟ್ಟು ನಾಲ್ಕು ವರ್ಷಗಳ ಸೆರೆವಾಸ ಅನುಭವಿಸಿ ಇತ್ತೀಚಿಗೆ ಬಿಡುಗಡೆಗೊಂಡ ಎಐಎಡಿಎಂಕೆ ಮಾಜಿ ನಾಯಕಿ ವಿ.ಕೆ. ಶಶಿಕಲಾ ನಟರಾಜನ್ ಅವರು ರಾಜಕೀಯ ನಿವೃತ್ತಿಯನ್ನು ಘೋಷಿಸಿದ್ದಾರೆ.
* ಇವರು ತಮಿಳುನಾಡು ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ಅತ್ಯಾಪ್ತ ಗೆಳತಿಯಾಗಿದ್ದರು.
* ಇನ್ನೇನು ಕೆಲವೇ ದಿನಗಳಲ್ಲಿ ತಮಿಳುನಾಡು ವಿಧಾನಸಭೆಗೆ ಚುನಾವಣೆ ನಡೆಯಲಿದ್ದು ಎಐಎಡಿಎಂಕೆ ಪಕ್ಷದ ನಾಯಕತ್ವವನ್ನು ಇವರು ವಹಿಸುತ್ತಾರೆಂದುಊಹಿಸಲಾಗಿತ್ತಾದರೂ ಅವರ ಈ ನಡೆ ಕುತೂಹಲಕ್ಕೆ ಕಾರಣವಾಗಿದೆ.

### ಭಾರತದ ಲಸಿಕೆ ಕೊವಾಕ್ಸಿನ್ 3 ನೇ ಹಂತದ ಪ್ರಯೋಗ ಶೇ 81ರಷ್ಟು ಯಶಸ್ವಿ




* ಹೈದರಾಬಾದ್ ಮೂಲದ ಔಷದ ತಯಾರಿಕಾ ಸಂಸ್ಥೆಯಾದ ಭಾರತ್ ಬಯೋಟೆಕ್ ಸಂಸ್ಥೆಯು ಅಭಿವೃದ್ಧಿ ಪಡಿಸಿರುವ ಕೋವಾಕ್ಸಿನ್ ಲಸಿಕೆ ತನ್ನ ಮೂರನೇ ಹಂತದಲ್ಲಿ ಪರೀಕ್ಷೆಯಲ್ಲಿ ಶೇಕಡಾ 81ರಷ್ಟು ಯಶಸ್ವಿಯಾಗಿದೆ.
* ಪ್ರಸ್ತುತ ಭಾರತದಲ್ಲಿ ಪುಣೆಯ ಸೆರಂ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೋವಿ ಶೀಲ್ಡ್ ಮತ್ತು ಹೈದರಾಬಾದ್ ಮೂಲದ ಭಾರತ್ ಬಯೊಟೆಕ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೊವಾಕ್ಸಿನ್ ಲಸಿಕೆಯನ್ನು ಬಳಕೆ ಮಾಡಲಾಗುತ್ತಿದೆ.
* ಈಗಾಗಲೇ ಭಾರತದಲ್ಲಿ ಮೊದಲ ಹಂತದ ಲಸಿಕೆ ಅಭಿಯಾನ ಪೂರ್ಣಗೊಂಡಿದ್ದು, ಇತ್ತೀಚಿಗೆ ಎರಡನೇ ಹಂತದಲ್ಲಿ 10 ಕೋಟಿ ಜನರಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ದೊರೆತಿದೆ.

## ರಮೇಶ್ ಜಾರಕಿಹೊಳಿ ಸಚಿವ ಸ್ಥಾನಕ್ಕೆ ರಾಜೀನಾಮೆ



ರಾಜ್ಯ ಸಚಿವಸಂಪುಟದ ಜಲಸಂಪನ್ಮೂಲ ಸಚಿವರಾಗಿರುವ ರಮೇಶ್ ಜಾರಕಿಹೊಳಿಯವರು ಇತ್ತೀಚಿಗೆ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದು, ರಾಜ್ಯ ರಾಜ್ಯಪಾಲ ವಜೂ ಭಾಯಿ ವಾಲಾ ಅವರು ರಮೇಶ್ ಜಾರಕಿಹೊಳಿಯವರು ರಾಜೀನಾಮೆಯನ್ನು ಅಧಿಕೃವಾಗಿ ಅಂಗೀಕರಿಸಿದ್ದಾರೆ.
* ಯುವತಿಯೊಂದಿಗಿನ ಲೈಂಗಿಕ ಸಂಪರ್ಕದ ಆರೋಪದ ಹಿನ್ನಲೆ ಇವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆನೀಡಿದ್ದಾರೆ.

# 05-03-2021

## ಅಮೇರಿಕಾದಿಂದ 2000 ಕೋಟಿ ಡಾಲರ್ ರಕ್ಷಣಾ ಸಾಮಗ್ರಿ ಖರೀದಿಸಿದ ಭಾರತ



ಅಮೇರಿಕಾದೇಶದಿಂದಭಾರತವುಒಟ್ಟು2,000ಕೋಟಿಡಾಲರ್(ಸುಮಾರು₹ 14,547.50 ಕೋಟಿ) ಮೊತ್ತದ ರಕ್ಷಣಾ ಸಾಮಗ್ರಿಗಳನ್ನು ಇತ್ತೀಚಿಗೆ ಖರೀದಿಸಿದೆ. ಈ ಮೂಲಕ ಭಾರತದ ಭದ್ರತೆ ಮತ್ತು ಸಾರ್ವಭೌಮತ್ವ ಕಾಪಾಡಲು ಬೆಂಬಲ ನೀಡಿರುವುದಕ್ಕೆ ಅಮೇರಿಕಾ ಬದ್ಧವಾಗಿದೆ ಎಂದು ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರ ನೆಡ್ ಪ್ರೈಸ್ ತಿಳಿಸಿದ್ದಾರೆ.

## ಒಂದೇ ಓವರ್ ನಲ್ಲಿ 36 ರನ್ ಸಿಡಿಸಿದ ಪೊಲಾರ್ಡ್



ವೆಸ್ಟ್ ಇಂಡೀಸ್ ನ ನಾಯಕ ಕೀರನ್ ಪೊಲಾರ್ಡ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ನಲ್ಲಿ ಒಂದು ಓವರ್ ನಲ್ಲಿ 6 ಸಿಕ್ಸರ್ ಬಾರಿಸುವ ಮೂಲಕ ಒಂದು ಓವರ್ ನಲ್ಲಿ 6 ಸಿಕ್ಸರ್ ಸಿಡಿಸಿದ ವಿಶ್ವದ ಮೂರನೇ ಬ್ಯಾಟ್ಸ್ ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.
* ಇತ್ತೀಚಿಗೆ ಶ್ರೀಲಂಕಾದ ವಿರುದ್ಧ ನಡೆದ ಮೊದಲ ಟಿ20 ಪಂದ್ಯದಲ್ಲಿ ಶ್ರೀಲಂಕಾದ ಅಕಿಲಾ ಧನಂಜಯ ಅವರ ಓವರ್ ನಲ್ಲಿ 6ಸಿಕ್ಸರ್ ಸಿಡಿಸುವ ಮೂಲಕ ಪೊಲಾರ್ಡ್ ಈ ಸಾಧನೆ ಮಾಡಿದ್ದಾರೆ.
* 2007ರಲ್ಲಿ ಇಂಗ್ಲೆಂಡ್ ವಿರುದ್ಧ ಟಿ20 ವಿಶ್ವಕಪ್ ಪದ್ಯದಲ್ಲಿ ಭಾರತದ ಯುವರಾಜ್ ಸಿಂಗ್ ಈ ಸಾಧನೆ ಮಾಡಿದ್ದರು.

## ಸುಲಭ ಜೀವನ ಸೂಚ್ಯಂಕ ವಾಸ ಯೋಗ್ಯ ನಗರಗಳಲ್ಲಿ ಬೆಂಗಳೂರಿಗೆ ಮೊದಲ ಸ್ಥಾನ



* ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಇತ್ತೀಚಿಗೆ ಸುಲಲಿತ ಜೀವನ ಸೂಚಂಕ ಪಟ್ಟಿ ಸಿದ್ಧಪಡಿಸಿದ್ದು, ಸುಲಲಿತ ಸುಲಭ ಜೀವನ ಸೂಚ್ಯಂಕದಲ್ಲಿ ವಾಸಕ್ಕೆ ಹೆಚ್ಚು ಯೋಗ್ಯವಾದ ನಗರಗಳ ಪಟ್ಟಿಯಲ್ಲಿ ರಾಜ್ಯರಾಜಧಾನಿ ಬೆಂಗಳೂರು ಮೊದಲನೇ ಸ್ಥಾನ ಪಡೆದಿದೆ.
* ಇನ್ನು ರಾಷ್ಟ್ರ ರಾಜಧಾನಿ ದೆಹಲಿಯು 13 ನೇ ಸ್ಥಾನ ಪಡೆದುಕೊಂಡಿದೆ.
* ಇನ್ನುಳಿದಂತೆ ಪುಣೆ, ಅಹಮದಾಬಾದ್, ಚೆನ್ನೈ, ಸೂರತ್ ನಗರಗಳುಕ್ರಮವಾಗಿ 2 ರಿಂದ 5 ನೇ ಸ್ಥಾನ ಪಡೆದುಕೊಂಡಿವೆ.
* ರಾಜ್ಯದ ಅವಳಿನಗರವಾದ ಹುಬ್ಬಳ್ಳಿ ಧಾರವಾಡ 37 ನೇ ಸ್ಥಾನ ಪಡೆದುಕೊಂಡಿದೆ.
* ಉಳಿದಂತೆ 10 ಲಕ್ಷಕ್ಕಿಂತ ಕಡಿಮೆ ಜನರು ಇರುವ ನಗರಗಳ ಪಟ್ಟಿಯಲ್ಲಿ ರಾಜ್ಯದಿಂದ ದಾವಣಗೆರೆ, ಬೆಳಗಾವಿ, ಶಿವಮೊಗ್ಗ, ಮಂಗಳೂರು, ತುಮಕೂರು ನಗರಗಳು ಸ್ಥಾನ ಪಡೆದುಕೊಂಡಿವೆ.
* ಸುಲಲಿತ ಜೀವನ ಸೂಚ್ಯಂಕವನ್ನು ಆರ್ಥಿಕ ಸಾಮರ್ಥ್ಯ, ಜೀವನದ ಗುಣಮಟ್ಟ, ಸುಸ್ಥಿರತೆ, ನಾಗರಿಕ ಗ್ರಹಿಕೆ ಸಮೀಕ್ಷೆ ಸೇರಿ ಹಲವು ಅಂಶಗಳನ್ನು ಗಮನದಲ್ಲಿರಿಸಿಕೊಂಡು ತಯಾರಿಸಲಾಗಿದೆ.

## ಕೃಷಿ ಕ್ಷೇತ್ರದಲ್ಲಿ ಸಹಕಾರಕ್ಕಾಗಿ ಫಿಜಿಯೊಂದಿಗೆ ಭಾರತ ಒಪ್ಪಂದ



* ಭಾರತ ಸರ್ಕಾರವು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಸಹಕಾರಕ್ಕಾಗಿ ಫಿಜಿ ರಾಷ್ಟ್ರದೊಂದಿಗೆ ಒಪ್ಪಂದ ಮಾಡಿಕೊಂಡಿದೆ.
* ಪ್ರಧಾನಿ ನರೇಂದ್ರ ಮೋದಿ ಯವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ, ಕೇಂದ್ರ ಕೃಷಿ ಸಚಿವಾಲಯ ಮತ್ತು ಫಿಜಿ ಗಣರಾಜ್ಯದ ಕೃಷಿ ಸಚಿವಾಲಯಗಳು ತಿಳುವಳಿಕೆ ಒಪ್ಪಂದಕ್ಕೆ ಅನುಮೋದನೆ ನೀಡಲಾಯಿತು.
* ಭಾರತ ಮತ್ತು ಫಿಜಿ ನಡುವಿನ ಒಪ್ಪಂದ ಎರಡೂ ದೇಶಗಳ ಖಾಸಗಿ ವಲಯಗಳ ನಡುವೆ ಜಂಟಿ ಉದ್ಯಮಗಳ ಪ್ರಚಾರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ನೀಡುತ್ತವೆ.
* ಈ ಒಪ್ಪಂದದ ಪ್ರಕಾರ ಕೃಷಿ ಮತ್ತು ಸರಕುಗಳ ಮೌಲ್ಯವರ್ಧನೆ ಮತ್ತು ಸಂಸ್ಕರಣಾ ಕ್ಷೇತ್ರದಲ್ಲಿ ಹೂಡಿಕೆಯ ಉತ್ತೇಜನಕ್ಕಾಗಿ ಉಭಯ ದೇಶಗಳು ಜಂಟಿಯಾಗಿ ಕೆಲಸ ಮಾಡಲಿವೆ.

# 06- 03- 2021

## ಮುತ್ತೂಟ್ ಕಂಪನಿ ಮಾಲೀಕ ಎಂಜಿ ಜಾರ್ಜ್ ಮುತ್ತೂಟ್ ನಿಧನ





ದೇಶದ ಪ್ರಮುಖ ಹಣಕಾಸು ಸಂಸ್ಥೆಯಾದ ಮಾಲೀಕ ಮುತ್ತೂಟ್ ಫೈನಾನ್ಸ್‌ನ ಸಂಸ್ಥೆಯ ಮಾಲೀಕ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿದ್ದ MG ಜಾರ್ಜ್ ಮುತ್ತೂಟ್ ಅವರು ಇತ್ತೀಚಿಗೆ ತಮ್ಮ 68 ನೇ ವಯಸ್ಸಿನಲ್ಲಿ ನಿಧನರಾದರು.
* ಇವರು ಮೂಲತಃ ಕೇರಳದ ಕೊಚ್ಚಿಯವರಾಗಿದ್ದು, ಬ್ಯಾಂಕೇತರ ಫೈನಾನ್ಸ್‌ನಲ್ಲಿ ಅತಿ ಹೆಚ್ಚು ಗೋಲ್ಡ್ ಲೋನ್ ನೀಡುವ ಪ್ರಮುಖ ಸಂಸ್ಥೆಯಾಗಿ ಮುತ್ತೂಟ್ ಫೈನಾನ್ಸ್‌ನ್ನು ಬೆಳೆಸಿದ್ದರು.
* ಮುತ್ತೂಟ್ ಫೈನಾನ್ಸ್ ಸಂಸ್ಥೆಯು ಅವರು 2011 ಮತ್ತು 2019 ರಲ್ಲಿ ಭಾರತದ 50 ನೇ ಅತಿ ದೊಡ್ಡ ಶ್ರೀಮಂತ ಸಂಸ್ಥೆಯಾಗಿ ಫೋರ್ಬ್ ಏಷಿಯಾ ನಿಯತಕಾಲಿಕೆ ವರದಿಮಾಡಿತ್ತು.

## DRDO ದಿಂದ SFDR ತಂತ್ರಜ್ಞಾನದ ಕ್ಷಿಪಣಿಗಳ ಹಾರಾಟ ಯಶಸ್ವಿ



ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಅಭಿವೃದ್ಧಿಪಡಿಸಿದ ಎಸ್‌ಎಫ್‌ಡಿಆರ್ (ಸಾಲಿಡ್ ಫ್ಯುಯಲ್ ಡಕ್ಟೆಡ್ ರಾಮ್‌ಜೆಟ್) ತಂತ್ರಜ್ಞಾನ ಆಧರಿತ ಯುದ್ಧವಿಮಾನದ ಪರೀಕ್ಷಾರ್ಥ ಹಾರಾಟವನ್ನು ಇತ್ತೀಚಿಗೆ ಒಡಿಶಾ ರಾಜ್ಯದ ಬಾಲಾಸೋರ್ ನಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಯಿತು.
* ಚಾಂದಿಪುರ್ ಉಡಾವಣಾ ಕೇಂದ್ರದಲ್ಲಿ ಈ ಪ್ರಯೋಗ ನಡೆಸಲಾಯಿತು. ಇನ್ನು ಈ ಪ್ರಯೋಗದ ಮೂಲಕ DRDO ಈಗ ದೂರಗಾಮಿ ಗುರಿಯ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯವನ್ನು ಪಡೆದಿರುವುದಾಗಿ ಮೂಲಗಳು ತಿಳಿಸಿದವು.

## ಖ್ಯಾತ ಕವಿ ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟರು ನಿಧನ




ಖ್ಯಾತ ಕವಿ ಹಾಗೂ ಕನ್ನಡ ಸಾಹಿತ್ಯ ಲೋಕದಲ್ಲಿ, 'ಎನ್.ಎಸ್. ಎಲ್ '(NSL) ಎಂದೇ ಖ್ಯಾತಿ ಪಡೆದಿರುವ ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಇತ್ತೀಚಿಗೆ ನಿಧನರಾದರು.
* ಇವರು 1936ರ ನವೆಂಬರ್ 29ರಂದು ಶಿವಮೊಗ್ಗದಲ್ಲಿ ಜನಿಸಿದ್ದರು. ಇವರ ತಂದೆ ಶಿವರಾಮ ಭಟ್ಟ, ತಾಯಿ ಮೂಕಾಂಬಿಕೆ.
* ಇವರು MA ಪದವಿ ಯನ್ನು ಪಡೆದುಕೊಂಡಿದ್ದು, ಭಾಷಾಶಾಸ್ತ್ರ ಸಂಶೋಧಕರಾಗಿ ಕೆಲ ಕಾಲ ಕೆಲಸ ಮಾಡಿ ನಂತರದ ದಿನಗಳಲ್ಲಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ತಮ್ಮ ಸೇವೆ ಸಲ್ಲಿಸಿದ್ದರು.
* ಎನ್.ಎಸ್. ಎಲ್ (NSL) ಕನ್ನಡ ಸಾಹಿತ್ಯದ ಅಗ್ರಮಾನ್ಯ ಕವಿ, ಜನಪ್ರಿಯ ಪ್ರಧ್ಯಾಪಕರು. ಇವರು ಕನ್ನಡ ಸಂಸ್ಕೃತ ಇಂಗ್ಲೀಷ್ ಭಾಷೆಗಳಲ್ಲಿ ಕೃತಿರಚನೆ ಮಾಡಿದ್ದಾರೆ.
* ಇವರ ಪ್ರಮುಖ ಕವನ ಸಂಕಲನಗಳು 'ನಿನ್ನೆಗೆ ನನ್ನ ಮಾತು', ಸುಳಿ, ದೀಪಿಕಾ, ಬಾರೋ ವಸಂತ, ಚಿತ್ರಕೂಟ, ಹೊಳೆ ಸಾಲಿನ ಮರ, ಅರುಣಗೀತೆ ಸೇರಿ ಹಲವು ಕವನ ಸಂಕಲನಗಳನ್ನು ರಚಿಸಿದ್ದಾರೆ.
* ಇವರ 'ಹೊರಳು ದಾರಿಯಲ್ಲಿ ಕಾವ್ಯ' ಈ 'ವಿಮರ್ಶಾಗ್ರಂಥ'ಕ್ಕೆ 1974ರಲ್ಲಿ 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಲಭಿಸಿದೆ.


## ಹೊಸ ಕಾರುಗಳಿಗೆ ಇನ್ನು ಏರ್‌ಬ್ಯಾಗ್ ಕಡ್ಡಾಯ : ಕೇಂದ್ರ ಸರ್ಕಾರ



* ಇತ್ತೀಚಿಗೆ ಕೇಂದ್ರ ಸರ್ಕಾರವು ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ನೂತನ ಕಾರುಗಳ ಮುಂದಿನ ಸೀಟುಗಳಿಗೆ ಡ್ಯುಯಲ್ ಏರ್‌ಬ್ಯಾಗ್ ಕಡ್ಡಾಯಗೊಳಿಸುವ ನಿರ್ಧಾರವನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ.
* ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಈ ಹೊಸ ನಿಯಮಗಳನ್ನು ಘೋಷಿಸಿದ್ದು, ಬರುವ ಏಪ್ರಿಲ್ ತಿಂಗಳ 1 ನೇ ತಾರೀಕಿನಿಂದ ಎಲ್ಲಾ ಹೊಸ ಕಾರುಗಳಲ್ಲಿ ಡ್ಯುಯಲ್ ಏರ್‌ಬ್ಯಾಗ್ ಕಡ್ಡಾಯಗೊಳಿಸಲಿದೆ.
* ಇನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಕಾರುಗಳನ್ನು 2021ರ ಆಗಸ್ಟ್ 31 ರಿಂದ ಡ್ಯುಯಲ್ ಏರ್‌ಬ್ಯಾಗ್‌ಗಳೊಂದಿಗೆ ಮಾರಾಟ ಮಾಡಬೇಕಾಗುತ್ತದೆ.

## 07- 03- 2021

### ಕೃಷಿ ವಿಜ್ಞಾನಿ ಡಾ. ಎಂ. ಮಹಾದೇವಪ್ಪ ಇನ್ನಿಲ್ಲ



* ಕೃಷಿ ವಿಜ್ಞಾನಿಯಾಗಿದ್ದ ಡಾ. ಎಂ. ಮಹಾದೇವಪ್ಪನವರು ಇತ್ತೀಚಿಗೆ ತಮ್ಮ 83ನೇ ವಯಸ್ಸಿನಲ್ಲಿ ವಿಧಿವಶರಾದರು.
* ಡಾ. ಎಂ. ಮಹಾದೇವಪ್ಪನವರು 1937ರ ಆಗಸ್ಟ್. 4ರಂದು ಚಾಮರಾಜನಗರ ಜಿಲ್ಲೆಯ ಮಾದಾಪುರದಲ್ಲಿ ಜನಿಸಿದ್ದರು, ಇವರು 1960ರಲ್ಲಿ ಹೆಬ್ಬಾಳಿನ ಕೃಷಿ ಕಾಲೇಜಿನಲ್ಲಿ ಪದವಿ ಪಡೆದು ಸತತವಾಗಿ 40 ವರ್ಷಗಳವರೆಗೆ ಅಧ್ಯಯನ, ಬೋಧನೆ, ಸಂಶೋಧನೆ, ಆಡಳಿತದಲ್ಲಿ ಅನೇಕ ಸಾಧನೆ ಮಾಡಿದ್ದಾರೆ.
* ಇವರು 'ಮಧು, ಮಂಗಳ, ಪುಷ್ಪ, ಪ್ರಗತಿ, ವಿಕ್ರಮ, ಮುಕ್ತಿ,ಬಿಳಿಮುಕ್ತಿ,ಜಿ.ಎಂ.ಕೆ. 17' ಹೀಗೆ ಹಲವು ಭತ್ತದ ತಳಿಗಳನ್ನು ಸಂಶೋಧಿಸಿದ್ದಾರೆ.
* ರಾಷ್ಟ್ರದಲ್ಲೇ ಮೊದಲ ಬಾರಿಗೆ ಭತ್ತದಲ್ಲಿ ಹೈಬ್ರಿಡ್ (ಮಿಶ್ರ) ತಳಿಯನ್ನು ಸಂಶೋಧಿಸಿ ಭತ್ತದ ಮಹಾದೇವಪ್ಪ ಎಂದೇ ಪ್ರಖ್ಯಾತರಾಗಿ ಪದ್ಮಶ್ರೀ ಪ್ರಶಸ್ತಿ ಪಡೆದುಕೊಂಡಿದ್ದರು.
* ಡಾ. ಎಂ. ಮಹಾದೇವಪ್ಪನವರಿಗೆ ಕೃಷಿ ಕ್ಷೇತ್ರದ ಸಾಧನೆಗಾಗಿ ಕೇಂದ್ರ ಸರಕಾರವು ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.
* ಧಾರವಾಡದ ಕೃಷಿ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಬಾರಿಗೆ ಎರಡು ಬಾರಿ ಕುಲಪತಿಗಳಾಗಿದ್ದರು. ಡಾ. ಎಂ. ಮಹಾದೇವಪ್ಪನವರು ಪಡೆದ ಪ್ರಶಸ್ತಿಗಳ ಮಾಹಿತಿ:
* 2005ರಲ್ಲಿ ಪದ್ಮಶ್ರೀ, 2014ರಲ್ಲಿ ಪದ್ಮಭೂಷಣ, 1981ರಲ್ಲಿ ಹೂಕರ್ ಪ್ರಶಸ್ತಿ, 1984ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1999ರಲ್ಲಿ ಭಾರತ ರತ್ನ ಎಂ.ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ, 1996ರಲ್ಲಿ ಸರ್ ಚೋಟುರಾಂ, 2009ರಲ್ಲಿ ಜೀವಮಾನ ಸಾಧನೆ, ಇನ್ನು ಹೀಗೆ ಹಲವು ಪ್ರಶಸ್ತಿಗಳನ್ನೂ ಪಡೆದುಕೊಂಡಿದ್ದಾರೆ.

### 75ನೇ ಸ್ವಾತಂತ್ರ್ಯೋತ್ಸವ ಸಮಿತಿಯಲ್ಲಿ 259 ಗಣ್ಯರಿಗೆ ಸ್ಥಾನ



* ಭಾರತವು ಸ್ವಾತಂತ್ರ್ಯ ಪಡೆದು ಬರುವ ವರ್ಷ ಅಂದರೆ 2022ಕ್ಕೆ 75 ವರ್ಷ ಪೂರ್ಣಗೊಳಿಸುತ್ತಿರುವ ಈ ಹಿನ್ನಲೆ 75ನೇ ಸ್ವಾತಂತ್ರ್ಯೋತ್ಸವನ್ನು ಅದ್ದೂರಿಯಾಗಿ ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.
* ಈ ಐತಿಹಾಸಿಕ ಸ್ವಾತಂತ್ರ್ಯೋತ್ಸವ ದಿನವನ್ನು ಸಂಭ್ರಮದಿಂದ ಆಚರಣೆ ಮಾಡಲು ಕೇಂದ್ರ ಸರಕಾರವು ಒಟ್ಟು 259 ಗಣ್ಯ ಸದಸ್ಯರನ್ನೊಳಗೊಂಡ ಸಮಿತಿ ರಚಿಸಿದ್ದು, ಈ ಸಮಿತಿಯಲ್ಲಿ ಕೇಂದ್ರ ಸಚಿವರು, ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಖ್ಯಾತ ಕಲಾವಿದರು ಸದಸ್ಯರನ್ನಾಗಿ ಮಾಡಲಾಗಿದೆ. ಈ ಸಮಿತಿಯ ದೇಶದ ಹಲವು ಪ್ರಮುಖರನ್ನು ಒಳಗೊಂಡಿದೆ:
* ಈ ಸಮಿತಿಯ ಅಧ್ಯಕ್ಷತೆಯನ್ನು ಪ್ರಧಾನಿ ನರೇಂದ್ರ ಮೋದಿ ವಹಿಸಿಕೊಳ್ಳಲಿದ್ದಾರೆ, ಮತ್ತು ಸುಪ್ರೀಂ ಮುಖ್ಯ ನ್ಯಾಯಮೂರ್ತಿಗಳಾದ ಎಸ್.ಎ. ಬೋಬ್ಡೆ, ರಂಜನ್ ಗೋಗೊಯ್, ಕೆ. ಪರಾಶರನ್, ಸೋಲಿ ಸೊರಾಬ್ಜಿ ಅವರಿಗೂ ಸ್ಥಾನ ನೀಡಲಾಗಿದೆ, ಇದರ ಜೊತೆಯಲ್ಲಿ ಕೇಂದ್ರ ಸಚಿವರು ಮತ್ತು ಎಲ್ಲ ರಾಜ್ಯಗಳ ರಾಜ್ಯಪಾಲರು ಮುಖ್ಯಮಂತ್ರಿಗಳು, ರಾಜಕೀಯ ಧುರೀಣರೂ ಕೂಡ ಈ ಸಮಿತಿಯಲ್ಲಿ ಇರಲಿದ್ದಾರೆ. ಈ ಸಮಿತಿಯಲ್ಲಿ ಸ್ಥಾನ ಪಡೆದ ಕನ್ನಡಿಗರು :
* ಮಾಜಿ ಪ್ರಧಾನಿ ದೇವೇಗೌಡ, ಧರ್ಮಸ್ಥಳ ಧರ್ಮಾಧಿಕಾರಿ ಡಾ| ವೀರೇಂದ್ರ ಹೆಗ್ಗಡೆ, ಕ್ರೀಡಾ ಪಟುಗಳಾದ ಪ್ರಕಾಶ್ ಪಡುಕೋಣೆ, ರಾಹುಲ್ ದ್ರಾವಿಡ್, ಅಧ್ಯಾತ್ಮ ಕ್ಷೇತ್ರದಿಂದ ಶ್ರೀ ರವಿಶಂಕರ್ ಗುರೂಜಿ, ಕೇಂದ್ರ ಸಚಿವರಾದ ಸದಾನಂದ ಗೌಡ, ಪ್ರಹ್ಲಾದ್ ಜೋಶಿ ಹೀಗೆ ಹಲವು ಗಣ್ಯರು ಸ್ಥಾನ ಪಡೆದುಕೊಂಡಿದ್ದಾರೆ.

### ಪ್ರತ್ಯೇಕ ಶಿಕ್ಷಣ ಮಂಡಳಿ ರಚಿಸಲು ಮುಂದಾದ ದೆಹಲಿ ಸರ್ಕಾರ



* ರಾಷ್ಟ್ರ ರಾಜ್ಯಧಾನಿ ದೆಹಲಿ ಇದೀಗ ತನ್ನದೇ ಆದ ಪ್ರತ್ಯೇಕ ಶಿಕ್ಷಣ ಮಂಡಳಿಯನ್ನ ಹೊಂದಲಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್'ರವರು ಇತ್ತೀಚಿಗೆ ಘೋಷಿಸಿದ್ದಾರೆ.
* ಪ್ರಸ್ತುತ ಇದೀಗ ದೆಹಲಿಯಲ್ಲಿ ಸಿಬಿಎಸ್ಇ / ಐಸಿಎಸ್ಇ ಎಂಬ ಶಿಕ್ಷಣ ಮಂಡಳಿಗಳು ಇವೆ.
* ದೆಹಲಿಯಲ್ಲಿ ತನ್ನದೇ ಆದ ಶಿಕ್ಷಣ ಮಂಡಳಿಯನ್ನು ರಚಿಸಲು ಅರವಿಂದ್ ಕೇಜ್ರಿವಾಲ್ ಕ್ಯಾಬಿನೆಟ್ ಅನುಮೋದನೆಯನ್ನು ಪಡೆದಿದೆ.
* ಇನ್ನು 2021  22 ರಿಂದ ಕೆಲವು ಶಾಲೆಗಳು ಹೊಸ ಮಂಡಳಿ ಅಡಿಯಲ್ಲಿ ಅಧ್ಯಯನ ಮಾಡಲಿರುವುದಾಗಿ ಕೇಜ್ರಿವಾಲ್ ಪತ್ರಿಕಾ ಘೋಷ್ಠಿಯಲ್ಲಿ ತಿಳಿಸಿದ್ದಾರೆ.
* ದೆಹಲಿ ಸರ್ಕಾರವು 1,000 ಕ್ಕೂ ಹೆಚ್ಚು ಶಾಲೆಗಳನ್ನು ನಡೆಸುತ್ತಿದ್ದು, ಇವೆಲ್ಲವೂ ಪ್ರಸ್ತುತ ಸಿಬಿಎಸ್ಇಗೆ ಸಂಯೋಜಿತವಾಗಿದ್ದು, ದೆಹಲಿಯ 2020 ರ ವಾರ್ಷಿಕ ಬಜೆಟ್ ಮಂಡಿಸುವಾಗ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಪ್ರತ್ಯೇಕ ರಾಜ್ಯ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಲು 62 ಕೋಟಿ ರೂ.ಗಳನ್ನು ಮೀಸಲಿರಿಸಿದ್ದಾರೆ.

### ಶೇಕಡಾ 41ರಷ್ಟು ತೆರಿಗೆ ಸಂಗ್ರಹವನ್ನು ರಾಜ್ಯಗಳಿಗೆ ನೀಡುವಂತೆ ಕೇಂದ್ರಕ್ಕೆ 15ನೇ ಹಣಕಾಸು ಆಯೋಗದ ಅಧ್ಯಕ್ಷ ಎನ್.ಕೆ. ಸಿಂಗ್ ಹೇಳಿಕೆ



* 15ನೇ ಹಣಕಾಸು ಆಯೋಗವು ತೆರಿಗೆ(TAX) ಹಂಚಿಕೆಯ ಶೇಕಡಾ 41ರಷ್ಟು ಭಾಗವನ್ನ ರಾಜ್ಯಗಳಿಗೆ ನೀಡಿ ಎಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಎಂದು ಆಯೋಗದ ಅಧ್ಯಕ್ಷ ಎನ್.ಕೆ. ಸಿಂಗ್ ಇತ್ತೀಚಿಗೆ ಮಾಹಿತಿ ನೀಡಿದ್ದಾರೆ.
* ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹದಲ್ಲಿ 41% ರಷ್ಟನ್ನ ರಾಜ್ಯಗಳಿಗೆ ನೀಡಬೇಕೆಂದು 15ನೇಹಣಕಾಸುಆಯೋಗವು2021 22ರಿಂದ 2025 26ರವರೆಗಿನಅವಧಿಯಲ್ಲಿ ಶಿಫಾರಸು ಮಾಡಿದೆ.
*ಈಹಿಂದೆಅಂದರೆ14ನೇಹಣಕಾಸುಆಯೋಗವು ಇಷ್ಟೇ ಪ್ರಮಾಣದಲ್ಲಿ ಶಿಫಾರಸು ತೆರಿಗೆ ನೀಡುವಂತೆ ಶಿಫಾರಸ್ಸು ಮಾಡಿತ್ತು.

## ಇಂಗ್ಲೆಂಡ್ ವಿರುದ್ಧ ನಡೆದ ಟೆಸ್ಟ್ ಪಂದ್ಯದಲ್ಲಿ ಜಯ ದಾಖಲಿಸಿದ ಭಾರತ



* ಅಹಮದಾಬಾದ್‌ನ ಮೊಟೆರಾದಲ್ಲಿ ನಡೆದ 4 ನೇ ಟೆಸ್ಟ್ ಸರಣಿಯಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಅಂತಿಮ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು 25 ರನ್‌ಗಳಿಂದ 3:1ರ ಅಂತರದಲ್ಲಿ ಸರಣಿ ಜಯ ದಾಖಲಿಸಿದೆ.
* ಭಾರತ ಕ್ರಿಕೆಟ್ ತಂಡವು ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಶಿಪ್ ಫೈನಲ್ ತಲುಪಿದೆ, ಮತ್ತು ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರ ಸ್ಥಾನದಲ್ಲಿ ಮುನ್ನಡೆಯುತಿದೆ.
* ಇನ್ನು ರಿಷಭ್ ಪಂತ್ 'ಮ್ಯಾನ್ ಆಫ್‌ದ ಮ್ಯಾಚ್' ಪ್ರಶಸ್ತಿ ಮತ್ತು ರವಿಚಂದ್ರ ಅಶ್ವಿನ್ 'ಮ್ಯಾನ್ ಆಫ್ ದ ಸೀರಿಸ್' ಪ್ರಶಸ್ತಿಯನ್ನು ಪಡೆದುಕೊಂಡರು.

## ವಿಶ್ವಾಸಮತ ಸಾಬೀತು ಪಡಿಸಿದ ಪಾಕ್ ಪ್ರಧಾನಿ ಇಮ್ರಾನ್ ಖಾನ್



* ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಸಂಸತ್ತಿನಲ್ಲಿ ವಿಶ್ವಾಸಮತ ಯಾಚಿಸಿ, ಬಹುಮತ ಪಡೆದುಕೊಂಡರು.
* ಪ್ರಸ್ತುತ ಪಾಕಿಸ್ತಾನ ಡೆಮಾಕ್ರಾಟಿಕ್ ಮೂವ್ಮೆಂಟ್ ಅಭ್ಯರ್ಥಿ ಯೂಸೂಫ್ ರಾಜಾ ಗಿಲಾನಿ ವಿರುದ್ಧ ಹಣಕಾಸು ಸಚಿವ ಅಬ್ದುಲ್ ಹಫೀಜ್ ಶೇಖ್ ಅವರು ಚುನಾವಣೆಯಲ್ಲಿ ಸೋಲು ಅನುಭವಿಸಿದ ಹಿನ್ನಲೆಯಲ್ಲಿ ಇಮ್ರಾನ್ ಖಾನ್ ಅವರಿಗೆ ಬಹುಮತ ಸಾಬೀತು ಪಡಿಸುವಂತೆ ವಿರೋದ ಪಕ್ಷದವರು ಕೇಳಿದ್ದರು.
* ಪ್ರಸ್ತುತ ಪಾಕಿಸ್ತಾನ ಸಂಸತ್ತ 342 ಸದಸ್ಯ ಬಲ ಹೊಂದಿದೆ ವಿಶ್ವಾಸಮತಗಳಿಸಲು 172 ಮತಗಳ ಅಗತ್ಯವಿತ್ತು, ಸದ್ಯ ಇಮ್ರಾನ ಖಾನ್'ರವರು 178 ಸದಸ್ಯರ ಬೆಂಬಲ ಪಡೆದುಕೊಂಡ ಬಹುಮತ ಸಾಬೀತಪಡಿಸಿದ್ದಾರೆ.

## 08-03-2021

## ನೀತಾ ಅಂಬಾನಿಯಿಂದ ಸ್ತ್ರೀ ಸಬಲೀಕರಣಕ್ಕಾಗಿ 'ಹರ್ ಸರ್ಕಲ್' ಯೋಜನೆ ಲೋಕಾರ್ಪಣೆ




* ಪ್ರತಿ ವರ್ಷ ಮಾರ್ಚ್ 8 ರಂದು ಜಗತ್ತಿನಾದ್ಯಂತ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತದೆ.
*ಅಂತಾರಾಷ್ಟ್ರೀಯ ಮಹಿಳಾ ದಿನದ ಹಿನ್ನಲೆಯಲ್ಲಿ ಸ್ತ್ರೀಸಬಲೀಕರಣಕ್ಕಾಗಿ 'ಹರ್ ಸರ್ಕಲ್' ಎಂಬ ಯೋಜನೆಯನ್ನು ರಿಲಯನ್ಸ್ ಫೌಂಡೇಶನ್ ಅಧ್ಯಕ್ಷೆ ನೀತಾ ಅಂಬಾನಿ ಲೋಕಾರ್ಪಣೆ ಮಾಡಿದರು.
* ಹರ್‌ಸರ್ಕಲ್.ಇನ್ ಎನ್ನುವದು ಒಂದು ಜಾಲತಾಣವಾಗಿದ್ದು, ಈ ಜಾಲತಾಣಕ್ಕೆ ನೀತಾ ಅಂಬಾನಿ ಚಾಲನೆ ನೀಡಿದರು.
* ಈ ಹರ್‌ಸರ್ಕಲ್ ಯೋಜನೆಯಿಂದ ಮಹಿಳೆಯರು ಮಹಿಳೆಯರ ಜೊತೆ ಸೇರಿ ಶ್ರಮಿಸಿದರೆ ಉತ್ತಮವಾದ ಕೆಲಸಗಳನ್ನು ಸಾಧಿಸಬಹುದು ಎಂದು ತಿಳಿಸಲಾಗಿದೆ.

## ಬಾಟಾದ ಸೇನಾ ಬ್ಯಾರಕ್ ನಲ್ಲಿ ಸ್ಫೋಟ



* ಈಕ್ವೆಟೋರಿಯಲ್ ಗಿನಿಯಲ್ಲಿ ಸೇನಾ ಬ್ಯಾರಕ್ ನಲ್ಲಿ ಸ್ಫೋಟ ಸಂಭವಿಸಿದ ಈ ಹಿನ್ನಲೆಯಲ್ಲಿ ಕನಿಷ್ಠ 20 ಮಂದಿ ಸಾವನ್ನಪ್ಪಿದ್ದಾರೆ, 600ಕ್ಕೂ ಹೆಚ್ಚು ಜನರು ಗಾಯಾಳುಗಳಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.
* ಬಾಟಾದ ಮೊಂಡೊಂಗ್ ನ್ಕುವಾಂಟೋಮಾದ ಸುತ್ತಮುತ್ತಲಿನ ಮಿಲಿಟರಿ ಬ್ಯಾರಕ್ ಗಳಲ್ಲಿ ಡೈನಮೈಟ್ ನಿರ್ವಹಣೆಯನ್ನು ನಿರ್ಲಕ್ಷ್ಯ ಮಾಡಿರುವ ಕಾರಣಗಳಿಂದ ಸ್ಫೋಟ ಉಂಟಾಗಿದೆ ಎಂದು ಅಧ್ಯಕ್ಷ ಟಿಯೋಡೊರೊ ಒಬಿಯಾಂಗ್ ನುಗ್ಯುಮಾ ಹೇಳಿಕೆಯನ್ನು ನೀಡಿದ್ದಾರೆ.
* ಬಾಟಾದ ಈ ಸ್ಫೋಟದಿಂದಾಗಿ ಬಹುತೇಕ ಎಲ್ಲ ಮನೆಗಳು ಮತ್ತು ಕಟ್ಟಡಗಳಿಗೆ ಹಾನಿಯಾಗಿದೆ ಎಂದು ತಿಳಿದು ಬಂದಿದೆ.
* ಬಾಟಾದ ರಕ್ಷಣಾ ಸಚಿವಾಲಯನೀಡಿರುವ ಮಾಹಿತಿಯ ಪ್ರಕಾರ ಬ್ಯಾರಕ್'ನ ಶಸ್ತ್ರಾಸ್ತ್ರಗಳ ಶೇಖರಣೆಯ ಜಾಗದಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದಾಗಿ ಅಧಿಕ ಪ್ರಮಾಣದ ಶಸ್ತ್ರಾಸ್ತ್ರಗಳ ಸ್ಫೋಟಕ್ಕೆ ಕಾರಣವಾಗಿದೆ.

## ಕೇಂದ್ರ ಪರಿಸರ ಸಚಿವಾಲಯದಿಂದ ಭಾರತದ ಕಲುಷಿತ ನಗರಗಳ ಪಟ್ಟಿ ಬಿಡುಗಡೆ



* ಇತ್ತೀಚಿಗೆ ದೇಶದ ಅತ್ಯಂತ ಕಲುಷಿತ ನಗರಗಳ ಪಟ್ಟಿಯನ್ನು ಕೇಂದ್ರ ಪರಿಸರ ಸಚಿವಾಲಯ ಬಿಡುಗಡೆ ಮಾಡಿದೆ. ದೇಶದಲ್ಲಿನ ಅತಿ ಹೆಚ್ಚು ಕಲುಷಿತ ನಗರಗಳು:
* ಉತ್ತರ ಪ್ರದೇಶ(UP), ಒಡಿಶಾ, ರಾಷ್ಟ್ರ ರಾಜ್ಯಧಾನಿ ದೆಹಲಿ ಈ ಪ್ರದೇಶಗಳಲ್ಲಿ ಭೂಮಿ, ಕುಡಿಯುವ ನೀರು, ಗಾಳಿ ಮಲಿನವಾಗಿದೆ ಎಂದು ಕೇಂದ್ರ ಪರಿಸರ ಸಚಿವಾಲಯ ತಿಳಿಸಿದೆ.
* ದೇಶದ 112 ಪ್ರದೇಶಗಳನ್ನು ಅತ್ಯಂತ ಕಲುಷಿತ ಪ್ರದೇಶಗಳೆಂದು ಗುರುತಿಸಲಾಗಿದೆ, ಇವುಗಳಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸೇರಿವೆ.
* ಪ್ರಸ್ತುತ ಒಡಿಶಾ ರಾಜ್ಯವು 23 ಕಲುಪಿತ ಪ್ರದೇಶಗಳನ್ನು ಹೊಂದಿ, ಮೊದಲನೆಯ ಸ್ಥಾನದಲ್ಲಿದೆ.
* ಉತ್ತರ ಪ್ರದೇಶ ರಾಜ್ಯವು 21 ಕಲುಪಿತ ಪ್ರದೇಶ ಹೊಂದಿ, ಎರಡನೇ ಸ್ಥಾನದಲ್ಲಿದೆ.
* ರಾಷ್ಟ್ರ ರಾಜ್ಯಧಾನಿ ದೆಹಲಿ 11 ಕಲುಪಿತ ಪ್ರದೇಶಗಳನ್ನೂ ಹೊಂದಿ ಮೂರನೇ ಸ್ಥಾನದಲ್ಲಿದೆ.

## ಇಸ್ರೋದಿಂದ ಮಾರ್ಚ್.28ರಂದು ಗಡಿ ಕಾವಲಿಗೆ ಗೇಮ್ ಚೇಂಜರ್ ಉಪಗ್ರಹ ಉಡಾವಣೆ




* ಭಾರತೀಯ ಬಾಹ್ಯಕಾಶ ಸಂಸ್ಥೆ ಇಸ್ರೋ ಇದೆ ಮಾರ್ಚ್.28 ರಂದು ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಜಿಐಸ್ಯಾಟ್ 1 ಉಪಗ್ರಹವನ್ನು ಉಡಾಯಿಸುತ್ತಿದೆ.
* ಈ ಉಪಗ್ರಹದಿಂದ ದೇಶದ ಗಡಿಯಲ್ಲಿನ ಪ್ರದೇಶಗಳ ಮೇಲೆ ಕಣ್ಣಾವಲು ಇಡಲಾಗುವದು ಮತ್ತು ನೈಸರ್ಗಿಕ ವಿಕೋಪಗಳಂತ ಸಂದರ್ಭದಲ್ಲೂ ಮುನ್ಸೂಚನೆ ನೀಡಲು ಸಹಾಯವಾಗಲಿದೆ. ಗೇಮ್ ಚೇಂಜರ್ ಉಪಗ್ರಹ:
* ಇಸ್ರೋದ ಈ ಜಿಐಸ್ಯಾಟ್ 1 ಉಪಗ್ರಹ ಇದು ಹೈ ರೆಸಲ್ಯೂಶನ್ ಕೆಮರಾಗಳನ್ನು ಹೊಂದಿದೆ, ಹಾಗೂ ದೇಶದ ಮೂಲೆಮೂಲೆಯಲ್ಲಿ ಕಣ್ಣಿಡಲು, ಜೊತೆಗೆ ಇದು ನೈಸರ್ಗಿಕ ವಿಕೋಪಗಳ ಮುನ್ಸೂಚನೆ ನೀಡಲು ಅನುಕೂಲವಾಗಲಿದೆ ಎಂದು ಇಸ್ರೋ ಮೂಲಗಳು ಮಾಹಿತಿಯನ್ನು ನೀಡಿವೆ. ಗೇಮ್ ಚೇಂಜರ್ ಉಪಗ್ರಹ ಉಡಾವಣೆಯ ಮಾಹಿತಿ: ಈ ಗೇಮ್ ಚೇಂಜರ್ ಉಪಗ್ರಹವು ಇದೆ ಮಾರ್ಚ್.28ರಂದು ಭೂ ಮೇಲ್ಮೈಯಿಂದ 36 ಸಾವಿರ ಕಿ.ಮೀ. ದೂರದ ಕಕ್ಷೆಗೆ ಇಸ್ರೋ ಈ ಉಪಗ್ರಹವನ್ನು ಉಡಾವಣೆ ಮಾಡಲಿದೆ.

## ವಿಶ್ವದ ಮೊದಲ ಮಹಿಳಾ ಸಿಬ್ಬಂದಿ ಇರುವ ನೌಕಾಯಾನಕ್ಕೆ ಹಸಿರು ನಿಶಾನೆ



* ಕೇಂದ್ರ ಬಂದರು, ಹಡಗು ಹಾಗೂ ಜಲಸಾರಿಗೆ ಸಚಿವ ಮನಸುಖ್ ಮಾಂಡವೀಯವರು ಪೂರ್ಣ ಮಹಿಳಾ ಸಿಬ್ಬಂದಿಗಳೇ ಕಾರ್ಯಾಚರಣೆ ನಡೆಸುವ, ಶಿಪ್ಪಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಎಂಟಿ ಸ್ವರ್ಣ ಕೃಷ್ಣಾ ಹಡಗುಯಾನಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಸಿರು ನಿಶಾನೆಯನ್ನು ನೀಡಿದ್ದಾರೆ.
* ವಿಶ್ವದ ಮೊದಲ ಮಹಿಳಾ ಸಿಬ್ಬಂದಿಯೇ ನೌಕಾಯಾನದ ಸಾರಥ್ಯ ವಹಿಸಿರುವ ಕಾರ್ಯಾಚರಣೆ ಇದಾಗಿದೆ ಎಂದು ಬಂದರು, ಹಡಗು ಹಾಗೂ ಜಲಸಾರಿಗೆ ಸಚಿವಾಲಯ ಮಾಹಿತಿಯನ್ನು ನೀಡಿದೆ.
* ಶಿಪ್ಪಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ವಜ್ರ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಹಿನ್ನಲೆಯಲ್ಲಿ ಮಹಿಳಾ ದಿನವನ್ನೂ ಆಚರಿಸುವ ಸಲುವಾಗಿ ಈ ಕಾರ್ಯ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ಮಾಹಿತಿಯನ್ನು ನೀಡಿದೆ.

## ದೇಶದ ಅತಿದೊಡ್ಡ ಡಯಾಲಿಸಿಸ್ ಕೇಂದ್ರ ಹೊಸದಿಲ್ಲಿಯಲ್ಲಿ ಉದ್ಘಾಟನೆ



* ಭಾರತದ ಅತ್ಯಂತ ದೊಡ್ಡ ಕಿಡ್ನಿ ಡಯಾಲಿಸಿಸ್ ಸೌಲಭ್ಯವನ್ನು ದಿಲ್ಲಿಯ ಗುರುದ್ವಾರ ಬಾಂಗ್ಲಾ ಸಾಹಿಬ್ ಸಂಕೀರ್ಣದಲ್ಲಿ ಲೋಕಾರ್ಪಣೆ ಮಾಡಲಾಯಿತು.
* ಗುರು ಹರಿಕೃಷ್ಣ ಇನ್ ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಹಾಗೂ ರಿಸರ್ಚ್ ಕಿಡ್ನಿ ಡಯಾಲಿಸಿಸ್ ಹಾಸ್ಪಿಟಲ್‌ನಲ್ಲಿ ಉದ್ಘಾಟನೆ ಮಾಡಲಾಯಿತು.
* ಒಂದೇ ಸಮಯಕ್ಕೆ 101 ರೋಗಿಗಳಂತೆ ಹಾಗೂ ಪ್ರತಿದಿನ 500 ರೋಗಿಗಳಿಗೆ ಡಯಾಲಿಸಿಸ್ ಸೌಲಭ್ಯ ಒದಗಿಸಲಿದೆ ಎಂದು ತಿಳಿಸಿದ್ದಾರೆ.
* ಈ ಆಸ್ಪತ್ರೆಯಲ್ಲಿ ಎಲ್ಲ ಸೇವೆಗಳನ್ನು ಸಂಪೂರ್ಣವಾಗಿ ಉಚಿತವಾಗಿ ನೀಡಲಾಗುತ್ತಿದೆ. ಯಾವುದೇ ಬಿಲ್ಲಿಂಗ್ ಅಥವಾ ಪಾವತಿ ಕೌಂಟರ್ ಇಲ್ಲ, ಎಂದು ಡಿಎಸ್ ಜಿಎಂಸಿ ಅಧ್ಯಕ್ಷ ಮಂಜಿಂದರ್ ಸಿಂಗ್ ಸಿರ್ಸಾ ಮಾಹಿತಿಯನ್ನು ನೀಡಿದ್ದಾರೆ.

## ಚೀನಾ ದೇಶದಿಂದ ಟಿಬೆಟ್‌ನಲ್ಲಿ ಶೀಘ್ರ ಬುಲೆಟ್ ರೈಲು ಪ್ರಾರಂಭ



* ಚೀನಾ ದೇಶವು ಈ ವರ್ಷ ಜುಲೈ ತಿಂಗಳಲ್ಲಿ ಅರುಣಾಚಲ ಪ್ರದೇಶದ ಗಡಿ ಸಮೀಪವಿರುವ ಟಿಬೆಟ್‌ಗೆ ಬುಲೆಟ್ ರೈಲು ಪ್ರಾರಂಭಿಸಲಿದೆ ಎಂದು ಹಿರಿಯ ಅಧಿಕಾರಿ ಮಾಹಿತಿಯನ್ನು

ನೀಡಿದ್ದಾರೆ.

* ಚೀನಾ ಸ್ಟೇಟ್ ರೈಲ್ವೆ ಗ್ರೂಪ್ ಕಂಪನಿ ಲಿಮಿಟೆಡ್'ನ ಅಧ್ಯಕ್ಷ 'ಲು ಡುಂಗ್ಸು' ನೀಡಿದ ಮಾಹಿತಿ ಪ್ರಕಾರ ಈರೈಲು ಇಂಧನ ಮತ್ತು ವಿದ್ಯುತ್ ಚಾಲಿತ ರೈಲು ಆಗಿದೆ, ಪ್ರಸ್ತುತ ಇದು ಲಾಸಾಗೆ 435 ಕಿ.ಮೀ ದೂರದವರೆಗೆ ಸಂಪರ್ಕ ಕಲ್ಪಿಸುವ ಹೈ ಸ್ಪೀಡ್ ರೈಲ ಆಗಿದೆ.

* 2014ರಲ್ಲಿ ಲಾಸಾ ಮತ್ತು ನೈಂಗ್‌ಚಿಯೊಗೆ ಪ್ರದೇಶಗಳಿಗೆ ರೈಲ್ವೆ ಹಳಿ ಸಂಪರ್ಕ ಕಲ್ಪಿಸುವ ಕಾರ್ಯ ಪ್ರಾರಂಭಗೊಂಡಿತ್ತು, ಈ ಮಾರ್ಗದಲ್ಲಿ ಚಲಿಸುವ ಬುಲೆಟ್ ರೈಲು ಪ್ರತಿ ಗಂಟೆಗೆ 160 ಕಿ.ಮೀ ವೇಗದಲ್ಲಿ ಕ್ರಮಿಸುವ ಸಾಮರ್ಥ್ಯವನ್ನು ಹೊಂದಿದೆ.

* ಚೀನಾ ರಾಷ್ಟ್ರವು 2025ರ ವೇಳೆಗೆ 50,000 ಕಿ.ಮೀ ಉದ್ದದ ಹೈ ಸ್ಪೀಡ್ ರೈಲ್ವೆ ಸಂಪರ್ಕ ಕಲ್ಪಿಸುವ ಗುರಿ ಹೊಂದಿದೆ.

* ಟಿಬೆಟ್‌ನ ಮೊದಲ ವಿದ್ಯುತ್ ಚಾಲಿತ ರೈಲು ಮಾರ್ಗ ಎಂದು ಟಿಬೆಟ್‌ನ ರೈಲ್ವೆ ನಿರ್ಮಾಣ ಸಂಸ್ಥೆ ಮಾಹಿತಿಯನ್ನು ನೀಡಿದೆ.

## 09- 03- 2021

### 2021 22ನೇ ಸಾಲಿನ ರಾಜ್ಯ ಬಜೆಟ್ ಮಂಡನೆ



* ರಾಜ್ಯದ ವಿವಿಧ ನದಿಗಳಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲು ವ್ಯರ್ಥ ನೀರು ಬಳಕೆಗೆ ಒತ್ತು 3986ಕೋಟಿ.ರೂ.ವೆಚ್ಚದಲ್ಲಿ 1348 ಕಿಂಡಿ ಅಣೆಕಟ್ಟು ಕಟ್ಟುವ ಯೋಜನೆ ಬಜೆಟ್ ನಲ್ಲಿ ಪ್ರಸ್ತಾಪಿಸಲಾಗಿದೆ.

* ಮಹದಾಯಿ ಯೋಜನೆಗೆ ನ್ಯಾಯಾಧಿಕರಣದ ತೀರ್ಪಿನಂತೆ ಕಳಸಾ ಬಂಡೂರಿ ಯೋಜನೆಗಳಿಗೆ 1,677 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಪ್ರಾರಂಭ ಮಾಡಲಾಗುವದು ಎಂದು ತಿಳಿಸಿದ್ದಾರೆ.

* ಭದ್ರಾ ಮೇಲ್ದಂಡೆ ಯೋಜನೆಗೆ 21,474 ಕೋಟಿ ರೂ.

* ಉತ್ತರ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಯೋಜನೆ ಅನುಷ್ಠಾನ ಗೊಳಿಸಲು 5,600 ಕೋಟಿ ರೂ. ಮೀಸಲಿಡಲಾಗುವುದು ಎಂದು ಮಾಹಿತಿಯನ್ನು ನೀಡಿದ್ದಾರೆ.

* ಆತ್ಮನಿರ್ಭರಕ್ಕೆ ಉತ್ತೇಜನ ನೀಡಲು ರಾಮನಗರದಲ್ಲಿ ಹೈಟೆಕ್ ಸಿಲ್ಕ್ ಮಾರುಕಟ್ಟೆ, ಹಾಗೂ ವಿಜಯಪುರದ ಇಟ್ಟಂಗಿಹಾಳದಲ್ಲಿ ಆತ್ಮನಿರ್ಭರ ಭಾರತ ಅಭಿಯಾನದಡಿ ಆಹಾರ ಪಾರ್ಕ್ ಸ್ಥಾಪಿಸಲು ಮುಂದಾಗಿದೆ.

* ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಲು 100 ಕೋಟಿ ರೂ.ಗಳನ್ನು ಸರ್ಕಾರ ಘೋಷಣೆ ಮಾಡಿದೆ.

* APMCಗಳಲ್ಲಿನ ಮಹಿಳೆಯರ ಸಬಲೀಕರಣಕ್ಕೆ ಶೇ. 10 ಮೀಸಲಾತಿ ನೀಡಲಾಗುವದು, ಮತ್ತು ಕೃಷಿ ವಿಶ್ವವಿದ್ಯಾಲಯಗಳಲ್ಲಿ ರೈತರ ಮಕ್ಕಳಿಗೆ ಇದ್ದ ಸೀಟುಗಳ ಮೀಸಲಾತಿಯನ್ನು ಶೇ. 50ಕ್ಕೆ ಹೆಚ್ಚಿಸಲಾಗುವದು.

* ಉಡುಪಿಯಲ್ಲಿ ಪೇಜಾವರ ಮಠದ ಶ್ರೀವಿಶ್ವೇಶತೀರ್ಥ ಸ್ವಾಮೀಜಿ ಅವರ ಸ್ಮರಣೆಯಲ್ಲಿ 'ಪೇಜಾವರ ಸ್ಮೃತಿವನ ನಿರ್ಮಿಸಲು 2ಕೋಟಿ ರೂ.ವನ್ನು ಬಜೆಟ್ ನಲ್ಲಿ ಘೋಷಿಸಿದ್ದಾರೆ.

* ಆಯೋಧ್ಯೆಯಲ್ಲಿ ಕರ್ನಾಟಕ ಯಾತ್ರಿ ನಿವಾಸ ನಿರ್ಮಾಣ ಮಾಡಲು 10 ಕೋಟಿ ರು ಅನುದಾನ ನೀಡಲಾಗುತ್ತಿದೆ ಬಜೆಟ್'ನಲ್ಲಿ ತಿಳಿಸಿದ್ದಾರೆ.

* ಆಗಸ್ಟ್ 2021ರೊಳಗೆ ಒಂದು ರಾಷ್ಟ್ರ ಒಂದು ಕಾರ್ಡ್ ವ್ಯವಸ್ಥೆ ಜಾರಿಗೆ, ಇದನ್ನು ನಮ್ಮ ಮೆಟ್ರೋ ಹಾಗೂ BMTC ಸಾರಿಗೆ ಸಂಸ್ಥೆಯ ಬಸ್ ಗಳಲ್ಲಿ ಈ ಕಾರ್ಡ್ ಬಳಕೆಗೆ ಅವಕಾಶ ನೀಡಲಾಗುವದು ಎಂದು ತಿಳಿಸಿದ್ದಾರೆ.

* ಗಾರ್ಮೆಂಟ್ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರಿಗೆ ರಿಯಾಯಿತಿ ದರದಲ್ಲಿ ಬಿಎಂಟಿಸಿ ಬಸ್ ಪಾಸ್ ನೀಡುವ 'ವನಿತಾ ಸಂಗಾತಿ' ಯೋಜನೆ ಜಾರಿ.

* ರಾಜ್ಯದಲ್ಲಿ ಕೊರೊನಾ ನಿರ್ವಹಣೆಗೆ ಇದುವರೆಗೂ 5372 ಕೋಟಿ ರೂ. ವೆಚ್ಚ ಮಾಡಲಾಗಿದೆ.

*ಬಸವಕಲ್ಯಾಣದಲ್ಲಿ500ಕೋಟಿರೂ.ವೆಚ್ಚದಲ್ಲಿಅನುಭವಮಂಟಪನಿರ್ಮಿಸಲು ಅನುಮೋದನೆ.

* ರಾಜ್ಯ ಸರ್ಕಾರದ ಮಹಿಳಾ ಉದ್ಯೋಗಿಗಳಿಗೆ ಈಗಾಗಲೇ ಅಸ್ತಿತ್ವದಲ್ಲಿರುವ 6 ತಿಂಗಳ ಹೆರಿಗೆರಜೆಯೊಂದಿಗೆ6ತಿಂಗಳುಮಕ್ಕಳಆರೈಕೆರಜೆನೀಡಲಾಗುವುದುಎಂದುತಿಳಿಸಿದ್ದಾರೆ.

2021 - 22ನೇ ಸಾಲಿನ ರಾಜ್ಯ ಬಜೆಟ್ ನಲ್ಲಿ ಯಾವ ವಲಯಕ್ಕೆ ಎಷ್ಟು ಅನುದಾನ ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ; 31,028 ಕೋಟಿ ರೂ.
ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿಗೆ : 62,150 ಕೋಟಿ ರೂ.
ಆರ್ಥಿಕ ಅಭಿವೃದ್ಧಿಗೆ ಪ್ರಚೋದನೆ : 52,529 ಕೋಟಿ ರೂ.
ಬೆಂಗಳೂರು ಸಮಗ್ರ ಅಭಿವೃದ್ಧಿ : 7795 ಕೋಟಿ ರೂ.
ಸಂಸ್ಕೃತಿ, ಪರಂಪರೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ: 2645 ಕೋಟಿ ರೂ.
ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆ : 52,519 ಕೋಟಿ ರೂ.
ಶಿಕ್ಷಣ ವಲಯ : 29,688 ಕೋಟಿ ರೂ
ಅನುದಾನ ನಗರಾಭಿವೃದ್ಧಿ ಕ್ಷೇತ್ರ : 27,386 ಕೋಟಿ
ಅನುದಾನ ಜಲ ಸಂಪನ್ಮೂಲ ಕ್ಷೇತ್ರ : 21,181 ಕೋಟಿ ಹಣ
ಇಂಧನ ಇಲಾಖೆ : 16,515 ಕೋಟಿ
ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ : 16,036 ಕೋಟಿ
ಕಂದಾಯ ಇಲಾಖೆ ವ್ಯಾಪ್ತಿ : 12,384 ಕೋಟಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ : 11,908 ಕೋಟಿ
ಒಳಾಡಳಿತ ಮತ್ತು ಸಾರಿಗೆ ಕ್ಷೇತ್ರ : 10,330 ಕೋಟಿ
ಲೋಕೋಪಯೋಗಿ ಇಲಾಖೆ : 10,256 ಕೋಟಿ
ಸಮಾಜ ಕಲ್ಯಾಣ ಇಲಾಖೆ : 8,864 ಕೋಟಿ
ಕೃಷಿ ಮತ್ತು ತೋಟಗಾರಿಕೆ ಇಲಾಖೆ : 7,297 ಕೋಟಿ
ಮಹಿಳಾ ಮತ್ತು ಮಕ್ಕಳ ಕಲ್ಯಾಣ : 4,531 ಕೋಟಿ
ವಸತಿ ಇಲಾಖೆ ಯೋಜನೆ : 2,990 ಕೋಟಿ
ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ : 2,374 ಕೋಟಿ
ಇತರೆ ಇಲಾಖೆಗಳ ಯೋಜನೆ : 94,416 ಕೋಟಿ

### ಭಾರತ ಬಾಂಗ್ಲಾ ನಡುವಿನ ಮೈತ್ರಿ ಸೇತುವೆ ಪ್ರಧಾನಿ ಮೋದಿಯಿಂದ ಉದ್ಘಾಟನೆ



* ಪ್ರಧಾನಿ ಮೋದಿಯವರು ತ್ರಿಪುರಾದಲ್ಲಿ ಭಾರತ ಬಾಂಗ್ಲಾ ದೇಶದಗಳ ನಡುವೆ ಫೆನಿ ನದಿಗೆ ಕಟ್ಟಲಾಗಿರುವ ಮೈತ್ರಿ ಸೇತುವೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟನೆ ಮಾಡಲಿದ್ದಾರೆ. ಮೈತ್ರಿ ಸೇತುವೆ ಬಗ್ಗೆ ಮಾಹಿತಿ :

* ಮೈತ್ರಿ ಸೇತುವೆ ಯನ್ನು ತ್ರಿಪುರ ರಾಜ್ಯ ಮತ್ತು ಬಾಂಗ್ಲಾದೇಶದ ಭಾರತದ ಗಡಿಯ ನಡುವೆ ಹರಿಯುವ ಫೆನಿ ನದಿಯ ಮೇಲೆ ಸೇತುವೆಯನ್ನು ನಿರ್ಮಿಸಲಾಗಿದೆ.

* ಮೈತ್ರಿ ಸೇತುವೆ ಭಾರತ ಮತ್ತು ಬಾಂಗ್ಲಾದೇಶದ ನಡುವೆ ಬೆಳೆಯುತ್ತಿರುವ ದ್ವಿಪಕ್ಷೀಯ ಸಂಬಂಧ ಮತ್ತು ಸ್ನೇಹ ಸಂಬಂಧವನ್ನು ಸಂಕೇತಿಸುತ್ತದೆ.

* ಭಾರತ ಮತ್ತು ಬಾಂಗ್ಲಾದೇಶಕ್ಕೆ ಮತ್ತು ಹೊರಗಿನ ಪ್ರಯಾಣಿಕರ ಚಲಿಸಲು ಸಹಾಯಕಾರಿ ಆಗಿದೆ

* ಮೈತ್ರಿ ಸೇತುವೆ ಯನ್ನು ನಿರ್ಮಾಣ ಮಾಡುವದಕ್ಕೆ ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಲಿಮಿಟೆಡ್ ರವರು 133 ಕೋಟಿ ರೂ ಗಳಲ್ಲಿ ಒಪ್ಪಿಗೆಯಾಗಿದೆ

* ಮೈತ್ರಿ ಸೇತುವೆ 1.9 ಕಿ.ಮೀ ಉದ್ದದ ಸೇತುವೆ ಭಾರತದ ಸಬ್ರೂಮ್ ದಿಂದ

ಬಾಂಗ್ಲಾದೇಶದ ರಾಮ್‌ಗ್ರಹ ದವರಗೆ ಸೇರುತ್ತದೆ.
* ಈಶಾನ್ಯ ರಾಜ್ಯಗಳ ಉತ್ಪನ್ನಗಳಿಗೆ ಮತ್ತು ಹೊಸ ಮಾರುಕಟ್ಟೆ ಅವಕಾಶಗಳನ್ನು ಒದಗಿಸುತ್ತದೆ.

## ಭಾರತೀಯ ಯುದ್ದನೌಕೆಗೆ ಮಹಿಳೆಯರ ನೇಮಕ



* ವಿಶ್ವ ಮಹಿಳಾ ದಿನಾಚರಣೆಯ ಹಿನ್ನಲೆಯಿಂದಾಗಿ 23 ವರ್ಷಗಳ ಬಳಿಕ ಭಾರತೀಯ ಯುದ್ಧ ನೌಕೆಗೆ 4ಮಹಿಳೆಯರನ್ನು ನೇಮಕ ಮಾಡಿಕೊಳ್ಳಲಾಗಿದೆ.
* INS ವಿಕ್ರಮಾದಿತ್ಯ ವಿಮಾನ ವಾಹಕ ನೌಕೆಗೆ ಇಬ್ಬರು ಮಹಿಳೆಯರು ಮತ್ತು INS ಶಕ್ತಿ ಟ್ಯಾಂಕರ್‌ಗೆ ಇಬ್ಬರು ಮಹಿಳೆಯರು, ಒಟ್ಟಾರೆ 4 ಮಹಿಳೆಯರನ್ನು ಯುದ್ಧ ನೌಕಾಪಡೆಗೆ ನೇಮಕ ಮಾಡಲಾಗಿದೆ.
* ಈ ಹಿಂದೆ 1998ರಲ್ಲಿ ಪ್ರಥಮ ಬಾರಿಗೆ ಯುದ್ಧನೌಕೆಗೆ ಮಹಿಳೆಯರನ್ನು ನೇಮಕ ಮಾಡಲಾಗಿತ್ತು, ಹಲವು ಕಾರಣಗಳಿಂದ ಅನುಷ್ಠಾನ ಸಾಧ್ಯವಾಗಿರಲಿಲ್ಲ, ಪ್ರಸ್ತುತ ಇದೀಗ ಮಾರ್ಚ್ 8ರ ವಿಶ್ವ ಮಹಿಳಾ ದಿನಾಚರಣೆ ಹಿನ್ನಲೆಯಲ್ಲಿ 4 ಮಹಿಳೆಯರನ್ನು ಯುದ್ಧನೌಕೆಗೆ ನೇಮಕ ಮಾಡುವ ಮೂಲಕ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. INS ವಿಕ್ರಮಾದಿತ್ಯ ಬಗ್ಗೆ ಮಾಹಿತಿ :
* ಪ್ರಥಮವಾಗಿ ಐಎನ್‌ಎಸ್ ವಿಕ್ರಮಾದಿತ್ಯ 1987 ರಲ್ಲಿ ಕಾರ್ಯಾರಂಭ ಪ್ರಾರಂಭಿಸಿತು.
* ಭಾರತವು ಜನವರಿ 20, 2004 ರಂದು INS ವಿಕ್ರಮಾದಿತ್ಯ ಇದನ್ನು 2.35 ಬಿಲಿಯನ್ ಅಂತಿಮ ಬೆಲೆಗೆ ಖರೀದಿಸಿತು.
* INS ವಿಕ್ರಮಾದಿತ್ಯ ಹಡಗನ್ನು ಜುಲೈ 2013 ರಲ್ಲಿ ಸಮುದ್ರದಲ್ಲಿ ಪ್ರಯೋಗಿಸಲಾಯಿತು, ಮತ್ತು 2013 ಸೆಪ್ಟೆಂಬರ್ ರಲ್ಲಿ ವಾಯುಯಾನ ಪ್ರಯೋಗಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು.
* ಭಾರತೀಯ ನೌಕಾಪಡೆಗೆ 14 ಜೂನ್ 2014 ರಂದು ಐಎನ್‌ಎಸ್ ವಿಕ್ರಮಾದಿತ್ಯ ಸೇರಿಸಿಕೊಳ್ಳಲಾಗಿದೆ.

## ರೈಲು ಪ್ರಯಾಣಿಕಾರಿಗೆ ಇನ್ನುಂದೆ 139 ಸಹಾಯವಾಣಿ ಸಂಖ್ಯೆ




* ಭಾರತೀಯ ರೈಲ್ವೆ ಇಲಾಖೆಯು ಪ್ರಯಾಣಿಕರ ಅನುಕೂಲಕ್ಕಾಗಿ ಸಹಾಯವಾಣಿಯೊಂದನ್ನ ಸಿದ್ಧಪಡಿಸಿದೆ, ಈ ಸಹಾಯವಾಣಿ ಸಂಖ್ಯೆಯಿಂದ ರೈಲ್ವೆ ಸೇವೆ ಸಂಬಂಧಿ ಎಲ್ಲಾ ವಿಷಯ ಮತ್ತು ಗೊಂದಲಗಳನ್ನು ಪರಿಹಾರಮಾಡಿಕೊಳ್ಳಬಹುದಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.
* ರೈಲ್ವೆ ಇಲಾಖೆ ಈ ಹಿಂದೆ ಎರಡು ಸಹಾಯವಾಣಿ ಸಂಖ್ಯೆಗಳನ್ನೂ 182 ಹಾಗೂ 138ಯನ್ನ ಹೊಂದಿತ್ತು ಇದೀಗ ಈ ಎರಡು ಸಂಖ್ಯೆಗಳನ್ನೂ ಮರ್ಜ್ ಮಾಡಿ ಹೊಸ ಸಹಾಯವಾಣಿ 139 ಸಂಖ್ಯೆಯನ್ನು ಜಾರಿಗೆ ತಂದಿದೆ.
* ಪ್ರಸ್ತುತ ರೈಲ್ವೆ ಇಲಾಖೆಯ ಹೊಸ ಸಹಾಯವಾಣಿ ಸಂಖ್ಯೆಯಾಗಿರುವ 139ನಲ್ಲಿ ಒಟ್ಟು 12 ಭಾಷೆಗಳು ಲಭ್ಯವಿದೆ. ರೈಲ್ವೆ 139 ಸಹಾಯವಾಣಿಯಿಂದ ಪಡೆಯಬಹುದಾದ ಮಾಹಿತಿ:
* ರೈಲ್ವೆ ಸೇವೆ ಸಂಬಂಧಿ ದೂರು, ಪಾರ್ಸಲ್ ವಿಚಾರಣೆ, ಅಪಘಾತ ವಿಚಾರಣೆ, ಮೆಡಿಕಲ್ ಅಸಿಸ್ಟೆಂಟ್ ಸ್ಟೇಷನ್ ಕಂಪ್ಲೇಂಟ್, ಈ ಎಲ್ಲ ಮಾಹಿತಿಗಳನ್ನು ರೈಲ್ವೆ ಇಲಾಖೆಯ ಹೊಸ ಸಹಾಯವಾಣಿಯಿಂದ ಪಡೆಯಬಹುದಾಗಿದೆ ಎಂದು ರೈಲ್ವೆ ಇಲಾಖೆ ಮಾಹಿತಿಯನ್ನು ನೀಡಿದೆ. ಭಾರತೀಯ ರೈಲ್ವೆ ಇಲಾಖೆಯ ಕುರಿತು :
* ಕೇಂದ್ರ ಸರ್ಕಾರದ ರೈಲ್ವೆ ಸಚಿವಾಲಯದ ಅಡಿಯಲ್ಲಿ ಭಾರತದ ರಾಷ್ಟ್ರೀಯರೈಲ್ವೆ ವ್ಯವಸ್ಥೆ ಕಾರ್ಯ ನಿರ್ವಹಿಸುತ್ತದೆ.
* ವಿಶ್ವದ ಅತಿದೊಡ್ಡ ಜಾಲತಾಣಗಳಲ್ಲಿ ಭಾರತೀಯ ರೈಲ್ವೆ ಜಾಲತಾಣವು ನಾಲ್ಕನೇ ಕ್ರಮಾಂಕದಲ್ಲಿದೆ.
* ಭಾರತದ ರಾಷ್ಟ್ರೀಯ ರೈಲ್ವೆ ವ್ಯವಸ್ಥೆಯನ್ನು 16 ಏಪ್ರಿಲ್ 1853 ರಂದು ಸ್ಥಾಪನೆಯಾಗಿದೆ.
* ಪ್ರಧಾನ ಕಚೇರಿ : ನವದೆಹಲಿ
* 2016 2017 ರ ಮಾಹಿತಿ ಅನ್ವಯ ರೈಲ್ವೆ ಇಲಾಖೆಯಲ್ಲಿ ನೌಕರರು : 13,08,000
* ರೈಲ್ವೆ ಇಲಾಖೆಯ ಪ್ರತಿ ವರ್ಷ ಅಂದಾಜು ಆದಾಯ : 1.97 ಲಕ್ಷ ಕೋಟಿ ರೂ.

## ಮಾಜಿ ರಾಜ್ಯಪಾಲ ಅನ್ಶುಮಾನ್ ಸಿಂಗ್ ವಿಧಿವಶ



* ರಾಜಸ್ಥಾನದ ಮತ್ತು ಗುಜರಾತಿನ ಮಾಜಿ ರಾಜ್ಯಪಾಲ ಹಾಗೂ ಪ್ರಸ್ತುತ ಇವರು ರಾಜಸ್ಥಾನ ಹೈಕೋರ್ಟ್ ಮಾಜಿ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿದ್ದ ಅನ್ಶುಮಾನ್ ಸಿಂಗ್ ರವರು ಇತ್ತೀಚಿಗೆ ತಮ್ಮ 85ನೇ ವಯಸ್ಸಿನಲ್ಲಿ ನಿಧನರಾದರು.
* 1935 ರಲ್ಲಿ ಅಲಹಾಬಾದ್‌ನಲ್ಲಿ ಜನಿಸಿದ ಅವರು ಕಲೆ ಮತ್ತು ಕಾನೂನು ಅಧ್ಯಯನ ಮಾಡಿದರು ಮತ್ತು ಮೊದಲು 1957 ರಲ್ಲಿ ಅಲಹಾಬಾದ್ ಜಿಲ್ಲಾ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದ್ದಾರೆ.
* ಜನೇವರಿ 1999 ರಿಂದ ಮೇ 2003 ರವರೆಗೆ ರಾಜಸ್ಥಾನದ ರಾಜ್ಯದ ರಾಜ್ಯಪಾಲರಾಗಿದ್ದರು.
* ಈ ಮೊದಲು ಅವರು 1998 ರಲ್ಲಿ ಗುಜರಾತ್ ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು.
* ರಾಜಸ್ಥಾನ ರಾಜ್ಯದ ರಾಜ್ಯಪಾಲರಾಗಿದ್ದ ಸಮಯದಲ್ಲಿ ಮುರಾರಿ ಬಾಪು ಅವರ ಪ್ರವಚನಗಳನ್ನು ಕಾರ್ಯಕ್ರಮವನ್ನು ರಾಜಭವನದಲ್ಲಿ ಆಯೋಜಿಸಿ ಈ ಮೂಲಕ ಸಂಗ್ರಹವಾದ ಹಣವನ್ನು ಬರಗಾಲ ಪೀಡಿತ ಜನರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ರಾಜಸ್ಥಾನದ ಬಗ್ಗೆ ಮಾಹಿತಿ :
* ರಾಜಸ್ಥಾನವು ಉತ್ತರ ಭಾರತದ ರಾಜ್ಯವಾಗಿದ್ದು, ಒಟ್ಟು ವಿಸ್ತೀರ್ಣ 342,239 ಚದರ ಕಿಲೋಮೀಟರ್ ಮತ್ತು ಭಾರತದ ಒಟ್ಟು ಭೌಗೋಳಿಕ ಪ್ರದೇಶದ ಶೇಕಡಾ 10.4 ರಷ್ಟಿದೆ.
* ಭಾರತದ ಅತಿದೊಡ್ಡ ರಾಜ್ಯ ಮತ್ತು ಜನಸಂಖ್ಯೆಯಲ್ಲಿ ಏಳನೇ ದೊಡ್ಡ ರಾಜ್ಯವಾಗಿದೆ.
* ರಾಜ್ಯಪಾಲ : ಕಲ್ರಾಜ್ ಮಿಶ್ರಾ ಟ್ರೆಂಡಿಂಗ್
* ರಾಜಧಾನಿ : ಜೈಪುರ
* ಮುಖ್ಯಮಂತ್ರಿ : ಅಶೋಕ್ ಗೆಹ್ಲೋಟ್
* 2012 ರ ಜನಗಣತಿ ಪ್ರಕಾರ ಜನಸಂಖ್ಯೆ 6.89 ಕೋಟಿ ಗುಜರಾತಿನ ಬಗ್ಗೆ ಮಾಹಿತಿ :
* ಗುಜರಾತ್ ರಾಜ್ಯವು ಭಾರತದ ಪಶ್ಚಿಮ ಕರಾವಳಿಯಲ್ಲಿ 1,600 ಕಿ.ಮೀ ಒಟ್ಟು

ವಿಸ್ತೀರ್ಣ ಹೊಂದಿರುವ ರಾಜ್ಯವಾಗಿದೆ. ಈ ರಾಜ್ಯವು ಒಟ್ಟು 60.4 ಮಿಲಿಯನ್ ಜನಸಂಖ್ಯೆ ಹೊಂದಿದೆ.
* ಇದು ಭಾರತದ ಪ್ರಕಾರ ಐದನೇ ಅತಿದೊಡ್ಡ ಭಾರತೀಯ ರಾಜ್ಯ ಮತ್ತು ಜನಸಂಖ್ಯೆಯಲ್ಲಿ ಒಂಬತ್ತನೇ ಅತಿದೊಡ್ಡ ರಾಜ್ಯವಾಗಿದೆ.
* ಗುಜರಾತ್ ರಾಜಧಾನಿ: ಗಾಂಧಿನಗರ
* ಗುಜರಾತ್ ರಾಜ್ಯಪಾಲರು: ಆಚಾರ್ಯ ದೇವವ್ರತ್
* ಗುಜರಾತ್ ಮುಖ್ಯಮಂತ್ರಿ: ವಿಜಯ್ ರೂಪಾನಿ

### ಕುಸ್ತಿಪಟು ಭಜರಂಗ್ ಪುನಿಯಾಗೆ ಚಿನ್ನ



* ಭಾರತದ ಕುಸ್ತಿಪಟು ಭಜರಂಗ್ ಪುನಿಯಾರವರು ಮ್ಯಾಟಿಯೊ ಪೆಲಿಕೋನ್ ರ್ಯಾಂಕಿಂಗ್ ಸರಣಿಯಲ್ಲಿ ಸತತ ಎರಡನೇ ಚಿನ್ನದ ಪದಕ ಗೆದ್ದು ವಿಶ್ವ ನಂಬರ್ ಒನ್ ಸ್ಥಾನ ಪಡೆದುಕೊಂಡರು.
* 2021 ಮಾರ್ಚ್ 7ರಂದು ರೋಮ್'ನಲ್ಲಿ ಆಯೋಜಿಸಲಾಗಿದ್ದ ಅಂತಿಮ ಫ್ರೀಸ್ಟೈಲ್ ಈವೆಂಟ್ ಅನ್ನು 65 ಕೆಜಿಯಲ್ಲಿ 2 2 ಮಾನದಂಡಗಳಿಂದ ಕುಸ್ತಿಪಟು ಮಂಗೋಲಿಯಾದ ತುಲ್ಗಾ ತುಮುರ್ ಓಚಿರ್ ಅವರನ್ನು ಸೋಲಿಸಿದರು.
* ಭಾರತವು ಈ ಪಂದ್ಯಾವಳಿಯಲ್ಲಿ 7 ಪದಕಗಳನ್ನು ಪಡೆದುಕೊಂಡಿದ್ದು, ಮಹಿಳಾ ಸ್ಪರ್ಧೆಯಲ್ಲಿ ವಿನೇಶ್ ಫೋಗಾಟ್ ಮತ್ತು ಸರಿತಾ ಮೋರ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ. ಟೋಕಿಯೊ ಒಲಿಂಪಿಕ್ಸ್:
* ಈ ಟೋಕಿಯೋ ಒಲಿಂಪಿಕ್ಸ್ 2021 ಜುಲೈ 23 ರಿಂದ ಆಗಸ್ಟ್ 8, ರವರೆಗೆ ಜಪಾನ್‌ನ ಟೋಕಿಯೊದಲ್ಲಿ ನಡೆಸಲು ನಿರ್ಧರಿಸಲಾಗಿದೆ.
* ಮಾರ್ಕೆಟಿಂಗ್ ಮತ್ತು ಬ್ರ್ಯಾಂಡಿಂಗ್ ಉದ್ದೇಶಗಳಿಗಾಗಿ 2021 ಕ್ಕೆ ಮರು ನಿಗದಿಪಡಿಸಲಾಗಿದ್ದರೂ ಸಹ ಆಟಗಳು "ಟೋಕಿಯೋ 2020" ಎಂಬ ಹೆಸರನ್ನು ಉಳಿಸಿಕೊಂಡಿದೆ. ಭಜರಂಗ್ ಪುನಿಯಾ ರವರ ಬಗ್ಗೆ :
* ಭಜರಂಗ್ ಪುನಿಯಾ ಭಾರತದ ಹರಿಯಾಣ ರಾಜ್ಯದ ಖುಡಾನ್ ಗ್ರಾಮದಲ್ಲಿ 26 ಫೆಬ್ರವರಿ 1994 ಜನಿಸಿದರು.
* ಇವರು ತಮ್ಮ ಏಳನೇ ವಯಸ್ಸಿನಲ್ಲಿ ಕುಸ್ತಿಯನ್ನು ಪ್ರಾರಂಭಿಸಿದರು ಮತ್ತು ಅವರ ತಂದೆಯವರು ಕ್ರೀಡೆಯನ್ನು ಮುಂದುವರಿಸಲು ಪ್ರೋತ್ಸಾಹ ಪಡೆದುಕೊಂಡರು.
* ನವದೆಹಲಿಯಲ್ಲಿ ಪುರುಷರ ಫ್ರೀಸ್ಟೈಲ್ 60 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು.

## 10- 03-2021

### ಮಾರ್ಚ್ 12 ರಿಂದ ಮೊದಲ 'ಕ್ವಾಡ್' ಸಮ್ಮೇಳನ



* ಮಾರ್ಚ್ 12ರಂದು ಮೊದಲ 'ಕ್ವಾಡ್' ಸಮ್ಮೇಳನವು ಭಾರತ ಆಸ್ಟ್ರೇಲಿಯಾ ಜಪಾನ್ ಮತ್ತು ಅಮೇರಿಕಾ ಈ ನಾಲ್ಕು ದೇಶಗಳ ನಡುವೆ ನಡೆಯಲಿದೆ.
* ಈ ಕ್ವಾಡ್ ಸಮ್ಮೇಳನ ಕಾರ್ಯಯೋಜನೆ ಚೌಕಟ್ಟಿನ ಕುರಿತಾದ ನಾಯಕರ ಮೊದಲ ಸಭೆಯಾಗಿದೆ.
* ಪ್ರಸ್ತುತ ಮಾರ್ಚ್ 12ರಂದು ನಡೆಯಲಿರುವ ಕ್ವಾಡ್ ಸಮ್ಮೇಳನಕ್ಕೆ ಭಾರತದ ಪ್ರಧಾನಿ ನರೇಂದ್ರ ಮೋದಿ, ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್, ಜಪಾನ್ ಪ್ರಧಾನಿ ಯೋಶಿಹಿಡೆ ಸುಗಾ ಹಾಗೂ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ವಿಡಿಯೋ ಕಾನ್ಫರನ್ಸ್ ಮೂಲಕ ಸಮ್ಮೇಳನದಲ್ಲಿ ಭಾಗಿಯಾಗಲಿದ್ದಾರೆ.
* ಈ 'ಕ್ವಾಡ್' ಸಮ್ಮೇಳನದಲ್ಲಿ 4 ದೇಶಗಳ ನಾಯಕರು ಜಾಗತಿಕ ಮತ್ತು ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲಿದ್ದಾರೆ ಜೊತೆಗೆ ಇಂಡೋ ಪೆಸಿಫಿಕ್ ಪ್ರದೇಶವನ್ನು ನಿಭಾಯಿಸು ಕುರಿತಾದ ಸಹಕಾರದ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.
* ಸಮುದ್ರತೀರ ಭದ್ರತೆ ಮತ್ತು ನೈಸರ್ಗಿಕ ವಿಕೋಪಗಳು, ಜೊತೆಗೆ ಹವಾಮಾನಗಳ ಮಾಹಿತಿ ಹೀಗೆ ಹಲವು ಸವಾಲುಗಳ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲಾಗುವದು.
* ಇನ್ನು ಕೋವಿಡ್ 19 ಸಾಂಕ್ರಾಮಿಕ ರೋಗದ ಲಸಿಕೆಗಳನ್ನು ಕಡಿಮೆ ದರದಲ್ಲಿ ತಯಾರಿಸಲು ಈ 4 ರಾಷ್ಟ್ರಗಳು ಪಾಲುದಾರಿಕೆ ನೀಡಲಿವೆ.

### ಕೇಂದ್ರ ಸರ್ಕಾರದಿಂದ 230 ಜನರಿಗೆ 'VIP' ಭದ್ರತೆ



* ಪ್ರಸ್ತುತ ಕೇಂದ್ರ ಸರ್ಕಾರವು ಕೇಂದ್ರದ ಭದ್ರತಾ ಸಂಸ್ಥೆಯು ಭದ್ರತೆಗೆ ಒಳಪಡುವ ವ್ಯಕ್ತಿ ಅಪಾಯದ ಮಟ್ಟವನ್ನು ಆಧರಿಸಿ 230 ಜನರಿಗೆ VIP ಭದ್ರತೆಯನ್ನು ನೀಡುತ್ತಿದೆ.
*ವ್ಯಕ್ತಿಯ ಭದ್ರತಾ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ, ಆದರೆ ಕೇಂದ್ರ ಸರ್ಕಾರವು 230 ಜನಗಳ ಭದ್ರತೆಗೆ ಆಗುತ್ತಿರುವ ವೆಚ್ಚದ ಮಾಹಿತಿಯನ್ನು ನೀಡಿಲ್ಲ.
* VIP ಭದ್ರತೆಯನ್ನು ನೀಡಲು CRPF ಮತ್ತು CISF ಅಂತಹ ಭದ್ರತಾ ಪಡೆಗಳು ಝಡ್ ಪ್ಲಸ್(Z+), ಝಡ್(Z) ಜೊತೆಗೆ ವೈ(Y) ಶ್ರೇಣಿಯ ಭದ್ರತೆಗಳನ್ನು ನೀಡಲಾಗುತ್ತಿದೆ ಎಂದು ಸಚಿವ ಜಿ. ಕಿಶನ್ ರೆಡ್ಡಿಯವರು ಲೋಕಸಭೆಯಲ್ಲಿ ಲಿಖಿತ ರೂಪದಲ್ಲಿ ಉತ್ತರ ನೀಡಿದ್ದಾರೆ.
* ಕೇಂದ್ರ ಸರ್ಕಾರವು ನೀಡುವ ಝಡ್ ಪ್ಲಸ್(Z+)ಭದ್ರತೆಯು ಉನ್ನತ ಶ್ರೇಣಿಯ ಭದ್ರತೆಯಾಗಿದೆ, ಈ ಝಡ್ ಪ್ಲಸ್ ಭದ್ರತಾ ಪಡೆಯಲ್ಲಿ 22 ರಿಂದ 30 ಕಮಾಂಡೋಗಳನ್ನು ಹೊಂದಿರುತ್ತದೆ.
* ಝಡ್ ಶ್ರೇಣಿಯ ಭದ್ರತಾ ಪಡೆಯಲ್ಲಿ 15 ರಿಂದ 18 ಮಂದಿ ಸಿಬ್ಬಂದಿಗಳನ್ನೂ ಹೊಂದಿರುತ್ತದೆ.
* ಕೇಂದ್ರ ಸರ್ಕಾರ ನೀಡುವ VIP ಭದ್ರತೆಯಲ್ಲಿ ವೈ+ ಮತ್ತು ವೈ ಕೊನೆಯ ಭದ್ರತಾ ಶ್ರೇಣಿಗಳು, ವೈಪ್ಲಸ್ (y+)ನಲ್ಲಿ 8 ರಿಂದ 12 ಕಮಾಂಡೋಗಳು ಹಾಗೂ ವೈ(Y)ಶ್ರೇಣಿಯಲ್ಲಿ 6 ರಿಂದ 10 ಕಮಾಂಡೊಗಳು ಭದ್ರತೆ ನೀಡುತ್ತಾರೆ.
* ಪ್ರಸ್ತುತ ಕೇಂದ್ರ ಸರ್ಕಾರ ನೀಡುವ ಈ ಭದ್ರತೆಯನ್ನು ಮುಂದುವರೆಸುವುದು, ವಾಪಸ್ ಪಡೆಯುವುದು ಅಥವಾ ಬದಲಾವಣೆ ಮಾಡುವುದು ವ್ಯಕ್ತಿಗಿರುವ ಅಪಾಯದ ಮಟ್ಟವನ್ನು ಪರಿಗಣಿಸಿ ನಿರ್ಧಾರ ತಗೆದುಕೊಳ್ಳಗಾಗುತ್ತದೆ.

## ಉತ್ತರಾಖಂಡ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ರಾಜೀನಾಮೆ



* ಉತ್ತರಾಖಂಡದಲ್ಲಿ ಸಿಎಂ ತ್ರಿವೇಂದ್ರ ಸಿಂಗ್ ರಾವತ್ ಇತ್ತೀಚಿಗೆ ರಾಜೀನಾಮೆ ನೀಡಿದರು.
* ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್'ರವರು ಬಿಜೆಪಿ ವರಿಷ್ಠರ ನಿರ್ದೇಶನದ ಮೇರೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿದ್ದಾರೆ, ಹಾಗೂ ಈ ರಾಜಿನಾಮೆಯನ್ನು ರಾಜ್ಯಪಾಲರು ಅಂಗೀಕರಿಸಿದ್ದಾರೆ.
* ಉತ್ತರಾಖಂಡ ರಾಜ್ಯದಲ್ಲಿ ಪಕ್ಷದ ನಾಯಕರ ಜತೆಗೆ ಸಂಪರ್ಕ ಕಳೆದುಕೊಂಡಿರುವ ಆರೋಪದಿಂದಾಗಿ ರಾವತ್'ರವರು ಬಿಜೆಪಿ ವರಿಷ್ಠರ ನಿರ್ದೇಶನದ ಮೇರೆಗೆ ರಾಜೀನಾಮೆ ನೀಡಿದ್ದಾರೆ.
* ತ್ರಿವೇಂದ್ರ ಸಿಂಗ್ ರಾವತ್ 18 ಮಾರ್ಚ್ 2017 ರಿಂದ 2021 ಮಾರ್ಚ್ 9 ರವರೆಗೆ ಉತ್ತರಾಖಂಡದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಉತ್ತರಾಖಂಡದ ಬಗ್ಗೆ ಮಾಹಿತಿ :
* 2000ರಲ್ಲಿ ಉತ್ತರಾಖಂಡ್ ರಾಜ್ಯವು ರಚನೆಯಾಗಿದೆ.
* ಉತ್ತರಾಖಂಡವು ಇದು ಹಿಂದೂ ಯಾತ್ರಾ ಸ್ಥಳಗಳಿಗೆ ಹೆಸರುವಾಸಿಯಾಗಿದೆ.
*ರಾಜ್ಯದಅರಣ್ಯದಜಿಮ್‌ಕಾರ್ಬೆಟ್‌ರಾಷ್ಟ್ರೀಯ ಉದ್ಯಾನವನ ಮತ್ತು ಇತರ ಸ್ಥಳೀಯ ವನ್ಯಜೀವಿಗಳಿಗೆ ಆಶ್ರಯ ನೀಡುತ್ತದೆ
* ಉತ್ತರಾಖಂಡದ ರಾಜ್ಯಪಾಲ: ಬೇಬಿ ರಾಣಿ ಮೌರ್ಯ ಟ್ರೆಂಡಿಂಗ್
* 2012ರ ಜನಗತಿ ಪ್ರಕಾರ ಜನಸಂಖ್ಯೆ 1.01 ಕೋಟಿ
* ಉತ್ತರಾಖಂಡದ ಅಧಿಕೃತ ಪ್ರಾಣಿ ಆಲ್ಪೈನ್ ಕಸ್ತೂರಿ ಜಿಂಕೆ ತ್ರಿವೇಂದ್ರ ಸಿಂಗ್ ರಾವತ್ ರವರ ಬಗ್ಗೆ ಮಾಹಿತಿ :
* ತ್ರಿವೇಂದ್ರ ಸಿಂಗ್ ರಾವತ್ ಅವರು 20 ಡಿಸೆಂಬರ್ 1960 ಜನಿಸಿದರು, ಇವರು 2017 ಮತ್ತು 2021 ರ ನಡುವೆ ಉತ್ತರಾಖಂಡದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.
* ಭಾರತೀಯ ಜನತಾ ಪಕ್ಷದ ಪ್ರಮುಖ ರಾಜಕಾರಣಿಯಾಗಿದ್ದರೆ.

## ಪ್ಲಾಸ್ಟಿಕ್ ಪಾರ್ಕ್ ನಿರ್ಮಾಣ ಕೇಂದ್ರ ಸರ್ಕಾರದ ಒಪ್ಪಿಗೆ




* ಪ್ರಸ್ತುತ ಕರ್ನಾಟಕ ಮತ್ತು ಉತ್ತರ ಪ್ರದೇಶಗಳಲ್ಲಿ ತಲಾ ಒಂದರಂತೆ ಪ್ಲಾಸ್ಟಿಕ್ ಪಾರ್ಕ್ ಸ್ಥಾಪನೆಗೆ ಕೇಂದ್ರ ಸರ್ಕಾರ ಇತ್ತೀಚಿಗೆ ತಾತ್ವಿಕ ಒಪ್ಪಿಗೆ ನೀಡಿದೆ.
* ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ.ಸದಾನಂದಗೌಡ ಅವರು ಲೋಕಸಭೆಯಲ್ಲಿ ಪ್ಲಾಸ್ಟಿಕ್ ಪಾರ್ಕ್ ಸಂಬಂಧ ಲಿಖಿತ ಉತ್ತರವನ್ನು ನೀಡಿದರು.
* ಪ್ಲಾಸ್ಟಿಕ್ ಪಾರ್ಕ್ ನಿರ್ಮಾಣಕ್ಕಾಗಿ ಕರ್ನಾಟಕ, ಗುಜರಾತ್, ಆಂಧ್ರಪ್ರದೇಶ, ಉತ್ತರ ಪ್ರದೇಶ, ಬಿಹಾರ, ಹಿಮಾಚಲ ಪ್ರದೇಶ ಮತ್ತು ಗೋವಾ ಸರ್ಕಾರಗಳಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿತ್ತು.
* ಪ್ರಸ್ತುತ ಕರ್ನಾಟಕದ ಮಂಗಳೂರು ಬಳಿಯ ಗಂಜಿಮಠ ಮತ್ತು ಉತ್ತರ ಪ್ರದೇಶದ ಗೋರಖ್‌ಪುರ ಬಳಿ ಪ್ಲಾಸ್ಟಿಕ್ ಪಾರ್ಕ್ ನಿರ್ಮಾಣ ಮಾಡಲು, ಈ ಎರಡು ರಾಜ್ಯ ಸರ್ಕಾರಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಅನುಮತಿಯನ್ನು ನೀಡಿದೆ ಎಂದು ಸಚಿವರು ತಿಳಿಸಿದ್ದಾರೆ.

## ಮೊದಲ ಬಾರಿ ಟಿವಿಯಲ್ಲಿ ಮಂಗಳಮುಖಿಯ ನಿರೂಪಣೆ



* ನೆರೆಯ ರಾಷ್ಟ್ರ ಬಾಂಗ್ಲಾ ದೇಶದಲ್ಲಿ ಇದೆ ಮೊಟ್ಟ ಮೊದಲ ಬಾರಿ ಮಂಗಳಮುಖಿಯೊಬ್ಬರು ಖಾಸಗಿ ಸುದ್ದಿವಾಹಿನಿಯಲ್ಲಿ ನಿರೂಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
* ಪ್ರಸ್ತುತ ಬಾಂಗ್ಲಾದೇಶದಲ್ಲಿ ಅಂದಾಜು 1.5 ಮಿಲಿಯನ್ ಮಂಗಳಮುಖಿಯಾರಿದ್ದಾರೆ.
* ಮಂಗಳಮುಖಿಯಾಗಿರುವ 'ತಶ್ನುವಾ ಅನನ್' ಇವರು ಮೊದಲ ಬಾರಿ ಖಾಸಗಿ ಸುದ್ದಿ ವಾಹಿನಿಯಲ್ಲಿ ನಿರೂಪಣೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.
* 'ತಶ್ನುವಾ ಅನನ್' ರವರು ಢಾಕಾದ ಜೇಮ್ಸ್ ಪಿ. ಗ್ರಾಂಟ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ನಲ್ಲಿ ಸಾರ್ವಜನಿಕ ಆರೋಗ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಮೊದಲ ಮಂಗಳಮುಖಿಯಾಗಿ ಹೊರಹೊಮ್ಮಿದ್ದರು.

## ಐಸಿಸಿ ಫೆಬ್ರುವರಿ ತಿಂಗಳ ಆಟಗಾರ ಪ್ರಶಸ್ತಿ ಪಡೆದ ಆರ್ ಅಶ್ವಿನ್



* ಅಂತರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ(ICC) ಈ ಹಿಂದೆ ಹೇಳಿದಂತೆ ಪ್ರತಿ ತಿಂಗಳು ಪ್ರತಿಭಾನ್ವಿತ ಆಟಗಾರರನ್ನು ಗುರುತಿಸಿ ಅವರಿಗೆ 'ಐಸಿಸಿ ತಿಂಗಳ ಆಟಗಾರ' ಪ್ರಶಸ್ತಿಯನ್ನು ನೀಡುತ್ತದೆ.
* ICC ನೀಡುವ ತಿಂಗಳ ಆಟಗಾರ ಪ್ರಶಸ್ತಿಯನ್ನು, ಈ ಬಾರಿಯ ಅಂದರೆ ಫೆಬ್ರವರಿ ತಿಂಗಳ ಆಟಗಾರ ಪ್ರಶಸ್ತಿಯನ್ನು ಭಾರತ ತಂಡದ ಬೌಲರ್ (ಆಫ್ ಸ್ಪಿನ್ನರ್) ಆರ್ ಅಶ್ವಿನ್ ಅವರಿಗೆ ಲಭಿಸಿದೆ.
* ICCಯ ಜನೇವರಿ ತಿಂಗಳ ಆಟಗಾರ ಪ್ರಶಸ್ತಿಯನ್ನು ರಿಷಿಬ್ ಪಂತ ಪಡೆದುಕೊಂಡಿದ್ದರು.
* ಈ ತಿಂಗಳ ಆಟಗಾರ ಪ್ರಶಸ್ತಿಗೆ ಇಂಗ್ಲೆಂಡ್ ನಾಯಕ ಜೋ ರೂಟ್ ಹಾಗೂ ವೆಸ್ಟ್ ಇಂಡೀಸ್ ತಂಡದಕೈಲ್‌ಮೇಯರ್ಸ್,ಮತ್ತುಭಾರತ ತಂಡದ ಆರ್ ಅಶ್ವಿನ್'ರವರ ಹೆಸರುಗಳನ್ನೂ ಐಸಿಸಿ ನಾಮ ನಿರ್ದೇಶನ ಮಾಡಿತ್ತು, ಇದೀಗ ಅಂತಿಮವಾಗಿ ಈ ಪ್ರಶಸ್ತಿ ಭಾರತ ತಂಡದ ಆರ್ ಅಶ್ವಿನ್'ರವರಿಗೆ ಪ್ರಶಸ್ತಿ ಲಭಿಸಿದೆ.
* ಮಹಿಳಾ ವಿಭಾಗದ ಆಟಗಾರಲ್ಲಿ ಇಂಗ್ಲೆಂಡ್‌ನ ಟಮ್ಮಿ ಬ್ಯೂಮಾಂಟ್ ಅವರಿಗೆ ಫೆಬ್ರವರಿ ತಿಂಗಳ ಮಹಿಳಾ ಆಟಗಾರ್ತಿ ಪ್ರಶಸ್ತಿ ಲಭಿಸಿದೆ. ಆರ್ ಅಶ್ವಿನ್ ಫೆಬ್ರುವರಿ ತಿಂಗಳ ಪ್ರಶಸ್ತಿ ಪಡೆಯಲು ಕಾರಣ:
* ಭಾರತ ಮತ್ತು ಇಂಗ್ಲೆಂಡ್ ದೇಶಗಳ ಮಧ್ಯ ನಡೆದ ಟೆಸ್ಟ್ ಪಂದ್ಯಗಳಲ್ಲಿ ಆರ್ ಅಶ್ವಿನ್'ರವರು ಮೊದಲ 2 ಟೆಸ್ಟ್ ಪಂದ್ಯಗಳಲ್ಲಿ 5 ವಿಕೆಟ್ ಪಡೆದರು, ಒಟ್ಟಾರೆ 24 ವಿಕೆಟ್‌ಗಳನ್ನು ಗಳಿಸಿದ್ದರು. ಈ ಟೆಸ್ಟ್ ಹಣಾಹಣಿಯಲ್ಲಿ ಆರ್ ಅಶ್ವಿನ್'ರವರು ತಮ್ಮ ವೃತ್ತಿ ಜೀವನದ ಐದನೇ ಟೆಸ್ಟ್ ಶತಕ ಬಾರಿಸಿ ಭಾರತ ತಂಡ ಗೆಲುವಲ್ಲಿ ಪ್ರಮುಖ ಪಾತ್ರ ವಹಿಸಿದರು.

* ಆರ್ ಅಶ್ವಿನ್'ರವರು ಟೆಸ್ಟ್ ನಲ್ಲಿ 400 ವಿಕೆಟ್ ಪಡೆದು ಸಾಧನೆ ಮಾಡಿದ್ದಾರೆ.

## ಉಡುಪಿರಾಮಚಂದ್ರರಾವ್ 'ಸ್ಯಾಟಲೈಟ್‌ಮ್ಯಾನ್'ಅವರ ಜನ್ಮದಿನ



* ಇಸ್ರೋ ಮಾಜಿ ಮುಖ್ಯಸ್ಥ ಉಡುಪಿ ರಾಮಚಂದ್ರರಾವ್ ಅವರ 89ನೇ ಜನ್ಮದಿನ(ದಿನಾಂಕ 10 ಮಾರ್ಚ್), ಇವರು ಸ್ಯಾಟಲೈಟ್ ಮ್ಯಾನ್ ಎಂದು ಪ್ರಖ್ಯಾತಿ ಪಡೆದಿರುವ ವಿಜ್ಞಾನಿಯಾಗಿದ್ದರು.
* ಉಡುಪಿ ರಾಮಚಂದ್ರರಾವ್, ಅಂತರರಾಷ್ಟ್ರೀಯ ವೈಮಾನಿಕ ಫೆಡರೇಷನ್ ಸಂಸ್ಥೆ, ಬಾಹ್ಯಾಕಾಶ ವಿಜ್ಞಾನದಲ್ಲಿ ಅತ್ಯುತ್ತಮ ಸೇವೆಸಲ್ಲಿಸಿದವ ಪ್ರಮುಖರಾಗಿದ್ದಾರೆ.
* ರಾಮಚಂದ್ರರಾವ್'ರವರು ಭಾರತದ ಬಾಹ್ಯಾಕಾಶ ಯೋಜನೆಯ ಪಿತಾಮಹ ಎಂದೇ ಪ್ರಖ್ಯಾತಿ ಪಡೆದಿದ್ದರು.
* ಪ್ರಸ್ತುತ ಭಾರತದ ಎರಡನೇ ಅತಿ ಶ್ರೇಷ್ಠ ಪ್ರಶಸ್ತಿ ಪದ್ಮ ವಿಭೂಷಣ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ನಾಸಾ ಪುರಸ್ಕಾರ ಹೀಗೆ ಹಲವು ಪ್ರಶಸ್ತಿಗಳನ್ನು ರಾಮಚಂದ್ರರಾವ್'ರವರು ಸಾಧನೆಗೆ ನೀಡಿ ಗೌರವಿಸಲಾಗಿತ್ತು.
* 2017ರ ಜುಲೈ 24 ರಂದು ರಾಮಚಂದ್ರರಾವ್ ಅವರು ಬೆಂಗಳೂರಿನಲ್ಲಿ ವಿಧಿವಶರಾದರು.
* ಇವರ ಜನ್ಮ ದಿನದ ಪ್ರಯುಕ್ತ Google ಸಂಸ್ಥೆಯು ತನ್ನ doodle ಲೋಗೋವನ್ನು ಬದಲಿಸುವ ಮೂಲಕ ಗೌರವ ಸೂಚಿಸಿದೆ.

# 11-03-2021

## ಭಾರತವು 30 ಶಸ್ತ್ರಸಜ್ಜಿತ ಡ್ರೋನ್ ಖರೀದಿಸಲು ಅಮೆರಿಕದೊಂದಿಗೆ ಒಪ್ಪಂದ



* ಭಾರತೀಯ ಸೇನೆಯು ತನ್ನ ಸೇನಾ ಸಾಮರ್ಥ್ಯ ಬಲಪಡಿಸಿಕೊಳ್ಳಲು ಸರಿ ಸುಮಾರು 22 ಸಾವಿರ ಕೋಟಿ ಮೌಲ್ಯದ 30 ಶಸ್ತ್ರಸಜ್ಜಿತ ಡ್ರೋನ್ ಗಳನ್ನು ಖರೀದಿಸಲು ಅಮೆರಿಕದೊಂದಿಗೆ ಭಾರತವು ರಕ್ಷಣಾ ಒಪ್ಪಂದ ಮಾಡಿಕೊಂಡಿದೆ.
* ಈ ಒಪ್ಪಂದದ ಯೋಜನೆಯ ಮೂಲಕ ಭಾರತದ ಸೇನೆಗಳಿಗೆ MQ 9 ರೀಪರ್ ಡ್ರೋನ್ ಗಳನ್ನು ಖರೀದಿಮಾಡಲಾಗುವದು ಎಂದು ಭಾರತ ಸರ್ಕಾರ ತಿಳಿಸಿದೆ.
* ರಕ್ಷಣಾ ಸ್ವಾಧೀನ ಮಂಡಳಿ ಸಭೆಯಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಈ ಶಸ್ತ್ರಸಜ್ಜಿತ ಡ್ರೋನ್ ಗಳ ಖರೀದಿಗೆ ಅನುಮೋದನೆ ನೀಡುವ ಕುರಿತು ತಿಳಿದು ಬಂದಿದೆ.
* ಅಮೆರಿಕ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್'ರವರು ಇದೆ ತಿಂಗಳ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡಿ ಒಪ್ಪಂದಕ್ಕೆ ಚಾಲನೆ ನೀಡಲಿದ್ದಾರೆ ಎಂಬ ಮಾಹಿತಿ ಇದೆ.
* ಅಮೇರಿಕದ ಸ್ಯಾನ್ ಡಿಯಾಗೊ ಮೂಲದ ಜನರಲ್ ಅಟಾಮಿಕ್ಸ್ ಕಂಪನಿಯು ಈ MQ 9B ಪರಭಕ್ಷಕ ಡ್ರೋನ್'ಗಳನ್ನು ತಯಾರಿಸಲಾಗಿದೆ. MQ 9 ಡ್ರೋನ್'ಗಳ ಮಾಹಿತಿ:
* ಇವುಗಳು ಗಾಳಿಯಿಂದ ನೆಲದವರೆಗೆ ಕ್ಷಿಪಣಿಗಳ ಜೊತೆಗೆ ಸೆನ್ಸರ್ ಗಳು ಮತ್ತು ಲೇಸರ್ ಗೈಡೆಡ್ ಬಾಂಬ್ ಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿವೆ.
* ಈ ಹಿಂದೆ ಭಾರತೀಯ ನೌಕಾಪಡೆ ಹಿಂದೂ ಮಹಾಸಾಗರ ಪ್ರದೇಶದಲ್ಲಿ ಕಣ್ಗಾವಲು ಹೆಚ್ಚಿಸಲು ಎರಡು ಶಸ್ತ್ರರಹಿತ MQ 9B C ಗಾರ್ಡಿಯನ್ ಡ್ರೋನ್ ಗಳನ್ನು ಒಂದು ವರ್ಷದ ಅವಧಿಗೆ ಗುತ್ತಿಗೆಗೆ ಪಡೆಯಲಾಗಿತ್ತು, ಮತ್ತು ಈ ಡ್ರೋನ್'ಗಳ ಅವಧಿಯನ್ನು ವಿಸ್ತರಿಸಲು ತಿಳಿಸಲಾಗಿದೆ. ಭಾರತೀಯ ನೌಕಾಪಡೆ ಬಗ್ಗೆ ಮಾಹಿತಿ :
* ಭಾರತೀಯ ನೌಕಾಪಡೆ 1 ಏಪ್ರಿಲ್ 1895 ಸ್ಥಾಪನೆಯಾಗಿದೆ
* ಭಾರತೀಯ ನೌಕಾಪಡೆ ಇದು ಜಗತ್ತಿನ ಐದನೇಯ ಅತಿ ದೊಡ್ಡ ನೌಕಾಪಡೆಯಾಗಿದೆ.
* ಭಾರತೀಯ ನೌಕಾಪಡೆಯಲ್ಲಿ ಸುಮಾರು 55,000 ಜನರು ಕಾರ್ಯನಿರತರಾಗಿದ್ದಾರೆ ಮತ್ತು ಇವರಲ್ಲಿ ಸುಮಾರು 5000 ಜನ ನೌಕಾ ವಾಯುಪಡೆಗೆ ಸೇರಿದ್ದು ಮತ್ತು ಸುಮಾರು 2000 ಜನ ನೌಕಾ ಕಮಾಂಡೋಗಳಾಗಿದ್ದಾರೆ.
* ಭಾರತೀಯ ನೌಕಾಪಡೆ 155 ನೌಕೆಗಳನ್ನು ಹೊಂದಿದ್ದು, ಐ.ಎನ್.ಎಸ್.ವಿರಾಟ್ ಎಂಬ ವಾಯು ಯುದ್ಧ ನೌಕೆಯನ್ನು ಹೊಂದಿದೆ.
* ಭಾರತದ ರಾಷ್ಟ್ರಪತಿಗಳು ಭಾರತೀಯ ಸೇನೆಯ ಸರ್ವೋಚ್ಚ ಕಮಾಂಡರ್, ಮತ್ತು ಅದರ ವೃತ್ತಿಪರ ಮುಖ್ಯಸ್ಥರು ನಾಲ್ಕು ಸ್ಟಾರ್ ಜನರಲ್ ಸೇನಾ ಮುಖ್ಯಸ್ಥರಾಗಿದ್ದಾರೆ.

## ದೇಶದಲ್ಲಿ GST ಅಕ್ರಮ : ಯಾವ ರಾಜ್ಯಗಳು ಭಾಗಿ




* ಭಾರತ ದೇಶದಲ್ಲಿ ಜಿಎಸ್‌ಟಿ(GST) ಅಕ್ರಮದ ವಿಚಾರ ಈ 4 ರಾಜ್ಯಗಳಲ್ಲಿ ಕಂಡು ಬಂದಿರುವುದಾಗಿ ವರದಿಯಾಗಿದೆ.
*ಕೇಂದ್ರವಿತ್ತಸಚಿವಾಲಯಸಂಸತ್ತಿಗೆನೀಡಿರುವವರದಿಪ್ರಕಾರ2017 18ರಿಂದ 2020 21ರ ನಡುವೆ ದೆಹಲಿಯಲ್ಲಿ 3,295 ಅಕ್ರಮ ಪ್ರಕರಣಗಳು, ತಮಿಳುನಾಡಿನಲ್ಲಿ 3,220 ಅಕ್ರಮ ಪ್ರಕರಣಗಳು, ಹಾಗೂ ಮಹಾರಾಷ್ಟ್ರ 3,195 ಅಕ್ರಮ ಪ್ರಕರಣಗಳು ಜೊತೆಗೆ 4 ನೇ ಸ್ಥಾನದಲ್ಲಿ ಗುಜರಾತ್ ರಾಜ್ಯದಲ್ಲಿ 2,848 ಹಗರಣ ನಡೆದಿವೆ ಎಂದು ತಿಳಿಸಲಾಗಿದೆ.
* ರಾಜ್ಯ ವಾಣಿಜ್ಯ ತೆರಿಗೆ ಆಯುಕ್ತ ಜೆ.ಪಿ ಗುಪ್ತಾ ನೀಡಿರುವ ಮಾಹಿತಿಯ ಪ್ರಕಾರ ಬಹಳಷ್ಟು ಜನರು GSTಯನ್ನು ನಕಲಿ ನೋಂದಣಿ ಮಾಡಿಸಿಕೊಂಡಿದ್ದಾರೆ, ಹಾಗೂ ಅನೇಕರು ಜಿಎಸ್‌ಟಿ ನೋಂದಣಿಗಳನ್ನುಬಳಸಿಕೊಂಡು ಅಕ್ರಮವಾಗಿ ಇನ್‌ಪುಟ್ ಕ್ರೆಡಿಟ್ ಗಳನ್ನು ಕ್ಲೇಂ (Cliam) ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ದೇಶದಲ್ಲಿ GST ಬಗ್ಗೆ ಮಾಹಿತಿ :
* ಜಿಎಸ್ ಟಿ ಅಂದರೆ ಸರಕು ಮತ್ತು ಸೇವಾ ತೆರಿಗೆ (Goods and Services Tax)
* ಭಾರತದ ತೆರಿಗೆ ವ್ಯವಸ್ಥೆಯು ದಿ.1 ಜುಲೈ, 2017 ಮಧ್ಯರಾತ್ರಿಯಿಂದಲೇ ದೇಶದಾದ್ಯಂತ ಜಾರಿಗೆ ಬಂದಿದೆ.
* ಭಾರತದ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಮಧ್ಯರಾತ್ರಿ 12ಗಂಟೆಗೆ ಅವರು ಗುಂಡಿ ಒತ್ತುವ ಮೂಲಕ ಹೊಸ ತೆರಿಗೆ ವ್ಯವಸ್ಥೆಗೆ ಚಾಲನೆ ನೀಡಿದರು.

## ಉತ್ತರಾಖಂಡ ನೂತನ ಮುಖ್ಯಮಂತ್ರಿಯಾಗಿ ತೀರಥ್ ಸಿಂಗ್ ರಾವತ್ ಪ್ರಮಾಣವಚನ ಸ್ವೀಕಾರ



* ಇತ್ತೀಚಿಗೆ ಉತ್ತರಾಖಂಡ ರಾಜ್ಯದ ತ್ರಿವೇಂದ್ರ ಸಿಂಗ್ ರಾವತ್ ರಾಜೀನಾಮೆ ನೀಡಿದ ಹಿನ್ನಲೆಯಿಂದಾಗಿ, ಪ್ರಸ್ತುತ ಉತ್ತರಾಖಂಡ ರಾಜ್ಯದ 9ನೇ ಮುಖ್ಯಮಂತ್ರಿಯಾಗಿ ತೀರಥ್ ಸಿಂಗ್ ರಾವತ್'ಅವರು ಪ್ರಮಾಣವಚನ ಸ್ವೀಕಾರ ಮಾಡಿದರು.
* ಪ್ರಸ್ತುತ ಉತ್ತರಾಖಂಡ ರಾಜ್ಯವು 2000ನೇ ಇಸವಿಯಲ್ಲಿ ರಚನೆಯಾಗಿದ್ದು, ಉತ್ತರಾಖಂಡ್ ರಾಜ್ಯದ ಮೊದಲ ಶಿಕ್ಷಣ ಸಚಿವರಾಗಿ, ಮತ್ತು ಬಿಜೆಪಿ ಯುವ ಮೋರ್ಚಾಅಧ್ಯಕ್ಷ,ಉತ್ತರಪ್ರದೇಶರಾಜ್ಯಬಿಜೆಪಿಉಪಾಧ್ಯಕ್ಷ,ಜೊತೆಗೆಉತ್ತರಾಖಂಡ್ ಬಿಜೆಪಿ ಅಧ್ಯಕ್ಷರಾಗಿ ತೀರಥ್ ಸಿಂಗ್ ರಾವತ್'ರವರು ಕಾರ್ಯ ನಿರ್ವಹಿಸಿದ್ದರು.
* ತೀರಥ್ ಸಿಂಗ್ ರಾವತ್'ರವರು ಉತ್ತರಾಖಂಡ ರಾಜ್ಯ ರಚನೆ ಆದಾಗಿನಿಂದ ಸತತವಾಗಿ ವಿಧಾನಸಭೆಗೆ ಆಯ್ಕೆಯಾಗಿ ಮುಂದೆ ಸಾಗುತ್ತಿದ್ದು, ಈ ಮೊದಲು 1997ರಲ್ಲಿ ಉತ್ತರ ಪ್ರದೇಶ ವಿಧಾನಪರಿಷತ್ ಸದಸ್ಯರಾಗಿಆಯ್ಕೆಯಾಗಿದ್ದರು.ತೀರಥ್ ಸಿಂಗ್ ರಾವತ್'ರವರಬಗ್ಗೆ:
* ತಿರಥ್ ಸಿಂಗ್ ರಾವತ್ ರವರು 9 ಏಪ್ರಿಲ್ 1964 ಜನಿಸಿದರು. ಇವರು ಭಾರತೀಯ ಜನತಾ ಪಕ್ಷದ ಪ್ರಮುಖ ರಾಜಕಾರಣಿಯಾಗಿದ್ದಾರೆ.
* ಉತ್ತರಾಖಂಡದಭಾರತೀಯಜನತಾಪಕ್ಷದಮುಖ್ಯಸ್ಥರಾಗಿದ್ದರುಮತ್ತುಉತ್ತರಾಖಂಡ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದರು.
* ಪ್ರಸ್ತುತ ತಿರಥ್ ಸಿಂಗ್ ರಾವತ್ ರವರು 2021 ರ ಉತ್ತರಾಖಂಡದ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸುತಿದ್ದಾರೆ.

## ಮುಂಬೈನ ಭಾರತೀಯ ನೌಕಾಪಡೆಗೆ ಜಲಾಂತರ್ಗಾಮಿ INS ಕರಂಜ್ ಸೇರ್ಪಡೆ



* ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕರಂಬೀರ್ ಸಿಂಗ್ ಮತ್ತು ಅಡ್ಮಿರಲ್ ನಿವೃತ್ತ ವಿ.ಎಸ್. ಶೇಖಾವತ್ ಅವರ ಅಧ್ಯಕ್ಷತೆಯಲ್ಲಿ ಮುಂಬೈನ ನೌಕಾಪಡೆಗೆ ಸ್ಕಾರ್ಪೀನ್ ಕ್ಲಾಸ್ ಜಲಾಂತರ್ಗಾಮಿ ಐಎನ್ಎಸ್ (INS) ಕರಂಜ್ ಅನ್ನು ಸೇರ್ಪಡೆ ಮಾಡಲಾಯಿತು.
* ಈ ಜಲಾಂತರ್ಗಾಮಿ ನೌಕೆಗಳನ್ನೂ ಸ್ಕಾರ್ಪೀನ್ ರಫ್ತು ಮಾರುಕಟ್ಟೆಗಾಗಿ ನೇವಲ್ ಗ್ರೂಪ್ ಅಭಿವೃದ್ದಿಪಡಿಸಿದೆ.
* ಒಟ್ಟಾರೆ 42 ಹಡಗುಗಳು ಮತ್ತು ಜಲಾಂತರ್ಗಾಮಿ ನೌಕೆಗಳಲ್ಲಿ 40 ಭಾರತೀಯ ಶಿಪ್ ಯಾರ್ಡ್‌ಗಳಲ್ಲಿ ನಿರ್ಮಿಸಲಾಗುತ್ತಿದೆ, ಇದು ಆತ್ಮನಿರ್ಭರ ಭಾರತ ಯೋಜನೆಯ ಪಾತ್ರವಾಗಿದೆ ಎಂದು ತಿಳಿಸಿದರು.
* ಐಎನ್ಎಸ್ ಕಾರಂಜ್ ಅನ್ನು ಮುಂಬೈನ ಹಡಗು ನಿರ್ಮಾಣಗಾರ ಮಜಾಗನ್ ಡಾಕ್ ಲಿಮಿಟೆಡನಲ್ಲಿ ನಿರ್ಮಿಸಲಾಗಿದೆ.

## ICC ಟೆಸ್ಟ್ ರ್ಯಾಂಕಿಂಗ್'ನಲ್ಲಿ 7ನೇ ಸ್ಥಾನ ಪಡೆದ ರಿಷಭ ಪಂತ್, 2ನೇ ಸ್ಥಾನ ಪಡೆದ ಆರ್. ಅಶ್ವಿನ್

*ಭಾರತದತಂಡದಆಟಗಾರವಿಕೆಟ್‌ಕೀಪರ್ ಬ್ಯಾಟ್ಸಮನ್'ಆಗಿರುವರಿಷಭ್‌ಪಂತ್‌ಇತ್ತೀಚಿಗೆ ನಡೆದ ಇಂಗ್ಲೆಂಡ್ ವಿರುದ್ಧ 4ನೇ ಟೆಸ್ಟ್‌ಪಂದ್ಯದಲ್ಲಿ ಶತಕ ಬಾರಿಸಿ ಉತ್ತಮ ಪ್ರದರ್ಶನ ನೀಡಿದ್ದರು, ಇದರಿಂದಾಗಿ ರಿಷಭ್ ಪಂತ್'ರವರು ಐಸಿಸಿ ಟೆಸ್ಟ್ ರ್ಯಾಂಕಿಂಗ್‌ನಲ್ಲಿ 7ನೇ ಸ್ಥಾನ ಪಡೆದಿದ್ದಾರೆ.
* ಪ್ರಸ್ತುತ ಐಸಿಸಿ ಟೆಸ್ಟ್ ರ್ಯಾಂಕಿಂಗ್‌ನಲ್ಲಿ 7ನೇ ಸ್ಥಾನವನ್ನು ರೋಹಿತ್ ಶರ್ಮ ಮತ್ತು ರಿಷಭ್ ಪಂತ್ ಹಂಚಿಕೊಂಡಿದ್ದಾರೆ.
* ಭಾರತದ ಕ್ರಿಕೆಟ್ ತಂಡದ ನಾಯಕರಾಗಿರುವ ವಿರಾಟ್ ಕೊಹ್ಲಿಯವರು ಐಸಿಸಿ ಟೆಸ್ಟ್ ರ್ಯಾಂಕಿಂಗ್‌ನಲ್ಲಿ 5 ನೇ ಸ್ಥಾನವನ್ನು ಪಡೆದಿದ್ದಾರೆ.
* ಐಸಿಸಿ ಟೆಸ್ಟ್ ರ್ಯಾಂಕಿಂಗ್‌ನಲ್ಲಿ 1 ನೇ ಸ್ಥಾನವನ್ನು ನ್ಯೂಜಿಲಂಡ್ ತಂಡದ ನಾಯಕನಾಗಿರುವ ಕನೆ ವಿಲಿಯಮ್ಸನ್ ಪಡೆದುಕೊಂಡಿದ್ದಾರೆ.
* ಐಸಿಸಿ ಟೆಸ್ಟ್ ರ್ಯಾಂಕಿಂಗ್'ನ ಬೌಲರ್‌ಗಳ ವಿಭಾಗದಲ್ಲಿ ಆರ್. ಅಶ್ವಿನ್ 2ನೇ ಪಡೆದುಕೊಂಡಿದ್ದಾರೆ, ಮತ್ತು ಪ್ರಥಮ ಸ್ಥಾನವನ್ನು ಆಸ್ಟ್ರೇಲಿಯಾ ತಂಡದ ಆಟಗಾರ ಪ್ಯಾಟ್ ಕಮ್ಮಿನ್ಸ್ ಪಡೆದುಕೊಂಡಿದ್ದಾರೆ.

## ಉತ್ತರ ಪ್ರದೇಶದಲ್ಲಿ ಅರ್ಜುನ ಸಹಾಯಕ್ ನೀರಾವರಿ ಯೋಜನೆ



* ಸಿಎಂ ಯೋಗಿ ಆದಿತ್ಯನಾಥ್' ಅವರು ಇತ್ತೀಚಿಗೆ 'ಅರ್ಜುನ ಸಹಾಯಕ್ ನೀರಾವರಿ ಯೋಜನೆ'ಯನ್ನು ಹಮೀರ್‌ಪುರ, ಬಂಡಾ ಮತ್ತು ಮಹೋಬಾದ ವ್ಯಾಪ್ತಿಯಲ್ಲಿ ಯೋಜನೆಯಾಗಿದ್ದು, ಈ ಯೋಜನೆಯಿಂದ ಇಲ್ಲಿನ ರೈತರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರಲಿದೆ ಎಂದು ತಿಳಿಸಿದರು.
* ಈ ಅರ್ಜುನ ಸಹಾಯಕ್ ನೀರಾವರಿ ಯೋಜನೆಯ 2,600 ಕೋಟಿ ರೂ. ಮೌಲ್ಯದಾಗಿದ್ದು, ಇದು ಒಂದು ಅಥವಾ ಎರಡು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ತೀರ್ಮಾನಿಸಿದೆ, ಹಾಗೂ ಇದನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು.
* ಮಹೋಬಾ ಜಿಲ್ಲೆಯ ಅರ್ಜುನ್ ಸಹಾಯಕ್ ಯೋಜನೆಯಡಿಯ ಲಹಚುರ ಅಣೆಕಟ್ಟು ಪರಿಶೀಲನೆಯನ್ನು ಯೋಗಿ ಆದಿತ್ಯನಾಥ್'ರವರು ನಡೆಸಿದರು.
* ಧಾಸನ್ ನದಿಯ ಅರ್ಜುನ ಸಹಾಯಕ್ ನೀರಾವರಿ ಯೋಜನೆಯು ಹಮೀರ್ ಪುರ, ಬಂಡಾ ಮತ್ತು ಮಹೋಬಾದ 168 ಉತ್ತರ ಪ್ರದೇಶದ ಗ್ರಾಮಗಳ 1.5 ಲಕ್ಷ ರೈತರಿಗೆ ನೀರಾವರಿ ಸೌಲಭ್ಯವನ್ನು ನೀಡಲಿದೆ.
* ಈ ಯೋಜನೆಯಿಂದಾಗಿ ಸುಮಾರು 4ಲಕ್ಷ ಜನರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಸಿಗಲಿದೆ, ಜೊತೆಗೆ 15,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವದು ಎಂದು ತಿಳಿಸಲಾಗಿದೆ.
* ಮುಂದಿನ ದಿನಗಳಲ್ಲಿ ಈ ಅರ್ಜುನ ಸಹಾಯಕ್ ನೀರಾವರಿ ಯೋಜನೆಯ

ನೀರಾವರಿ ಸಾಮರ್ಥ್ಯವನ್ನು 44,382 ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಲಾಗುವುದು ಎಂದು ಸಿಎಂ ಯೋಗಿ ಆದಿತ್ಯನಾಥ್'ಅವರು ತಿಳಿಸಿದರು. ಉತ್ತರ ಪ್ರದೇಶ ಬಗ್ಗೆ ಮಾಹಿತಿ :

* ಸರಿಸುಮಾರು 200 ಮಿಲಿಯನ್ ನಿವಾಸಿಗಳನ್ನು ಹೊಂದಿರುವ ಇದು ಭಾರತದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯವಾಗಿದೆ ಮತ್ತು ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿದೆ.
* ರಾಜಧಾನಿ : ಲಕ್ನೋ
* ರಾಜ್ಯಪಾಲ : ಆನಂದಿಬೆನ್ ಪಟೇಲ್
* ಉತ್ತರ ಪ್ರದೇಶ 2012 ರ ಜನಗತಿ ಪ್ರಕಾರ ಜನಸಂಖ್ಯೆ 20.42 ಕೋಟಿ
* ಮುಖ್ಯಮಂತ್ರಿ : ಯೋಗಿ ಆದಿತ್ಯನಾಥ್

## 12- 03- 2021

### ಪಾಕಿಸ್ತಾನದಲ್ಲಿ ಕೋರ್ಟ್ ಸೂಚನೆ ಮೇರೆಗೆ ಟಿಕ್ ಟಾಕ್ ಆಪ್ ನಿರ್ಬಂಧ




* ಜನಪ್ರಿಯ ಸೋಷಿಯಲ್ ಮೀಡಿಯಾ ಆಯಪ್ ಆಗಿರುವ ಟಿಕ್‌ಟಾಕ್ ಅನ್ನು ಪಾಕಿಸ್ತಾನದಲ್ಲಿ ಕೋರ್ಟ್ ಆದೇಶದ ಮೇರೆಗೆ ನಿರ್ಬಂಧ ಮಾಡಲಾಗುವದು ಎಂದು ಪಾಕಿಸ್ತಾನ ದೇಶದ ಟೆಲಿಕಾಂ ನಿಯಂತ್ರಕದ ವಕ್ತಾರ ಖುರ್ರಮ್ ಮೆಹ್ರಾನ್ ಮಾಹಿತಿಯನ್ನು ನೀಡಿದ್ದಾರೆ.
* ಪಾಕಿಸ್ತಾನದಲ್ಲಿ ಈ ಮೊದಲು ಅಕ್ಟೋಬರ್‌ನಲ್ಲಿ ಟಿಕ್ ಟಾಕ್ ಅಪ್ಲಿಕೇಶನ್ ಅನ್ನು ನಿಷೇಧಿಸಲಾಗಿತ್ತು, ಆದರೆ ಟಿಕ್ ಟಾಕ್ ಕಂಪನಿಯು "ಅಶ್ಲೀಲತೆ ಮತ್ತು ಅನೈತಿಕತೆಯನ್ನು" ಹರಡುವ ಎಲ್ಲಾ ಖಾತೆಗಳನ್ನು ನಿಷೇದ ಮಾಡಲಾಗುವದು ಎಂದು ತಿಳಿಸಿತ್ತು, ಸದ್ಯ ಟಿಕ್ ಟಾಕ್ ಕಂಪನಿಯು ಈ ತರಹದ ಯಾವುದೇ ಖಾತೆಗಳನ್ನು ನಿಷೇದ ಮಾಡಿಲ್ಲ ಎಂದು ಪಾಕಿಸ್ತಾನ ಕೋರ್ಟ್ ಈ ಟಿಕ್ ಟಾಕ್ ಅಪ್ಲಿಕೇಶನ್'ಗೆ ನಿರ್ಬಂಧ ಹೇರಲಾಗಿದೆ ಎಂದು ತಿಳಿದು ಬಂದಿದೆ.

### ಒಂದು ರಾಷ್ಟ್ರ ಒಂದು ರೇಷನ್ ಕಾರ್ಡ್ ವ್ಯವಸ್ಥೆ 17 ರಾಜ್ಯಗಳಲ್ಲಿ ಜಾರಿ




* ಪ್ರಸ್ತುತ 17 ರಾಜ್ಯಗಳು ಒನ್ ನೇಷನ್ ಒನ್ ರೇಷನ್ ಕಾರ್ಡ್ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದಿವೆ.
* ಉತ್ತರಾಖಂಡ ರಾಜ್ಯವು 'ಒನ್ ನೇಷನ್ ಒನ್ ರೇಷನ್ ಕಾರ್ಡ್' ವ್ಯವಸ್ಥೆ ಸುಧಾರಣೆಯನ್ನು ಅಳವಡಿಸಿಕೊಂಡಿದೆ.
* ಒನ್ ನೇಷನ್ ಒನ್ ರೇಷನ್ ಕಾರ್ಡ್ ವ್ಯವಸ್ಥೆ ಸುಧಾರಣೆ ಯನ್ನು ಪೂರ್ಣಗೊಳಿಸುವ ರಾಜ್ಯಗಳು ಗ್ರಾಸ್ ಸ್ಟೇಟ್ ಡಿಸ್ಟ್ರಿಕ್ಟ್ ಪ್ರಾಡಕ್ಟ್ (GSDP) ಶೇ.0.25ರಷ್ಟು ಹೆಚ್ಚುವರಿ ಸಾಲಪಡೆಯಲು ಅರ್ಹವಾಗಿವೆ.
* ಹಣಕಾಸು ಸಚಿವಾಲಯವು ಒನ್ ನೇಷನ್ ಒನ್ ರೇಷನ್ ಕಾರ್ಡ್ ವ್ಯವಸ್ಥೆ ಪ್ರಕಾರ ರಾಜ್ಯಗಳಿಗೆ 37,600 ಕೋಟಿ ಹೆಚ್ಚುವರಿ ಸಾಲ ಪಡೆಯುವ ಅನುಮತಿಯನ್ನು ನೀಡಿದೆ.
* ಒಂದು ರಾಷ್ಟ್ರ ಒಂದು ರೇಷನ್ ಕಾರ್ಡ್ ವ್ಯವಸ್ಥೆ ಇಂದಾಗಿ ವಲಸೆ ಕಾರ್ಮಿಕರು ಮತ್ತು ಅವರ ಕುಟುಂಬಗಳ ಫಲಾನುಭವಿಗಳು ದೇಶದ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ(ರೇಷನ್) ಪಡೆಯಬಹುದಾಗಿದೆ. ಒನ್ ನೇಷನ್ ಒನ್ ರೇಷನ್ ಕಾರ್ಡ್ ವ್ಯವಸ್ಥೆ ಜಾರಿಗೆ ತಂದ 17 ರಾಜ್ಯಗಳು :
* ಆಂಧ್ರಪ್ರದೇಶ, ಗೋವಾ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಣಿಪುರ, ಒಡಿಶಾ, ಪಂಜಾಬ್, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ತ್ರಿಪುರಾ, ಉತ್ತರಾಖಂಡ, ಉತ್ತರ ಪ್ರದೇಶ ಈ ಎಲ್ಲ ರಾಜ್ಯಗಳು 'ಒನ್ ನೇಷನ್ ಒನ್ ರೇಷನ್' ಕಾರ್ಡ್ ವ್ಯವಸ್ಥೆ ಜಾರಿಗೆ ಅಳವಡಿಸಿಕೊಂಡಿವೆ.

### ಅತೀ ಹೆಚ್ಚು ಭಿಕ್ಷುಕರನ್ನು ಹೊಂದಿರುವ ರಾಜ್ಯ ಪಶ್ಚಿಮ ಬಂಗಾಳ



* ಕೇಂದ್ರ ಸರ್ಕಾರವು ಅತೀ ಹೆಚ್ಚು ಭಿಕ್ಷುಕರನ್ನು ಹೊಂದಿರುವ ರಾಜ್ಯಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.
* ಕೇಂದ್ರ ಸರ್ಕಾರ ಇತ್ತೀಚಿಗೆ ನೀಡಿರುವ ವರದಿಯ ಪ್ರಕಾರ ಪಶ್ಚಿಮ ಬಂಗಾಳ ರಾಜ್ಯವು ಭಾರತದಲ್ಲಿ ಅತೀ ಹೆಚ್ಚು ಭಿಕ್ಷುಕರನ್ನು ಹೊಂದಿರುವ ರಾಜ್ಯವಾಗಿ ಮೊದಲ ಸ್ಥಾನದಲ್ಲಿದೆ.
* ಭಾರತದಲ್ಲಿ ಈ ಹಿಂದೆ 2011 ರ ಜನಗಣತಿ ಪ್ರಕಾರ 4,13,670 ಭಿಕ್ಷುಕರಿದ್ದರು.
* ಕೇಂದ್ರ ಸಾಮಾಜಿಕ ನ್ಯಾಯ ಸಚಿವ ತಾವರ್ ಚಂದ್ ಗೆಹ್ಲೋಟ್'ರವರು ತಿಳಿಸಿದ 2011 ರ ಜನಗಣತಿ ಪ್ರಕಾರ ಆ ಸಮಯದಲ್ಲಿ ಪಶ್ಚಿಮ ಬಂಗಾಳ ರಾಜ್ಯವು 81,244 ಭಿಕ್ಷುಕರನ್ನು ಹೊಂದಿ ಅಗ್ರ ಸ್ಥಾನದಲ್ಲಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ. ಅತೀ ಹೆಚ್ಚು ಭಿಕ್ಷುಕರನ್ನು ಹೊಂದಿರುವ ರಾಜ್ಯಗಳ ಮಾಹಿತಿ:
* ಪಶ್ಚಿಮ ಬಂಗಾಳ 81,224, ಉತ್ತರಪ್ರದೇಶ 65,835, ಆಂಧ್ರಪ್ರದೇಶ 30,218, ಬಿಹಾರ 29,723, ಮಧ್ಯಪ್ರದೇಶ 28,695, ರಾಜಸ್ಥಾನ 25,853, ದೆಹಲಿ 2,187, ಚಂಡೀಗಢ 121 ಭಿಕ್ಷುಕರನ್ನು ಹೊಂದಿವೆ ಎಂದು ಕೇಂದ್ರ ಸರ್ಕಾರ ವರದಿಯನ್ನು ನೀಡಿದೆ. ಪಶ್ಚಿಮ ಬಂಗಾಳ ರಾಜ್ಯದ ಬಗ್ಗೆ ಮಾಹಿತಿ :
* ಪಶ್ಚಿಮ ಬಂಗಾಳವು ಪೂರ್ವ ಭಾರತದ ಹಿಮಾಲಯ ಮತ್ತು ಬಂಗಾಳಕೊಲ್ಲಿಯ ನಡುವಿನ ರಾಜ್ಯವಾಗಿದೆ.
* ಪಶ್ಚಿಮ ಬಂಗಾಳದ 2012 ರ ಜನಗಣತಿ ಪ್ರಕಾರ 9.03 ಕೋಟಿ ಜನಸಂಖ್ಯೆ ಹೊಂದಿದೆ
* ರಾಜ್ಯಪಾಲ: ಜಗದೀಪ್ ಧಂಖರ್
* ರಾಜಧಾನಿ: ಕೋಲ್ಕತಾ
* ಗವರ್ನರ್ : ಜಗದೀಪ್ ಧನ್ಕರ್
* ಮುಖ್ಯಮಂತ್ರಿ : ಮಮತಾ ಬ್ಯಾನರ್ಜಿ

### ಚೀನಾ ದೇಶದಿಂದ ಟೋಕಿಯೋ ಒಲಿಂಪಿಕ್ಸ್ ಕ್ರೀಡಾಪಟುಗಳಿಗೆ ಲಸಿಕೆ



* ಟೋಕಿಯೊದಲ್ಲಿ ನಡೆಯುವ ಈ ವರ್ಷದ ಒಲಿಂಪಿಕ್ಸ್ ಮತ್ತು ಮುಂದಿನ ವರ್ಷ ಬೀಜಿಂಗ್ ನಲ್ಲಿ ನಡೆಯಲಿರುವ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಭಾಗಿಯಾಗುವ ಕ್ರೀಡಾಪಟುಗಳಿಗೆ ಕೋವಿಡ್ 19 ಲಸಿಕೆಯನ್ನು ನೀಡಲು ಚೀನಾ ಒಲಿಂಪಿಕ್ ಸಮಿತಿ ಸಿದ್ಧವಾಗಿದೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮಾಹಿತಿಯನ್ನು ನೀಡಿದೆ.
* ಟೋಕಿಯೊದಲ್ಲಿ ಈ ವರ್ಷದ ಒಲಿಂಪಿಕ್ಸ್ ಜುಲೈ 23ರಿಂದ ಆಗಸ್ಟ್ 8ವರೆಗೆ ನಡೆಸಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ನಿರ್ಧಾರ ತಗೆದುಕೊಂಡಿದೆ, ಮತ್ತು ಮುಂದಿನ ವರ್ಷದ ಚಳಿಗಾಲದ ಒಲಿಂಪಿಕ್ಸ್'ನ್ನು ಫೆಬ್ರುವರಿಯಲ್ಲಿ ನಡೆಸಲಾಗುವದು ಎಂದು ಒಲಿಂಪಿಕ್ ಸಮಿತಿ ಮಾಹಿತಿಯನ್ನು ನೀಡಿದೆ. ಟೋಕಿಯೊ ಒಲಿಂಪಿಕ್ಸ್ ಬಗ್ಗೆ ಮಾಹಿತಿ :
* ಟೋಕಿಯೊ ಒಲಿಂಪಿಕ್ಸ್ ಅಂತರರಾಷ್ಟ್ರೀಯ ಬಹು ಕ್ರೀಡಾ ಕಾರ್ಯಕ್ರಮವಾಗಿದ್ದು,
* ಜುಲೈ 23 ರಿಂದ 2021 ರ ಆಗಸ್ಟ್ 8 ರವರೆಗೆ ಜಪಾನ್‌ನ ಟೋಕಿಯೊದಲ್ಲಿ ನಡೆಯಲಿದೆ
* ಒಟ್ಟು ಕ್ರೀಡಾಪಟುಗಳು : 11,091
* ರಾಷ್ಟ್ರಗಳು: 206
* ಸ್ಥಳ: ಟೋಕಿಯೊ, ಜಪಾನ್
* ದಿನಾಂಕ : ಶುಕ್ರ, 23 ಜುಲೈ, 2021 ಸೂರ್ಯ, 8 ಆಗಸ್ಟ್, 2021
* ಕ್ರೀಡಾಂಗಣ : ಜಪಾನ್ ರಾಷ್ಟ್ರೀಯ ಕ್ರೀಡಾಂಗಣ

## ಕಂದು (Brown) ಕಲ್ಲಿದ್ದಲಿನಿಂದ ಹೈಡ್ರೋಜನ್ ಉತ್ಪಾದಿಸಲು ಪ್ರಾರಂಭಿದ, ಜಪಾನ್ ಆಸ್ಟ್ರೇಲಿಯಾ



* ಜಪಾನೀಸ್ ಆಸ್ಟ್ರೇಲಿಯಾದ ಉದ್ಯಮವು ಕಂದು ಕಲ್ಲಿದ್ದಲಿನಿಂದ ಹೈಡ್ರೋಜನ್ ಉತ್ಪಾದಿಸಲು ಪ್ರಾರಂಭಿಸಿದೆ.
* ದ್ರವೀಕೃತ ಹೈಡ್ರೋಜನ್ ಅನ್ನು ವಾಣಿಜ್ಯಿಕವಾಗಿ ಉತ್ಪಾದಿಸಬಹುದು ಮತ್ತು ಸುರಕ್ಷಿತವಾಗಿ ವಿದೇಶಕ್ಕೆ ರಫ್ತು ಮಾಡಬಹುದು ಎಂದು ತಿಳಿಸಲಾಗಿದೆ.
* ಈ ಯೋಜನೆಯು ಕಲ್ಲಿದ್ದಲನ್ನು ಆಮ್ಲಜನಕ ಮತ್ತು ಉಗಿಯೊಂದಿಗೆ ಹೆಚ್ಚಿನ ಶಾಖ ಮತ್ತು ಒತ್ತಡದಲ್ಲಿ ಇಂಗಾಲದ ಡೈಆಕ್ಸೈಡ್ ಮತ್ತು ಇತರ ಅನಿಲಗಳೊಂದಿಗೆ ಉಪ ಉತ್ಪನ್ನಗಳಾಗಿ ಪ್ರತಿಕ್ರಿಯಿಸುವ ಮೂಲಕ ಹೈಡ್ರೋಜನ್ ಅನ್ನು ಉತ್ಪಾದಿಸುತ್ತದೆ.
*ಈ ಯೋಜನೆಯು ವಿಕ್ಟೋರಿಯಾ ರಾಜ್ಯದ ಬ್ರೌನ್ ಕಲ್ಲಿದ್ದಲು ಮೀಸಲು ಪ್ರದೇಶದಲ್ಲಿದೆ ಮತ್ತು ಇದನ್ನು ಕವಾಸಕಿ ಹೆವಿ ಕೈಗಾರಿಕೆಗಳು ನಡೆಸುತ್ತಿವೆ.
* ಜಪಾನ್ ದೇಶವು ಈ ಯೋಜನೆಯಿಂದಾಗಿ 2050 ರ ವೇಳೆಗೆ ನಿವ್ವಳ ಶೂನ್ಯ ಹೊರಸೂಸುವಿಕೆ ಗುರಿಯನ್ನು ತಲುಪಲು ಸಹಾಯಕಾರಿಯಾಗಲಿದೆ ಎಂದು ಜಪಾನ್ ತಿಳಿಸಿದೆ.
* ಕಂದು ಕಲ್ಲಿದ್ದಲು ಅನ್ನು ಲಿಗ್ನೈಟ್ ಎಂದೂ ಕರೆಯುತ್ತಾರೆ.
* ಕಲ್ಲಿದ್ದಲು ಸುಮಾರು 25 ರಿಂದ 35 ರಷ್ಟು ಇಂಗಾಲದ ಅಂಶವನ್ನು ಹೊಂದಿರುತ್ತದೆ.
* ಕಲ್ಲಿದ್ದಲನ್ನು ಪ್ರಪಂಚದಾದ್ಯಂತ ಗಣಿಗಾರಿಕೆ ಮೂಲಕ ಪಡೆಯಲಾಗುತ್ತದೆ, ಇದನ್ನು ವಿದ್ಯುತ್ ಉತ್ಪಾದನೆಗೆ ಇಂಧನವಾಗಿ ಬಳಸಲಾಗುತ್ತದೆ.

## ಫುಗಾಕು (Fugaku) ವಿಶ್ವದ ಅತ್ಯಂತ ಶಕ್ತಿಶಾಲಿ ಸೂಪರ್ ಕಂಪ್ಯೂಟರ್



* ಜಪಾನ್‌ನಲ್ಲಿ ವಿಶ್ವದ ಅತ್ಯಂತ ಶಕ್ತಿಶಾಲಿ ಸೂಪರ್ ಕಂಪ್ಯೂಟರ್ ಅಭಿವೃದ್ಧಿ ಪಡಿಸಿದೆ.
* 2014 ರಲ್ಲಿ ಜಪಾನಿನ ವೈಜ್ಞಾನಿಕ ಸಂಶೋಧನಾ ಸಂಸ್ಥೆಯಾಗಿರುವ ರಿಕೆನ್ ಮತ್ತು ಫುಜಿತ್ಸು ಕಂಪನಿಗಳು 6 ವರ್ಷಗಳ ಹಿಂದೆ ಫುಗಾಕು ಕಂಪ್ಯೂಟರ್ ಅಭಿವೃದ್ಧಿಪಡಿಸಲು ಆರಂಭಿಸಿದ್ದವು, ಪ್ರಸ್ತುತ ಈ ಸೂಪರ್ ಕಂಪ್ಯೂಟರ್ ಸಂಪೂರ್ಣವಾಗಿ ಸಿದ್ಧವಾಗಿದೆ ಮತ್ತು ಇದು ಸಂಶೋಧನಾ ಬಳಕೆಗೆ ಲಭ್ಯವಿದೆ.
* ಜಪಾನ್‌ನ ಕಂಪ್ಯೂಟಿಂಗ್ ಮೂಲಸೌಕರ್ಯದ ಸಾಧನವನ್ನು ಕೋರ್ ಮಾಡುವ ಉದ್ದೇಶದಿಂದ ಈ ಸೂಪರ್‌ಕಂಪ್ಯೂಟರ್ ಅನ್ನು ಅಭಿವೃದ್ಧಿಪಡಿಸಲಾಗಿದೆ.
* ಇದು ಆರೋಗ್ಯಕರ ಸಮಾಜವನ್ನು ನಿರ್ಮಿಸಲು, ಉತ್ತಮ ಇಂಧನ ಬಳಕೆ ಮತ್ತು ವಿಪತ್ತು ತಗ್ಗಿಸುವಿಕೆಗೆ ಸಹಾಯ ಮಾಡುತ್ತದೆ.
* ಸೂಪರ್‌ಕಂಪ್ಯೂಟರ್ ಟಾಪ್ 500 ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ.
* ಸೂಪರ್‌ಕಂಪ್ಯೂಟರ್‌ನ 100 ಪಟ್ಟು ಅಪ್ಲಿಕೇಶನ್ ಕಾರ್ಯಕ್ಷಮತೆಯನ್ನು ಹೊಂದಿದೆ.
* ಈ ಜಪಾನಿನ ಸೂಪರ್‌ಕಂಪ್ಯೂಟರ್‌ನ್ನು ಫುಜಿತ್ಸು ಎ 64 ಎಫ್‌ಎಕ್ಸ್ ಮೈಕ್ರೊಪ್ರೊಸೆಸರ್‌ನೊಂದಿಗೆ ನಿರ್ಮಾಣ ಮಾಡಲಾಗಿದೆ ಎಂದು ಜಪಾನಿನ ರಿಕೆನ್ ಮತ್ತು ಫುಜಿತ್ಸು ಕಂಪನಿಗಳು ತಿಳಿಸಿವೆ. ಫುಗಾಕು (Fugaku) ಕಂಪ್ಯೂಟರ್ ಬಗ್ಗೆ ಮಾಹಿತಿ :
* ಫುಗಾಕು ಎಂಬ ಈ ಪದ ಮೌಂಟ್ ಫ್ಯೂಜಿಗೆ ಪರ್ಯಾಯ ಹೆಸರಿನಿಂದ ಕರೆಯುವ ಪದವಾಗಿದೆ.
* ಫುಗಾಕ ಕಂಪ್ಯೂಟರ್ ಅನ್ನು 2014ರಲ್ಲಿ ಅಭಿವೃದ್ಧಿಪಡಿಸಲು ಆರಂಭಿಸಲಾಯಿತು, ಮತ್ತು ಅಧಿಕೃತವಾಗಿ 2021 ರಲ್ಲಿ ಕಾರ್ಯನಿರ್ವಹಿಸಲು ಆರಂಭಿಸಿತು.
* ಮಾರ್ಚ್ 2021 ರ ಹೊತ್ತಿಗೆ, ಫುಗಾಕು ವಿಶ್ವದ ಅತಿ ವೇಗದ ಸೂಪರ್ ಕಂಪ್ಯೂಟರ್ ಆಗಿದೆ ಹೊರ ಹೊಮ್ಮಲಿದೆ.

# 13- 03- 2021

## ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವೀರಪ್ಪ ಮೊಯಿಲಿ



ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವೀರಪ್ಪ ಮೊಯಿಲಿ
* 2020ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಆಯ್ಕೆಯಾಗಿದ್ದಾರೆ.
* ಇವರು ರಾಜಕಾರಣಿ ಮತ್ತು ಸಾಹಿತಿಯಾಗಿಯೂ ಗುರುತಿಸಿಕೊಂಡಿದ್ದಾರೆ, ವೀರಪ್ಪ ಮೊಯಿಲಿ ಯವರ ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ 2020ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪಟ್ಟಿಯಲ್ಲಿ ಆಯ್ಕೆಯಾಗಿದೆ.
* ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು 1 ಲಕ್ಷ ರೂ ನಗದು ಮತ್ತು ಕಾಣಿಕೆಯನ್ನು ಒಳಗೊಂಡಿದೆ.
*ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಇಂಗ್ಲಿಷ್, ಹಿಂದಿ ಸೇರಿದಂತೆ ಬೇರೆ ಬೇರೆ ಭಾಷೆಗಳಲ್ಲಿ ತಲಾ ಒಂದು ಕೃತಿಯನ್ನು ಆಯ್ಕೆ ಮಾಡಲಾಗಿದೆ.
* ಒಟ್ಟಾರೆ 7 ಕವನ ಸಂಕಲನ ಮತ್ತು 4 ಕಾದಂಬರಿಗಳು, 5 ಸಣ್ಣಕಥೆ, 2 ನಾಟಕಗಳು, 1

ಆತ್ಮಚರಿತ್ರೆ, ಜೊತೆಗೆ ಒಂದು ಮಹಾಕಾವ್ಯಕ್ಕೆ ಪ್ರಶಸ್ತಿ ಲಭಿಸಿದೆ. ವೀರಪ್ಪ ಮೊಯಿಲಿ ರವರ ಬಗ್ಗೆ ಮಾಹಿತಿ :
* ವೀರಪ್ಪ ಮೊಯಿಲಿ ಅವರು ಕರ್ನಾಟಕ ರಾಜ್ಯದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರಿದ ಭಾರತೀಯ ರಾಜಕಾರಣಿಯಾಗಿದ್ದರು
* ಮೊಯಿಲಿ ಭಾರತದ ಕರ್ನಾಟಕದ ಮಾಜಿ ಮುಖ್ಯಮಂತ್ರಿಯಾಗಿದ್ದರು
* ವೀರಪ್ಪ ಮೊಯಿಲಿ ಉಡುಪಿ ಜಿಲ್ಲೆಯ ಕಾರ್ಕಳ ಕ್ಷೇತ್ರದಿಂದ ಕರ್ನಾಟಕ ರಾಜ್ಯ ವಿಧಾನಸಭೆಗೆ ಆಯ್ಕೆಯಾದರು
* ವೀರಪ್ಪ ಮೊಯಿಲಿ ಜನನ: 12 ಜನವರಿ 1940 ಮೂಡಬಿದರಿ ಯಲ್ಲಿ ಜನಿಸಿದರು
* ಇವರ ಪೂರ್ಣ ಹೆಸರು: ಮಾರ್ಪಾಡಿ ವೀರಪ್ಪ ಮೊಯಿಲಿ
* 2012–2014 ರ ಅವಧಿಯಲ್ಲಿ ಭಾರತದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರಾಗಿದ್ದರು.

## ಪಿಎಂ ಶ್ರಮ ಯೋಗಿ ಮಂಧನ್ ಯೋಜನೆ




* ಕೇಂದ್ರ ಸರ್ಕಾರವು ಪಿಎಂ ಶ್ರಮ ಯೋಗಿ ಮಂಧನ್ ಯೋಜನೆ ಅಡಿಯಲ್ಲಿ 60 ವರ್ಷ ವಯಸ್ಸಿನವರಿಗೆ ಸರ್ಕಾರದಿಂದ ತಿಂಗಳಿಗೆ 3000 ರೂ. ಪಿಂಚಣಿ ನೀಡಲು ಮುಂದಾಗಿದೆ.
* ಈ ಯೋಜನೆ ಅಡಿಯಲ್ಲಿ ನೋಂದಣಿಯಾಗಿರುವ 45 ಲಕ್ಷ ಜನರಿಗೆ ಪಿಂಚಣಿ ನೀಡುವ ಮಹತ್ವದ ಯೋಜನೆಯನ್ನು ಸರ್ಕಾರ ಹೊಂದಿದೆ.
* 60 ವರ್ಷ ವಯಸ್ಸಿನ ಕಾರ್ಮಿಕರಿಗೆ ಕನಿಷ್ಠ ಮಾಸಿಕ 3000 ರೂಪಾಯಿಗಳನ್ನ ಪಿಂಚಣಿಯಾಗಿ ನೀಡಲಾಗುವದು ಎಂದು ಸರ್ಕಾರ ತಿಳಿಸಿದೆ.
* ಕೇಂದ್ರ ಸರ್ಕಾರವು 2019ರಲ್ಲಿ ಪ್ರಧಾನ ಮಂತ್ರಿ ಶ್ರಮ ಯೋಗಿ ಮಂಧನ್ ಯೋಜನೆ ಜಾರಿಗೆ ತಂದಿದೆ.
* ಈ ಯೋಜನೆಯನ್ನ ಭಾರತ ಸರ್ಕಾರವು LICಯೊಂದಿಗೆ ಜಂಟಿಯಾಗಿ ನಡೆಸುತ್ತಿದೆ.
* ಈ ಯೋಜನೆ ಅಡಿಯಲ್ಲಿ 2021ರ ಮಾರ್ಚ್ 4ರವರೆಗೆ 44.90 ಲಕ್ಷ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದಾರೆ. ಪಿಎಂ ಶ್ರಮ ಯೋಗಿ ಮಂಧನ್ ಯೋಜನೆಯ ಬಗ್ಗೆ ಮಾಹಿತಿ :
* ದೇಶದಲ್ಲಿರುವ 42 ಕೋಟಿ ಅಸಂಘಟಿತ ವಲಯದ ಕಾರ್ಮಿಕರಿಗೆ PM SYM ಯೋಜನೆಯನ್ನು ಸಮರ್ಪಿಸಲಾಗಿದೆ.
* ಸ್ವಾತಂತ್ರ್ಯ ನಂತರ ಪ್ರಥಮ ಬಾರಿಗೆ ಇಂಥ ಒಂದು ಯೋಜನೆಯನ್ನು ಕೋಟ್ಯಾಂತರ ಕೆಲಸಗಾರರಿಗೋಸ್ಕರ ರೂಪಿಸಲಾಗಿದೆ ಎಂದು ಪ್ರಧಾನಮಂತ್ರಿಗಳು ತಿಳಿಸಿದರು.
* PM SYM ಅಸಂಘಟಿತ ವಲಯದ ಕಾರ್ಮಿಕರಿಗೆ ಅವರ ವೃದ್ಧಾಪ್ಯದಲ್ಲಿ ಸಮಗ್ರ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ.

## ಸರ್ಕಾರಿ ಕೆಲಸದಲ್ಲಿರುವವರನ್ನು ರಾಜ್ಯ ಚುನಾವಣಾ ಆಯುಕ್ತರಾಗಿ ನೇಮಕ ಮಾಡುವಂತಿಲ್ಲ ಸುಪ್ರೀಂಕೋರ್ಟ್




* ರಾಜ್ಯ ಚುನಾವಣಾ ಆಯುಕ್ತರಾಗಲು ಅವರು ಸ್ವತಂತ್ರ ವ್ಯಕ್ತಿ ಆಗಿರಬೇಕು ಎಂದು ಸುಪ್ರೀಂಕೋರ್ಟ್ ಇತ್ತೀಚಿಗೆ ತಿಳಿಸಿದೆ.
* ಕೇಂದ್ರ ಅಥವಾ ರಾಜ್ಯ ಸರ್ಕಾರದ ಉದ್ಯೋಗದಲ್ಲಿರುವ ವ್ಯಕ್ತಿ ಅಥವಾ ಸರ್ಕಾರಗಳೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳು ರಾಜ್ಯ ಚುನಾವಣಾ ಆಯುಕ್ತರಾಗಲು ಅವಕಾಶವಿಲ್ಲ.
* ಗೋವಾ ಸರ್ಕಾರವು ತನ್ನ ಕಾನೂನು ಕಾರ್ಯದರ್ಶಿಗೆ ರಾಜ್ಯ ಚುನಾವಣಾ ಆಯುಕ್ತರ ಹೆಚ್ಚುವರಿ ಉಸ್ತುವಾರಿಯನ್ನು ನೀಡಿದ ಕಾರಣ ನ್ಯಾಯಾಲಯ ವಿಚಾರಣೆ ಸಮಯದಲ್ಲಿ ಪ್ರಮುಖವಾಗಿ ಪರಿಗಣಿಸಿ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿತು.
* ಗೋವಾ ರಾಜ್ಯ ಚುನಾವಣಾ ಆಯೋಗಕ್ಕೆ 10 ದಿನಗಳಲ್ಲಿ ಪಂಚಾಯತ್ ಚುನಾವಣೆಯ ಅಧಿಸೂಚನೆ ಹೊರಡಿಸಿ ಮತ್ತು ಏಪ್ರಿಲ್ 30 ರೊಳಗೆ ಮತದಾನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ನ್ಯಾಯಮೂರ್ತಿಯಾಗಿರುವ ಆರ್.ಎಫ್.ನಾರಿಮನ್ ನೇತೃತ್ವದ ನ್ಯಾಯಪೀಠವು ನಿರ್ದೇಶನ ನೀಡಿದೆ.
*ನ್ಯಾಯಪೀಠ ಆದೇಶದ ಮೇರೆಗೆ ರಾಜ್ಯ ಚುನಾವಣಾ ಆಯೋಗದ ಕಾರ್ಯಗಳಲ್ಲಿ ರಾಜ್ಯ ಹಸ್ತಕ್ಷೇಪ ಮಾಡಬಾರದು ಎಂದು ನ್ಯಾಯಪೀಠವು ತಿಳಿಸಿದೆ.

## ಅಮೃತ್ ಮಹೋತ್ಸವಕ್ಕೆ ಪ್ರಧಾನಿ ಮೋದಿ ಚಾಲನೆ



* ಪ್ರಧಾನಿ ನರೇಂದ್ರ ಮೋದಿಯವರು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂಭ್ರಮಾಚರಣೆ ಹಿನ್ನಲೆಯಲ್ಲಿ ಮಾರ್ಚ್ 12 ರಂದು ಗುಜರಾತಿನ ಸಾಬರಮತಿ ಆಶ್ರಮದಲ್ಲಿ ಅಮೃತ್ ಮಹೋತ್ಸವಕ್ಕೆ ಚಾಲನೆ ನೀಡಿದರು.
* 75ನೇ ವರ್ಷದ ಅಮೃತ್ ಮಹೋತ್ಸವ್ 2023ರ ಆಗಸ್ಟ್ 15ರವರೆಗೆ ಸಾಗಲಿದೆ ಎಂಬ ಮಾಹಿತಿ ತಿಳಿದು ಬಂದಿದೆ.
* ಮಾರ್ಚ್ 12, 75ನೇ ಸ್ವಾತಂತ್ರ್ಯೋತ್ಸವದ ಅಮೃತ್ ಮಹೋತ್ಸವದ ಮೊದಲ ದಿನವಾಗಿದೆ.
* ಪ್ರಧಾನಿ ನರೇಂದ್ರ ಮೋದಿ ಅವರು ಅಹಮದಾಬಾದ್'ನ ಆಜಾದಿ ಕಾ ಅಮೃತ್ ಮಹೋತ್ಸವ್'ಗೆ ಚಾಲನೆ ನೀಡುವ ಮೂಲಕ 2022ರ ಆಗಸ್ಟ್ 15ಕ್ಕೂ ಮೊದಲೇ ಅಂದರೆ 75 ವಾರಗಳ ಮುನ್ನವೇ ಈ ಮಹೋತ್ಸವ ಪ್ರಾರಂಭವಾಗಿದೆ ಇದು 2023ರ ಆಗಸ್ಟ್ 15ರವರೆಗೂ ನಡೆಯಲಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

## QUAD ದೇಶಗಳಿಂದ ಏಷ್ಯಾದಾದ್ಯಂತ 100 ಕೋಟಿ ಲಸಿಕೆ ಉತ್ಪಾದನೆ



* ಏಷ್ಯಾದ್ಯಂತ ಮತ್ತು ಇಂಡೊ ಪೆಸಿಫಿಕ್ ವಲಯದಲ್ಲಿ 1 ಬಿಲಿಯನ್ ಕೋವಿಡ್ 19 ಲಸಿಕೆಗಳನ್ನು ಕಳುಹಿಸುವ ಸಲುವಾಗಿ ಯುನೈಟೆಡ್ ಸ್ಟೇಟ್ಸ್, ಭಾರತ, ಆಸ್ಟ್ರೇಲಿಯಾ ಮತ್ತು ಜಪಾನ್ ದೇಶಗಳ ನಾಯಕರು ಹಣಕಾಸು ಸಂಗ್ರಹ, ಸಾಮರ್ಥ್ಯ ಮತ್ತು ವಿತರಣೆಗೆ ಒಪ್ಪಿರುವುದಾಗಿ ಭಾರತದ ವಿದೇಶಾಂಗ ಕಾರ್ಯದರ್ಶಿ ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ಈ ಕ್ವಾಡ್ (QUAD) ಗುಂಪಿನ ನಾಲ್ಕು ದೇಶಗಳಲ್ಲಿ, ಭಾರತವು ವಿಶ್ವದಾದ್ಯಂತ ಅತಿದೊಡ್ಡ ಲಸಿಕೆ ತಯಾರಕ ರಾಷ್ಟ್ರವಾಗಿದೆ.
* ಭಾರತವು ಲಸಿಕೆ ಉತ್ಪಾದನಾ ಸಾಮರ್ಥ್ಯವನ್ನು ಮತ್ತಷ್ಟು ವಿಸ್ತರಿಸುವುದಾಗಿ ತಿಳಿಸಲಾಗಿದೆ.
* ಈ ಕ್ವಾಡ್ ಒಪ್ಪಂದದಿಂದ ಕೋವಿಡ್ 19 ಲಸಿಕೆಗಳನ್ನು ತಯಾರಿಸಲು ಭಾರತ ತನ್ನ ಉತ್ಪಾದನಾ ಸಾಮರ್ಥ್ಯವನ್ನು ಬಳಸಲಿದೆ.
* ಕೋವಿಡ್ 19 ಲಸಿಕೆ ತಯಾರಿಕೆಗೆ ಯು.ಎಸ್. ಇಂಟರ್ನ್ಯಾಷನಲ್ ಡೆವಲಪ್ಮೆಂಟ್ ಫೈನಾನ್ಸ್ ಕಾರ್ಪೊರೇಷನ್ ಮತ್ತು ಜಪಾನ್ ಬ್ಯಾಂಕ್ ಫಾರ್ ಇಂಟರ್ನ್ಯಾಷನಲ್ ಕೋಆಪರೇಷನ್, ಹಾಗೂ ಆಸ್ಟ್ರೇಲಿಯಾ ತರಬೇತಿಗೆ ಹಣಕಾಸು ನೀಡಲಿವೆ.
* ಕ್ವಾಡ್ ಒಪ್ಪಂದವು ಆಗ್ನೇಯ ಏಷ್ಯಾ, ಪೆಸಿಫಿಕ್ ದ್ವೀಪಗಳು ಮತ್ತು ಹಿಂದೂ ಮಹಾಸಾಗರದಾದ್ಯಂತದ ದೇಶಗಳಲ್ಲಿ ಲಸಿಕೆಗಳನ್ನು ವಿತರಿಸಲು ದೇಶವು ಬೆಂಬಲವನ್ನು ನೀಡುತ್ತದೆ.

## ಇಸ್ರೋ ಸೌಂಡಿಂಗ್ ರಾಕೆಟ್ RH 560 ಉಡಾವಣೆ



*ಮಾರ್ಚ್12,2021ರಂದುಭಾರತೀಯಬಾಹ್ಯಾಕಾಶಸಂಶೋಧನಾ ಸಂಸ್ಥೆ (ISRO) RH 560 ಎಂಬ ಧ್ವನಿ (ಸೌಂಡಿಂಗ್) ರಾಕೆಟ್ ಉಡಾವಣೆ ಮಾಡಿತು.
* ಈ ಸೌಂಡಿಂಗ್ ರಾಕೆಟ್'ನಿಂದ ತಟಸ್ಥ ಗಾಳಿ ಮತ್ತು ಪ್ಲಾಸ್ಮಾ ಡೈನಾಮಿಕ್ಸ್‌ನಲ್ಲಿನ ವ್ಯತ್ಯಾಸಗಳನ್ನು ಅಧ್ಯಯನ ಮಾಡುವ ಸಲುವಾಗಿ ರಾಕೆಟ್ ಉಡಾವಣೆ ಮಾಡಲಾಗಿದೆ.
* ಈ ರಾಕೆಟ್ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಶ್ರೀಹರಿಕೋಟ ಶ್ರೇಣಿನಿಂದ ಉಡಾವಣೆ ಮಾಡಲಾಯಿತು.
* ಈ ರಾಕೆಟ್‌ಗಳನ್ನು ಮೇಲಿನ ವಾತಾವರಣದ ಪ್ರದೇಶಗಳನ್ನು ಮಾಹಿತಿ ಪಡೆಯಲು ಮತ್ತು ಬಾಹ್ಯಾಕಾಶ ಸಂಶೋಧನೆ ನಡೆಸಲು ಬಳಸಲಾಗುತ್ತದೆ.
* ಇಸ್ರೋ 1965 ರಿಂದ ದೇಶೀಯವಾಗಿ ತಯಾರಿಸಿದ ಸೌಂಡಿಂಗ್ ರಾಕೆಟ್‌ಗಳನ್ನು ಉಡಾವಣೆ ಮಾಡಲು ಪ್ರಾರಂಭಿಸಿದೆ.
* ಇಸ್ರೋ ಮಾರ್ಚ್ 28, 2021 ರಂದು ಗಿಸಾಟ್ 1 ಎಂಬ ಭೂ ವೀಕ್ಷಣಾ ಉಪಗ್ರಹವನ್ನು ಉಡಾಯಿಸಲು ಸಿದ್ಧವಾಗಿದೆ, ಈ ಉಪಗ್ರಹ ಗಡಿಗಳ ನೈಜ ಸಮಯದ ಚಿತ್ರಗಳನ್ನು, ಮತ್ತು ನೈಸರ್ಗಿಕ ವಿಪತ್ತುಗಳ ಮಾಹಿತಿಯನ್ನು ನೀಡುತ್ತದೆ ಎಂದು ತಿಳಿಸಿದೆ.
* ಈ ಹಿಂದೆ ಇಸ್ರೋ ಫೆಬ್ರುವರಿ 2021ರಲ್ಲಿ ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್ ಮೊದಲ ವಾಣಿಜ್ಯ ಮಿಷನ್ ಆಗಿರುವ ಬಾಹ್ಯಾಕಾಶ ಸಂಸ್ಥೆ ಬ್ರೆಜಿಲ್‌ನ ಅಮೆಜೋನಿಯಾ 1 ಎಂಬ ಪ್ರಾಥಮಿಕ ಉಪಗ್ರಹದೊಂದಿಗೆ 18 ಸಹ ಪ್ರಯಾಣಿಕರ ಉಪಗ್ರಹಗಳೊಂದಿಗೆ ಶ್ರೀಹರಿಕೋಟ ಬಾಹ್ಯಾಕಾಶದಿಂದ ಉಡಾವಣೆ ಮಾಡಿದೆ.

# 15- 03- 2021

## ದುಡಿಯೋಣ ಬಾ, ಅಭಿಯಾನ ಪ್ರಾರಂಭ



* ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ 'ದುಡಿಯೋಣ ಬಾ' ಅಭಿಯಾನವನ್ನು ಇದೆ ಮಾರ್ಚ್15ರಿಂದ ಮುಂದಿನ ಮೂರೂ ತಿಂಗಳವರೆಗೂ ಪ್ರಾರಂಭ ಮಾಡಲಿದೆ, ಇದು ಜನರ ವಲಸೆ ಹೋಗುವದನ್ನು ತಡೆಗಟ್ಟುವ ಮುಖ್ಯ ಉದ್ದೇಶವಾಗಿದೆ.
* ಈ ಅಭಿಯಾನವು ಮೂರು ತಿಂಗಳುಗಳ ಕಾಲ ನರೇಗಾದಡಿಯಲ್ಲಿ ಕಾರ್ಯ ನಿರ್ವಹಿಸಲಿದೆ.
* ಬೇಸಿಗೆ ಕಾಲದಲ್ಲಿ ಗ್ರಾಮೀಣ ಭಾಗದ ಜನರಿಗೆ ಕೆಲಸವನ್ನು ನೀಡುವ ಉದ್ದೇಶ ಇದಾಗಿದೆ.
*ದುಡಿಯೋಣ ಬಾ' ಅಭಿಯಾನವು ವರ್ಷದಲ್ಲಿ ಕನಿಷ್ಠ 100 ದಿನಗಳ ಕಾಲ ಬಡ ಕುಟುಂಬದ ಸಾಮಾನ್ಯ ಜನರಿಗೆ ಕೆಲಸ ಒದಗಿಸಿಕೊಡುವ ಉದ್ದೇಶದಿಂದ ಆರಂಭಗೊಳ್ಳುತ್ತಿದೆ.
* ಈ ಅಭಿಯಾನವು ಮೊದಲ ಹಂತದಲ್ಲಿ ಗ್ರಾಮಗಳಲ್ಲಿ ಜನಜಾಗೃತಿ ಕಾರ್ಯಕ್ರಮ ನಡೆಸುತ್ತದೆ, ನಂತರ ಉದ್ಯೋಗ ಚೀಟಿಗಳನ್ನೂ ನೀಡಲಾಗುತ್ತದೆ ಮತ್ತು ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದವರ ಹೆಸರು ನೋಂದಣಿ ಮತ್ತು ಇದಾದ ಎರಡೇ ದಿನಗಳಲ್ಲಿ ಅವರಿಗೆ ಕೆಲಸ ನೀಡಲು ನಿರ್ಧರಿಸಲಾಗಿದೆ.
* ಇದೀಗ ದುಡಿಯೋಣ ಬಾ ಅಭಿಯಾನದಿಂದ ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಕೆಲಸ ಕಾರ್ಯ ಇಲ್ಲದ ಜನರಿಗೆ ಜೀವನ ನಡೆಸಲು ಈ ಯೋಜನೆಯಿಂದ ಸಹಾಯವಾಗಲಿದೆ ಎಂದು ಸರ್ಕಾರ ಮಾಹಿತಿಯನ್ನು ನೀಡಿದೆ.

## 2020 2021ನೇ ಸಾಲಿನ ವಿಜಯ್ ಹಜಾರೆ ಟ್ರೋಫಿ ತನ್ನದಾಗಿಸಿಕೊಂಡ ಮುಂಬೈ ತಂಡ



* ರಣಜಿ ಏಕದಿನ ಟ್ರೋಫಿ ಎಂದೂ ಕರೆಯಲ್ಪಡುವ ವಿಜಯ್ ಹಜಾರೆ ಟ್ರೋಫಿಯನ್ನು2002 03ರಲ್ಲಿ ಸೀಮಿತ ಓವರ್‌ಗಳ ಕ್ರಿಕೆಟ್ ದೇಶೀಯ ಸ್ಪರ್ಧೆಯಾಗಿ ಪ್ರಾರಂಭ ಮಾಡಲಾಯಿತು. ಭಾರತದ ಪ್ರಸಿದ್ಧ ಕ್ರಿಕೆಟಿಗ ವಿಜಯ್ ಹಜಾರೆ ಅವರ ಹೆಸರನ್ನು ಇಡಲಾಗಿದೆ.
* 2020 2021ನೇ ಸಾಲಿನ ಫೈನಲ್‌ನಲ್ಲಿ ಪಂದ್ಯದಲ್ಲಿ ಮುಂಬೈ ತಂಡವು, ಉತ್ತರ ಪ್ರದೇಶದ ತಂಡವನ್ನು ಸೋಲಿಸಿ ಜಯ ಸಾಧಿಸಿದೆ.
* ಪ್ರಸ್ತುತ ಮುಂಬೈ ತಂಡವು ಒಟ್ಟಾರೆ 4 ಬಾರಿ ಈ ಪ್ರಶಸ್ತಿಯನ್ನು ಪಡೆದುಕೊಂಡಿದೆ.
* ತಂಡ ತಮಿಳುನಾಡು ತಂಡವು ಅತ್ಯಂತ ಯಶಸ್ವಿಯಾಗಿ 5 ಬಾರಿ ಟ್ರೋಫಿ ಗೆದ್ದುಕೊಂಡಿದೆ.
* 2021ರ ಆವೃತ್ತಿಯಲ್ಲಿ ವಿಜಯ್ ಹಜಾರೆ ಟ್ರೋಫಿ ನಡೆದಿದ್ದು, ಕೋರೋಣ ಸೋಂಕಿನ ಹಿನ್ನಲೆಯಿಂದಾಗಿ ಈ ರಣಜಿ ಟ್ರೋಫಿ ನಡೆದಿರಲಿಲ್ಲ.

## ಬುರ್ಖಾನಿಷೇದ ಶ್ರೀಲಂಕಾ ಸರ್ಕಾರ ನಿರ್ಧಾರ



* ಶ್ರೀಲಂಕಾ ಸರ್ಕಾರವು ರಾಷ್ಟ್ರೀಯ ಭದ್ರತೆ ಕಾರಣದಿಂದಾಗಿ ಮುಸ್ಲಿಂ ಮಹಿಳೆಯರು ಬುರ್ಖಾ ಧರಿಸುವುದನ್ನು ನಿಷೇಧಿಸಲು ಮುಂದಾಗಿದೆ ಜೊತೆಗೆ 1,000ಕ್ಕೂ ಹೆಚ್ಚು ಮದರಸಾಗಳನ್ನು ಮುಚ್ಚುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಶ್ರೀಲಂಕಾ ಸರ್ಕಾರ ಮಾಹಿತಿಯನ್ನು ಬಹಿರಂಗ ಪಡಿಸಿದೆ.

* ಸಾರ್ವಜನಿಕ ಭದ್ರತಾ ಸಚಿವ ಶರತ್ ವೀರಶೇಖರ ನೀಡಿರುವ ಮಾಹಿತಿ ಪ್ರಕಾರ ಬುರ್ಖಾ ನಿಷೇದ ವಿಷಯದ ಪ್ರಸ್ತಾವನೆಗೆ ಸಹಿ ಹಾಕಲಾಗಿದೆ ಮತ್ತು ಇದನ್ನು ಅನುಮೋದನೆಗಾಗಿ ಸಚಿವ ಸಂಪುಟಕ್ಕೆ ಕಳುಹಿಸಲಾಗುವುದು ಎಂದು ತಿಳಿದು ಬಂದಿದೆ.
* ಪ್ರಸ್ತುತ ಶ್ರೀಲಂಕಾ ದೇಶದಲ್ಲಿ 1000ಕ್ಕೂ ಹೆಚ್ಚು ಮದರಸಾಗಳನ್ನು ಹೊಂದಿದೆ, ಆದರೆ ಇದೀಗ ಈ ಮದರಸಾಗಳು ರಾಷ್ಟ್ರೀಯ ಶಿಕ್ಷಣ ನೀತಿ ಅನುಸಾರ ಕಾರ್ಯ ನಿರ್ವಹಿಸುತ್ತಿಲ್ಲ, ಮತ್ತು ಪ್ರಾಧಿಕಾರದಲ್ಲಿ ಸರಿಯಾದ ನೋಂದಣಿಯನ್ನೂ ಮಾಡಿಲ್ಲ ಎಂದು ಮದರಸಾಗಳನ್ನು ಮುಚ್ಚಲಾಗುವದು ಎಂದು ತಿಳಿಸಿದ್ದಾರೆ.
* ಈ ಮೊದಲು ಶ್ರೀಲಂಕಾದ ಈಸ್ಟರ್ ದಿನ ಚರ್ಚ್ ಮತ್ತು ಹೋಟೆಲ್‌ಗಳ ಮೇಲೆ 2019ರಲ್ಲಿ ನಡೆದ ಬಾಂಬ್ ದಾಳಿಯಲ್ಲಿ 260ಕ್ಕೂ ಅಧಿಕ ಜನರು ಸಾವನ್ನಪಿದ್ದರು, ಈ ಕಾರಣದಿಂದಾಗಿ ಬುರ್ಖಾ ಧರಿಸುವುದನ್ನು ಶ್ರೀಲಂಕಾ ಸರ್ಕಾರ ತಾತ್ಕಾಲಿಕವಾಗಿ ನಿಷೇದ ಹೇರಿತ್ತು, ಇದೀಗ ಸಂಪೂರ್ಣ ಬುರ್ಖಾ ನಿಷೇಧಿಸಲು ಮುಂದಾಗಿದೆ.

## ಅಮೆರಿಕಾ ಶ್ರೇಷ್ಠ ಬಾಕ್ಸರ್ ಮರ್ವಿನ್ ಹೆಗ್ಲರ್ ಸಾವು



* ಅಮೆರಿಕಾದ ಶ್ರೇಷ್ಠ ಬಾಕ್ಸರ್ ಮರ್ವಿನ್ ಹೆಗ್ಲರ್ ಇತ್ತೀಚಿಗೆ ನಿಧನರಾಗಿದ್ದಾರೆ ಎಂದು ಅವರ ಪತ್ನಿ ಸಾಮಾಜಿಕ ಜಾಲತಾಣ ಫೇಸ್ಬುಕ್ ಮೂಲಕ ಮಾಹಿತಿ ನೀಡಿದ್ದಾರೆ.
* ಬಾಕ್ಸಿಂಗ್ ಇತಿಹಾಸದಲ್ಲಿ ಶ್ರೇಷ್ಠ ಮಿಡಲ್ ವೇಟ್ ಬಾಕ್ಸರ್'ಗಳಲ್ಲಿ ಒಬ್ಬರಾದ ಮರ್ವಿನ್ ಹೆಗ್ಲರ್ ಅವರು ತಮ್ಮ 66 ವರ್ಷ ವಯಸ್ಸಿನಲ್ಲಿ ನಿಧನರಾದರು.
* ಮರ್ವಿನ್ ಹೆಗ್ಲರ್ 1973 ರಿಂದ 1987 ರವರೆಗೆ ಬಾಕ್ಸಿಂಗ್ ಆಟದ ಸಮಯದಲ್ಲಿ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನವನ್ನು ತೋರಿದ್ದರು.
* ಹೆಗ್ಲರ್ ರವರು 2 ಪಂದ್ಯ ಡ್ರಾ ಮತ್ತು 52 ಪಂದ್ಯಗಳ ನಾಕೌಟ್‌ಗಳೊಂದಿಗೆ 62–3 ಪಂದ್ಯಗಳ ದಾಖಲೆಯನ್ನು ಮಾಡಿದ್ದಾರೆ.
* 1985 ರಲ್ಲಿ ಸೀಸರ್ ಅರಮನೆಯಲ್ಲಿ ಕೇವಲ 8 ನಿಮಿಷಗಳ ಕಾಲ ಆಡಿದ ಪಂದ್ಯ ಇಲ್ಲಿಯವರೆಗಿನ ಅತ್ಯಂತ ಶ್ರೇಷ್ಠ ಪಂದ್ಯವಾಗಿದೆ, ಈ ಪಂದ್ಯವು ಥಾಮಸ್ 'ಹಿಟ್‌ಮ್ಯಾನ್' ಹರ್ನ್ಸ್ ವಿರುದ್ಧ ಆಡಿದ ಪಂದ್ಯ ಇದಾಗಿದೆ.
* 1987 ರಲ್ಲಿ ಹೆಗ್ಲರ್ ತಮ್ಮ ಬಾಕ್ಸಿಂಗ್ ವೃತ್ತಿಜೀವನಕ್ಕೆ ವಿದಾಯ ತಿಳಿಸಿದ್ದರು.

## ಉತ್ತರಪ್ರದೇಶದಲ್ಲಿ ಕಲಾನಮಕ್ ಅಕ್ಕಿ (Kalanamak Rice) ಉತ್ಸವ ಪ್ರಾರಂಭ



* ಮಾರ್ಚ್ 13, 2021ರಂದು ಉತ್ತರ ಪ್ರದೇಶದ ಸಿದ್ಧಾರ್ಥ್ ನಗರ ಜಿಲ್ಲೆಯಲ್ಲಿ 3 ದಿನಗಳ ಕಾಲ "ಕಲನಮಕ್ ಅಕ್ಕಿ ಉತ್ಸವ"ವನ್ನು ಉತ್ತರ ಪ್ರದೇಶ ಸರ್ಕಾರವು ಆಯೋಜಿಸಿದೆ.
* ಝೂನ್ಸಿ'ಯಲ್ಲಿ ಸ್ಟ್ರಾಬೆರಿ ಉತ್ಸವ ಮತ್ತು ಲಕ್ನೋದಲ್ಲಿ ಬೆಲ್ಲದ ಉತ್ಸವ'ದ ಅದ್ಭುತ ಯಶಸ್ಸಿನ ನಂತರ ಈ ಉತ್ಸವವನ್ನು ಆಯೋಜಿಸಲಾಗಿದೆ.
* ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್'ರವರು ಸ್ಥಳೀಯ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ರೈತರಿಗೆ ಹೊಸ ಆದಾಯದ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಈ ಉತ್ಸವವನ್ನು ಮಾರ್ಚ್ 13 ರಂದು ಉದ್ಘಾಟಣೆ ಮಾಡಿದರು.
* ಆತ್ಮನಿರ್ಭಾರ ಭಾರತ್ ಅಭಿಯಾನ್ ಹಾಗೂ ಲೋಕಲ್ ಫಾರ್ ವೋಕಲ್(Local for Vocal) ಅಭಿಯಾನದ ಅಡಿಯಲ್ಲಿ One District One Product ಎಂದು ಉತ್ತೇಜಿಸಲು, ಮಾರಾಟ ಮಾಡಲು ಅಕ್ಕಿ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.
* ಕಲಾನಮಕ್ ಅಕ್ಕಿಯನ್ನು ಉತ್ತರ ಪ್ರದೇಶದಲ್ಲಿ ಬೆಳೆಯಲಾಗುತ್ತದೆ ಮತ್ತು ಇದು ಪೂರ್ವ ಯುಪಿಯ ಕೆಲವು ಜಿಲ್ಲೆಗಳ ಒಂದು ಉತ್ಪನ್ನವಾಗಿದೆ.
* ಕಲಾನಮಕ್ ಅಕ್ಕಿ ಉತ್ಸವವು ಪ್ರಗತಿಪರ ರೈತರು ಮತ್ತು ಸ್ವ ಸಹಾಯ ಗುಂಪುಗಳಿಗೆ ಕೃಷಿ ಉತ್ಪನ್ನದ ಮತ್ತು ಸಂಸ್ಕರಣೆಗೆ ಬಗ್ಗೆ ಮಾಹಿತಿಯನ್ನು ನೀಡಲಿದೆ ಎಂದು UP ಸರ್ಕಾರ ತಿಳಿಸಿದೆ.

## ಮೇರಾ ರೇಷನ್ ಮೊಬೈಲ್ ಅಪ್ಲಿಕೇಶನ್ ಪ್ರಾರಂಭ



* ಮಾರ್ಚ್ 12, 2021ರಂದು ಕೇಂದ್ರ ಸರ್ಕಾರವು ದೇಶದಲ್ಲಿ 'ಮೇರಾ ರೇಷನ್ ಮೊಬೈಲ್ ಅಪ್ಲಿಕೇಶನ್' ಆರಂಭಿಸಿದೆ.
* ಕೇಂದ್ರ ಸರ್ಕಾರವು ಒನ್ ನೇಷನ್  ಒನ್ ರೇಷನ್ ಕಾರ್ಡ್ ವ್ಯವಸ್ಥೆಗೆ ಸಹಾಯವಾಗುವಂತೆ ಈ ಅಪ್ಲಿಕೇಶನ್'ಅನ್ನು ಅಭಿವೃದ್ಧಿ ಪಡಿಸಿ ಪ್ರಾರಂಭ ಮಾಡಿದೆ.
* ಕೇಂದ್ರ ಸರ್ಕಾರವು ಈ ಅಪ್ಲಿಕೇಶನ್'ನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ.
* ಬರುವ ದಿನಗಳಲ್ಲಿ ಮೊಬೈಲ್ ಅಪ್ಲಿಕೇಶನ್ 14 ಭಾಷೆಗಳಲ್ಲಿ ಪ್ರಾರಂಭಿಸಲಾಗುವುದು, ಸದ್ಯ ಇದು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಲಭ್ಯವಿದೆ.
* ವಲಸೆ ಜನರು ಹೋಗುವ ಸ್ಥಳಗಳ ಆಧಾರದ ಮೇಲೆ ಭಾಷೆಗಳನ್ನು ಗುರುತಿಸಲಾಗುತ್ತದೆ ಎಂದು ಸರ್ಕಾರ ಮಾಹಿತಿಯನ್ನು ನೀಡಿದೆ.
* ಒನ್ ನೇಷನ್ ಒನ್ ರೇಷನ್ ಕಾರ್ಡ್ ವ್ಯವಸ್ಥೆಯು ವಿಶೇಷವಾಗಿ ವಲಸೆ ಕಾರ್ಮಿಕರಿಗೆ ಮತ್ತು ಅವರ ಕುಟುಂಬಗಳಿಗೆ ಪ್ರಯೋಜನವನ್ನು ನೀಡುತ್ತದೆ.
* ಒನ್ ನೇಷನ್ ಒನ್ ರೇಷನ್ ಕಾರ್ಡ್ ವ್ಯವಸ್ಥೆಯು ಪ್ರಯೋಜನಗಳನ್ನು ದೇಶಾದ್ಯಂತದ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡೆಯಬಹುದು.
* ಆಗಸ್ಟ್ 2019 ರಲ್ಲಿ ಒನ್ ನೇಷನ್ ಒನ್ ರೇಷನ್ ಕಾರ್ಡ್ ವ್ಯವಸ್ಥೆಯುನ್ನು ಆರಂಭಮಾಡಲಾಗಿತ್ತು.

# 16-03-2021

## ಕೇಂದ್ರ ಸರ್ಕಾರದಿಂದ 2019 ರಿಂದ 2000 ರೂ. ನೋಟ್ ಪ್ರಿಂಟ್ ಸ್ಥಗಿತ



* ಕೇಂದ್ರ ಸರ್ಕಾರ 2019 ರಿಂದ 2000 ರೂ. ಮುಖಬೆಲೆಯ ಕರೆನ್ಸಿ ನೋಟುಗಳನ್ನು ಮುದ್ರಿಸಲಾಗಿಲ್ಲ ಎಂದು ಲೋಕಸಭೆಗೆ ಮಾಹಿತಿ ನೀಡಿದೆ.

* ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಠಾಕೂರ್ ರವರು 2000 ರೂಪಾಯಿ ಮುಖಬೆಲೆಯ ನೋಟು ಮುದ್ರಿಸಿಲ್ಲ ಎಂದು ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದಾರೆ.
* 2021 ಫೆಬ್ರುವರಿ 26ರ ಹೊತ್ತಿಗೆ 2000 ರೂ. ಮುಖಬೆಲೆಯ 2499 ಮಿಲಿಯನ್ ನೋಟುಗಳು ಚಲಾವಣೆಯಲ್ಲಿವೆ.
* ಹೆಚ್ಚಿನ ಮೊತ್ತದ ಕರೆನ್ಸಿ ಸಂಗ್ರಹಿಸುವುದನ್ನು ತಡೆಯುವ ನಿಟ್ಟಿನಲ್ಲಿ ಮತ್ತು ಕಪ್ಪು ಹಣ ಹಾಗೂ ನಕಲಿ ನೋಟು ತಡೆಯುವ ಉದ್ದೇಶದಿಂದ 2016 ರನವೆಂಬರ್‌ನಲ್ಲಿ 500 ಮತ್ತು 1000 ರೂಪಾಯಿ ಮುಖಬೆಲೆಯ ನೋಟುಗಳನ್ನು ಹಿಂಪಡೆದು 2000 ರೂ. ಜೊತೆಗೆ ಬೇರೆ ಬೇರೆ ಮುಖಬೆಲೆಯ ಹೊಸ ನೋಟುಗಳನ್ನು ಪರಿಚಯಿಸಲಾಗಿತ್ತು.

## ಪೆಟ್ರೋಲ್, ಡೀಸೆಲ್ GST ವ್ಯಾಪ್ತಿಗೆ ತರುವುದಿಲ್ಲ : ನಿರ್ಮಲಾ ಸೀತಾರಾಮನ್ ಸ್ಪಷ್ಟನೆ




* ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್'ರವರು ಪ್ರಸ್ತುತ ಗರಿಷ್ಠ ಮಟ್ಟದಲ್ಲಿರುವ ಪೆಟ್ರೋಲ್, ಡೀಸೆಲ್ ಅನ್ನು ಸರಕು ಮತ್ತು ಸೇವಾ ತೆರಿಗೆ (GST) ವ್ಯಾಪ್ತಿಗೆ ತರುವುದಿಲ್ಲ ಎಂದು ಲೋಕಸಭೆಯಲ್ಲಿ ತಿಳಿಸಿದರು.
* ಕಚ್ಚಾ ತೈಲ, ಪೆಟ್ರೋಲ್, ಡೀಸೆಲ್ ಹಾಗೂ ವಿಮಾನ ಇಂಧನ ಮತ್ತು ನೈಸರ್ಗಿಕ ಅನಿಲವನ್ನು GST ವ್ಯಾಪ್ತಿಗೆ ತರಲಾಗುವದಿಲ್ಲ ಎಂದು ಲೋಕಸಭೆಗೆ ಲಿಖಿತ ಉತ್ತರದಲ್ಲಿ ನಿರ್ಮಲಾ ಸೀತಾರಾಮನ್'ರವರು ತಿಳಿಸಿದರು.
* ರಾಜ್ಯಗಳ ಜಿಎಸ್‌ಟಿ ಮಂಡಳಿಯು ಇದುವರೆಗೆ ಈ ಕಚ್ಚಾ ತೈಲ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎಂದು ಶಿಫಾರಸ್ಸು ಮಾಡಿಲ್ಲ ಎಂದು ನಿರ್ಮಲಾ ಸೀತಾರಾಮನ್ ಲೋಕಸಭೆಗೆ ಮಾಹಿತಿಯನ್ನು ತಿಳಿಸಿದರು.
* ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಠಾಕೂರ್'ರವರು ನೀಡಿದ ಮಾಹಿತಿ ಪ್ರಕಾರ ಕಳೆದ ವರ್ಷ ಪೆಟ್ರೋಲ್ ಮೇಲಿನ ಅಬಕಾರಿ ಸುಂಕ 19.98 ರೂಪಾಯಿಗಳಷ್ಟಿತ್ತು, ಪ್ರಸ್ತುತ ಈ ವರ್ಷ ಅದು 32.9 ರೂಪಾಯಿಗಳಾಗಿದೆ ಎಂಬ ಮಾಹಿತಿ ನೀಡಿದ್ದಾರೆ.
* ಡೀಸೆಲ್ ಮೇಲಿನ ಅಬಕಾರಿ ಸುಂಕ ಕಳೆದ ವರ್ಷ 15.83 ರೂಪಾಯಿಗಳಷ್ಟಿತ್ತು, ಪ್ರಸ್ತುತ ಈ ವರ್ಷ 31.8 ರೂಪಾಯಿ ಆಗಿದೆ ಎಂದು ತಿಳಿಸಿದ್ದಾರೆ.

## ಖ್ಯಾತ ವರ್ಣಚಿತ್ರಕಾರ ಲಕ್ಷ್ಮಣ್ ಪೈ ನಿಧನ



* ಖ್ಯಾತ ವರ್ಣಚಿತ್ರಕಾರ ಮತ್ತು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಲಕ್ಷ್ಮಣ್ ಪೈ ರವರು ಇತ್ತೀಚಿಗೆ ತಮ್ಮ 95ನೇ ವಯಸ್ಸಿನಲ್ಲಿ ವಿಧಿವಶರಾದರು.
* ಲಕ್ಷ್ಮಣ್ ಪೈ ಅವರು 1926ರಲ್ಲಿ ಗೋವಾದಲ್ಲಿ ಜನಿಸಿದ್ದರು ಇವರಿಗೆ ಪದ್ಮಭೂಷಣ್, ಪದ್ಮಶ್ರೀ, ನೆಹರೂ ಪ್ರಶಸ್ತಿ ಮತ್ತು ಲಲಿತಕಲಾ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹೀಗೆ ಹಲವು ಗೌರವ ಪ್ರಶಸ್ತಿಗಳು ಲಭಿಸಿದೆ.
* ಕಲಾ ಕ್ಷೇತ್ರದಲ್ಲಿ ಇವರು ನೀಡಿದ ಕೊಡುಗೆಯನ್ನು ಸದಾ ನೆನಪಿಸಿಕೊಳ್ಳುತ್ತೇವೆ, ಮತ್ತು ಅವರ ನಿಧನಕ್ಕೆ ವಿಷಾದಿಸುತ್ತೇವೆ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಟ್ವೀಟ್ ಮೂಲಕ ತಿಳಿಸಿದ್ದಾರೆ.

## 2021ರ ನ್ಯಾವಿಗೇಷನ್ ಮಸೂದೆಗೆ ಸಾಗರ ಸಹಾಯ ಪರಿಚಯ



* ಮಾರ್ಚ್ 15, 2021 ರಂದು ಸಾಗರ ಏಡ್ಸ್ ಟು ನ್ಯಾವಿಗೇಷನ್ ಮಸೂದೆಯನ್ನು ಲೋಕಸಭೆಯಲ್ಲಿ ಪರಿಚಯಿಸಲಾಯಿತು.
* ಈ ನ್ಯಾವಿಗೇಷನ್ ಮಸೂದೆಯನ್ನು ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವ ಮನ್ಸುಖ್ ಮಾಂಡವಿಯಾ ಅವರು ಲೋಕಸಭೆಯಲ್ಲಿ ಮಂಡಿಸಿದರು.
* ಈ ನ್ಯಾವಿಗೇಷನ್ ಮಸೂದೆಯಿಂದ ಸಾಗರ ಉದ್ಯಮದ ಆಧುನಿಕ ಮತ್ತು ಸಮಕಾಲೀನ ಅಗತ್ಯತೆಗಳನ್ನು ಬದಲಾಯಿಸುವ ಸಲುವಾಗಿ ಹಡಗು ಸಚಿವಾಲಯವು ಪೂರ್ವಭಾವಿ ವಿಧಾನದ ಒಂದು ಭಾಗವನ್ನು ಅಳವಡಿಸಿಕೊಂಡಡೆ.
*2021ರ ಈ ಮೆರೈನ್ ಏಡ್ಸ್ ಟು ನ್ಯಾವಿಗೇಷನ್ ಬಿಲ್ ನಿಂದಾಗಿ ಹಡಗು ಸಂಚಾರ ಸೇವೆಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಮಸೂದೆ ಹೊಸ ಚೌಕಟ್ಟನ್ನು ನೀಡಲು ಸಹಾಯ ಮಾಡುತ್ತದೆ.
* ನ್ಯಾವಿಗೇಷನ್‌ನಲ್ಲಿ ಆಧುನಿಕ ರೂಪಗಳ ಸಹಾಯದ ಬಳಕೆಯನ್ನು ಸಕ್ರಿಯಗೊಳಿಸುವ ಸಲುವಾಗಿ 'ಲೈಟ್‌ಹೌಸ್' ಬದಲಿಗೆ, ನ್ಯಾವಿಗೇಷನ್‌ಗೆ ಸಾಗರ ಸಾಧನಗಳು ಎಂಬ ಪದವನ್ನು ಬಳಸಲು ಇದು ಸಹಾಯಮಾಡಲಿದೆ.
* ಈ ಮಸೂದೆಯು ಒಂಬತ್ತು ದಶಕಗಳಷ್ಟು ಹಳೆಯದಾದ ಕಾನೂನನ್ನು ಬದಲಾಯಿಸಲು ಸಹಾಯಮಾಡುತ್ತದೆ.
* ಪಾರಂಪರಿಕ ದೀಪಸ್ತಂಭಗಳನ್ನು ಗುರುತಿಸಲು ಮತ್ತು ಅಭಿವೃದ್ಧಿಪಡಿಸಲು ಮಸೂದೆಯಿಂದ ಅನುಕೂಲವಾಗಲಿದೆ.
* ಈ ಮಸೂದೆಯುನ್ನು 1927ರ ವಸಾಹತುಶಾಹಿ ಲೈಟ್‌ಹೌಸ್ ಕಾಯ್ದೆಯನ್ನು ರದ್ದುಗೊಳಿಸುವ ಸಲುವಾಗಿ ಲೋಕಸಭೆಯಲ್ಲಿ ಈ ಮಸೂದೆಯನ್ನು ಪರಿಚಯಿಸಲಾಯಿತು.

## 2021ರ ಏಪ್ರಿಲ್'ನಲ್ಲಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಭಾರತಕ್ಕೆ ಭೇಟಿ



* 2021ರ ಏಪ್ರಿಲ್ ತಿಂಗಳಲ್ಲಿ ಬ್ರಿಟನ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ.
* ಈ ಹಿಂದೆ ಇವರು ಜನೇವರಿ 2021ರ ಭಾರತದ ಗಣರಾಜ್ಯೋತ್ಸವದ ಆಚರಣೆಗೆ ಮುಖ್ಯ ಅತಿಥಿಯಾಗಿ ಭಾರತಕ್ಕೆ ಭೇಟಿ ನೀಡಬೇಕಿತ್ತು ಆದರೆ COVID 19 ಹಿನ್ನಲೆಯಿಂದಾಗಿ ಇವರು ಭೇಟಿಯನ್ನು ರದ್ದುಗೊಳಿಸಿದ್ದರು.
* ಈ ಬ್ರಿಟನ್ ಪ್ರಧಾನ ಮಂತ್ರಿಯ ಭೇಟಿಯಲ್ಲಿ ಇಂಡೋ ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಪ್ರಭಾವವನ್ನು ಎದುರಿಸಲು ಸಹಾಯಮಾಡುತ್ತದೆ.

* ಇಂಡೋ ಪೆಸಿಫಿಕ್ ಪ್ರದೇಶವನ್ನು ವಿಶ್ವದ ಭೌಗೋಳಿಕ ರಾಜಕೀಯ ಕೇಂದ್ರವಾಗಿದೆ ಎಂದು ಸರ್ಕಾರ ಮಾಹಿತಿಯನ್ನು ನೀಡಿದೆ.
* ದಕ್ಷಿಣ ಚೀನಾ ಸಮುದ್ರದ ಪ್ರದೇಶಗಳಲ್ಲಿ ಕ್ವೀನ್ ಎಲಿಜಬೆತ್ ವಿಮಾನವಾಹಕ ನೌಕೆ ಎಂದು ಕರೆಯಲ್ಪಡುವ ಬ್ರಿಟಿಷ್ ವಿಮಾನಗಳನ್ನು ನಿಯೋಜಿಸಲಾಗುವದು ಎಂದು ತಿಳಿಸಿದೆ.
* ರಕ್ಷಣಾ ಮತ್ತು ವಿದೇಶಾಂಗ ನೀತಿಯ ಆದ್ಯತೆಗಳನ್ನು ತಿಳಿಸುತ್ತದೆ ಎಂದು ಯುಕೆ ತಿಳಿಸಿದೆ.

## ರಾಜ್ಯಸಭೆಯು ರಾಷ್ಟ್ರೀಯ ಆಹಾರ ತಂತ್ರಜ್ಞಾನ ಮಸೂದೆ 2019 ಅನ್ನು ಅನುಮೋದಿಸಿದೆ.



* ಮಾರ್ಚ್ 15, 2021 ರಂದು ರಾಷ್ಟ್ರೀಯ ಆಹಾರ ತಂತ್ರಜ್ಞಾನ ಮಸೂದೆಯುನ್ನು ರಾಜ್ಯಸಭೆ ಅಂಗೀಕರಿಸಿದೆ.
* ಭಾರತೀಯ ಆಹಾರ ಸಂಸ್ಕರಣಾ ತಂತ್ರಜ್ಞಾನ ಸಂಸ್ಥೆಯು ಹರಿಯಾಣದ ಕುಂಡ್ಲಿ ಮತ್ತು ತಮಿಳುನಾಡಿನ ತಂಜಾವೂರನ್ನು, ಆಹಾರ ತಂತ್ರಜ್ಞಾನ ಉದ್ಯಮಶೀಲತೆ ಮತ್ತು ನಿರ್ವಹಣೆಯ ರಾಷ್ಟ್ರೀಯ ಸಂಸ್ಥೆಗಳು ಎಂದು ಘೋಷಿಸಿದೆ.
* ರಾಜ್ಯ ಸಭೆಯು ಬಿಲ್ ಆಡಳಿತ ಮಂಡಳಿಯನ್ನು ಸ್ಥಾಪಿಸುತ್ತದೆ, ಇದು ಪ್ರಧಾನ ಕಾರ್ಯನಿರ್ವಾಹಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ತಿಳಿದು ಬಂದಿದೆ.
* ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಬೋಧನೆ, ಸಂಶೋಧನೆ ಮತ್ತು ಜ್ಞಾನ ಪ್ರಸಾರವನ್ನು ನೀಡುತ್ತದೆ.
* ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವ ಶ್ರೀಮತಿ ಹರ್ಸಿಮ್ರತ್ ಕೌರ್ ಬಾದಲ್ ರವರು 2019 ರ ಫೆಬ್ರವರಿಯಲ್ಲಿ ರಾಷ್ಟ್ರೀಯ ಆಹಾರ ತಂತ್ರಜ್ಞಾನ ಮಸೂದೆ ಯನ್ನು ರಾಜ್ಯಸಭೆಯಲ್ಲಿ ಪರಿಚಯಿಸಿದರು.

# 17- 03- 2021

## ಬಾಂಗ್ಲಾದೇಶ ಮಾಜಿ ಪ್ರಧಾನಿ ಮೌದುದ್ ಅಹ್ಮದ್ ವಿಧಿವಶ



* ಬಾಂಗ್ಲಾದೇಶದ ಮಾಜಿ ಪ್ರಧಾನಿ ಮತ್ತು ನ್ಯಾಯವಾದಿ ಮೌದುದ್ ಅಹ್ಮದ್'ರವರು ತಮ್ಮ 81ನೇ ವಯಸ್ಸಿನಲ್ಲಿ ವಿಧಿವಶರಾದರು.
* ಮೌದುದ್ ಅಹ್ಮದ್ ರವರು 24 ಮೇ 1940 16 ಮಾರ್ಚ್ 2021 ವರೆಗೆ ಬಾಂಗ್ಲಾದೇಶದ ವಕೀಲ ಮತ್ತು ರಾಜಕಾರಣಿ ಯಾಗಿದ್ದರು.
* ಬಾಂಗ್ಲಾದೇಶ ರಾಷ್ಟ್ರೀಯವಾದಿ ಪಕ್ಷದ ಸ್ಥಾಯಿ ಸಮಿತಿ ಸದಸ್ಯರಾಗಿದ್ದರು.
* ಅಹ್ಮದ್ ಸ್ವಾತಂತ್ರ್ಯದ ನಂತರ ಬಾಂಗ್ಲಾದೇಶದ ಪೋಸ್ಟ್ ಮಾಸ್ಟರ್ ಜನರಲ್ ಆಗಿ ಸೇವೆ ಸಲ್ಲಿಸಿದರು.
* 1980 ರ ದಶಕದಿಂದ ಅವರು ಬಾಂಗ್ಲಾದೇಶ ಸರ್ಕಾರದಲ್ಲಿ ಉಪ ಪ್ರಧಾನ ಮಂತ್ರಿಯಾಗಿ 1976 1978 ಮತ್ತು 1987 1988ರ ವರೆಗೆ ಸೇವೆ ಸಲ್ಲಿಸಿದ್ದಾರೆ.
* ಬಾಂಗ್ಲಾದೇಶದ ಪ್ರಧಾನಿಯಾಗಿ 1988 1989ರ ವರೆಗೆ ಸೇವೆ ಸಲ್ಲಿಸಿದ್ದಾರೆ.
* ಬಾಂಗ್ಲಾದೇಶದ ಉಪಾಧ್ಯಕ್ಷರಾಗಿ 1989 1990ರ ವರೆಗೆ ಕಾರ್ಯ ನಿರ್ವಹಿಸಿದ್ದಾರೆ.
*ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ 2001 2006ರ ವರೆಗೆ ಕಾರ್ಯ ನಿರ್ವಹಿಸಿದ್ದಾರೆ.

## ರಾಜ್ಯವಕ್ಫ್ ಬೋರ್ಡ್ ಸುತ್ತೋಲೆ ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆ



* ರಾಜ್ಯ ವಕ್ಫ್ ಬೋರ್ಡ್ ಮಸೀದಿಗಳಲ್ಲಿ ಧ್ವನಿವರ್ಧಕ ಬಳಸದಂತೆ ಸುತ್ತೋಲೆ ಹೊರಡಿಸಿದೆ.
* ಪ್ರಸ್ತುತ ಮಸೀದಿ, ದರ್ಗಾಗಳಲ್ಲಿ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೆ ಧ್ವನಿ ವರ್ಧಕಗಳನ್ನು ಬಳಸದಂತೆ ರಾಜ್ಯ ವಕ್ಫ್ ಬೋರ್ಡ್ ಮಂಡಳಿ ಸುತ್ತೋಲೆ ಹೊರಡಿಸಿದೆ.
* ವಕ್ಫ್ ಬೋರ್ಡ್ ಮಂಡಳಿಯ ಅಡಿಯಲ್ಲಿ ಸರಿ ಸುಮಾರು 32 ಸಾವಿರ ಮಸೀದಿಗಳು ಹಾಗೂ ದರ್ಗಾ ನೋಂದಣಿಯಾಗಿವೆ.
* ರಾಜ್ಯ ವಕ್ಫ್ ಬೋರ್ಡ್ ಮಂಡಳಿಯು ಶಬ್ದ ಮಾಲಿನ್ಯ ನಿಯಂತ್ರಣ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸಭೆ ನಡೆಸಲಾಗಿತ್ತು.
* ಮಸೀದಿ ಹಾಗೂ ದರ್ಗಾಗಳ ಆಡಳಿತ ಸಮಿತಿಗಳಿಗೆ ಶಬ್ದ ಮಾಲಿನ್ಯ ನಿಯಂತ್ರಣ ಸಂಬಂಧ ಅರಿವು ಮೂಡಿಸಲು ತೀರ್ಮಾನ ಕೈಗೊಳ್ಳಲಾಗಿತ್ತು ಎಂದು ರಾಜ್ಯ ವಕ್ಫ್ ಬೋರ್ಡ್ ಮಂಡಳಿ ತಿಳಿಸಿದೆ.
* ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೆ ಧ್ವನಿವರ್ಧಕ ಬಳಸುವಂತಿಲ್ಲ, ಇನ್ನುಳಿದ ಸಮಯದಲ್ಲಿ ಶಬ್ದಮಾಲಿನ್ಯ ನಿಯಂತ್ರಣ ಮಾರ್ಗಸೂಚಿಯನ್ನು ಗಮನಿಸಿ ಬಳಸಬೇಕು ಎಂದು ಸುತ್ತೋಲೆ ಹೊರಡಿಸಿದೆ.
* ರಾಜ್ಯವಕ್ಫ್ ಬೋರ್ಡ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೊಹಮದ್ ಯೂಸುಫ್ ಸುತ್ತೋಲೆಯಲ್ಲಿ ಮಸೀದಿಗಳಲ್ಲಿ ಅಝಾನ್ ಹೇಳಲು, ಮರಣವಾರ್ತೆ, ದಫನ್ ಕಾರ್ಯದ ಸಮಯ ಮತ್ತು ಪ್ರಮುಖ ಉದ್ದೇಶಗಳಿಗೆ ಧ್ವನಿವರ್ಧಕ ಬಳಸಬಹುದು ಎಂದು ತಿಳಿಸಿದ್ದಾರೆ.

## ಮೋದಿ ಪ್ರಧಾನ ಸಲಹೆಗಾರ ಪಿ.ಕೆ. ಸಿನ್ಹಾ ರಾಜೀನಾಮೆ



* ಪ್ರಧಾನಿ ನರೇಂದ್ರ ಮೋದಿ ಅವರ ಪ್ರಧಾನ ಸಲಹೆಗಾರಾಗಿರುವ ಪ್ರದೀಪ್ ಕುಮಾರ್ ಸಿನ್ಹಾ ಅವರು ತಮ್ಮ ಹುದ್ದೆಗೆ ವೈಯಕ್ತಿಕ ಕಾರಣಗಳನ್ನು ತಿಳಿಸಿ ರಾಜೀನಾಮೆ ನೀಡಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ.
* ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅಥವಾ ಪುದುಚೇರಿಯಂತಹ ಸಾಂವಿಧಾನಿಕ ಹುದ್ದೆಗೆ ಸಿನ್ಹಾ ಅವರನ್ನು ನರೇಂದ್ರ ಮೋದಿ ಸರ್ಕಾರವು ಪರಿಗಣಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.
* ಪಿ. ಕೆ. ಸಿನ್ಹಾ ರವರು 1977 ರ ಬ್ಯಾಚ್‌ನ ಉತ್ತರ ಪ್ರದೇಶದ ಕೇಡರ್ ಅಧಿಕಾರಿಯಾಗಿದ್ದರು.

* ಐಎಎಸ್ ಇತಿಹಾಸದಲ್ಲಿ ಕ್ಯಾಬಿನೆಟ್ ಕಾರ್ಯದರ್ಶಿಯಾಗಿ ಮೂರು ವಿಸ್ತರಣೆಗಳನ್ನು ಪಡೆದ ಏಕೈಕ ವ್ಯಕ್ತಿಯಾಗಿದ್ದಾರೆ.

## 70ದೇಶಗಳಿಗೆ5.8ಕೋಟಿಕೋವಿಡ್ಲಸಿಕೆಪೂರೈಸಿದಭಾರತ




* ಪ್ರಸ್ತುತ ಭಾರತ ದೇಶವು 5.8 ಕೋಟಿ ಕೊರೊನಾ ಲಸಿಕೆ ಡೋಸ್‌ಗಳನ್ನು ಜಗತ್ತಿನ 70 ದೇಶಗಳಿಗೆ ಪೂರೈಸಿದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ವರ್ಚುವಲ್ ಶೃಂಗ ಸಭೆಯಲ್ಲಿ ಮಾಹಿತಿಯನ್ನು ನೀಡಿದರು.
* ಫಿನ್ಲಂಡ್ ಜತೆಗಿನ ದ್ವಿಪಕ್ಷೀಯ ವರ್ಚುವಲ್ ಶೃಂಗ ಸಭೆಯಲ್ಲಿ ಪ್ರಧಾನಿ ಮೋದಿ ಭಾರತವನ್ನು ಉದ್ದೇಶಿಸಿ ಮಾತನಾಡಿದರು.
* ಭಾರತ ಫಿನ್ಲಂಡ್ ಎರಡೂ ರಾಷ್ಟ್ರಗಳು ಪಾರದರ್ಶಕ, ತಂತ್ರಜ್ಞಾನ, ಆವಿಷ್ಕಾರ, ಇಂಧನಶಕ್ತಿ, ಪರಿಸರ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಉತ್ತಮ ಸಹಕಾರಗಳನ್ನು ಹೊಂದಿವೆ ಎಂದು ತಿಳಿಸಿದರು.

## 2019 20ರ ಸಾಲಿನ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯ ಹಣ ಬಿಡುಗಡೆ




* 2019 20ರ ಸಾಲಿನಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿಯ ಹಣವನ್ನು ಸರಕಾರ ಬಿಡುಗಡೆಗೊಳಿಸಿದೆ.
* 2020 21 ಮತ್ತು 2021 22ರ ಸಾಲಿನ ಯೋಜನೆಯನ್ನು ಹಣವನ್ನು ಕೋವಿಡ್ 19 ಕಾರಣದಿಂದಾಗಿ ನಿಧಿಯನ್ನು ಬಿಡುಗಡೆಗೊಳಿಸಿಲ್ಲ ಎಂದು ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯಸಭೆಯಲ್ಲಿ ಮಾಹಿತಿಯನ್ನು ನೀಡಿದರು.
* 2019 20ರ ಯೋಜನೆಯ ನಿಧಿಯನ್ನು ಬಳಸಿಕೊಂಡು ಲೋಕಸಭೆ ಮತ್ತು ರಾಜ್ಯಸಭೆ ಸಂಸದರು ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಬಹುದು ಎಂದು ತಿಳಿಸಲಾಗಿದೆ.
* ಲೋಕಸಭೆಯ ಸಂಸದರು ತನ್ನ ಸಂಸದೀಯ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರತೀ ವರ್ಷ 5 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿ ನಡೆಸಲು ಸಂಸದರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಅವಕಾಶ ಇದೆ ಎಂದು ತಿಳಿಸಲಾಗಿದೆ.
* ಸಂಸದರು ಆಯ್ಕೆ ಮಾಡಿದ ಕಾಮಗಾರಿಯ ಬಗ್ಗೆ ಆಯಾ ಜಿಲ್ಲಾಧಿಕಾರಿಗೆ ಆ ಕಾಮಗಾರಿಯ ಮಾಹಿತಿಯನ್ನು ಶಿಫಾರಸ್ಸು ಮಾಡಬಹುದಾಗಿದೆ.
* ರಾಜ್ಯಸಭೆಯ ಸಂಸದರು ತಾವು ರಾಜ್ಯಸಭೆಗೆ ಆಯ್ಕೆಯಾದ ರಾಜ್ಯದ ಒಂದು ಅಥವಾ ಹೆಚ್ಚು ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಆಯ್ಕೆ ಮಾಡಬಹುದು.

## KRAS ಮೊದಲ ಬ್ಯಾಚ್ MRSAM ಕ್ಷಿಪಣಿ ಕಿಟ್ ಗಳನ್ನು ಬಿಡುಗಡೆ ಮಾಡಿದೆ




* ಕಲ್ಯಾಣಿ ಗ್ರೂಪ್ ಆಫ್ ಇಂಡಿಯಾ ಮತ್ತು ಇಸ್ರೇಲ್‌ನ ರಾಫೆಲ್ ಅಡ್ವಾನ್ಸ್ಡ್ ಡಿಫೆನ್ಸ್ ಸಿಸ್ಟಮ್ಸ್ ಜಂಟಿ ಉದ್ಯಮವಾಗಿರುವ ಕಲ್ಯಾಣಿ ರಾಫೆಲ್ ಅಡ್ವಾನ್ಸ್ಡ್ ಸಿಸ್ಟಮ್ಸ್ ಮಧ್ಯಮ ಶ್ರೇಣಿಯ ಮೇಲ್ಮೈಯಿಂದ ಮೊದಲ ಬ್ಯಾಚ್ ಅನ್ನು ಏರ್ ಕ್ಷಿಪಣಿ (MRSAM) ಕಿಟ್ ಗಳನ್ನು ಬಿಡುಗಡೆ ಮಾಡಿದೆ.
* ಈ ಕ್ಷಿಪಣಿಯನ್ನು ಭಾರತೀಯ ಸೇನೆ ಮತ್ತು ಭಾರತೀಯ ವಾಯುಪಡೆಗೆ ಬಿಡುಗಡೆ ಮಾಡಲಾಗಿದೆ.
* ಮುಂದಿನ ದಿನಗಳಲ್ಲಿ ಭಾರತಕ್ಕೆ MRSAM ಕ್ಷಿಪಣಿಯ 1000 ಕ್ಕೂ ಹೆಚ್ಚು ಕಿಟ್'ಗಳನ್ನೂ ತಲುಪಿಸುವ KRAS ಬದ್ಧತೆಯನ್ನು ಹೊಂದಿದೆ ಎಂದು ತಿಳಿಸಿದೆ.
* KRAS ಇದು ಭಾರತದ ಖಾಸಗಿ ವಲಯದಾಗಿದೆ.
* KRAS ಭಾರತೀಯ ವಾಯುಸೇನೆಯ ಪ್ರಮುಖ ಸೇವೆಯ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯ ನಿರ್ವಹಣೆ ಮತ್ತು ದುರಸ್ತಿ ಕಾರ್ಯಾಚರಣೆಗಳನ್ನು ತಿಳಿಸುತ್ತದೆ.
* ಮಧ್ಯಮ ಶ್ರೇಣಿಯ ಮೇಲ್ಮೈಯಿಂದ ಗಾಳಿಯ ಕ್ಷಿಪಣಿ (MRSAM) ಅನ್ನು ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್ ಸಹಯೋಗದೊಂದಿಗೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಅಭಿವೃದ್ಧಿಪಡಿಸಿದೆ.
* ಆಗಸ್ಟ್ 2019 ರಲ್ಲಿ ಭಾರತಕ್ಕೆ ಈ ಕ್ಷಿಪಣಿಯನ್ನು ಹಸ್ತಾಂತರಿಸಲಾಯಿತು, ಇದು ವೈಮಾನಿಕ ಬೆದರಿಕೆಗಳ ವಿರುದ್ಧ ಕ್ಷಿಪಣಿ ಭಾರತೀಯ ಸಶಸ್ತ್ರ ಪಡೆಗಳಿಗೆ ವಾಯು ರಕ್ಷಣಾ ಸಾಮರ್ಥ್ಯವನ್ನು ನೀಡುತ್ತದೆ.

# 18- 03- 2021

## NSGಮುಖ್ಯಸ್ಥರಾಗಿಕೊಡಗಿನಅಯ್ಯಪ್ಪಗಣಪತಿನೇಮಕ



* ಐಪಿಎಸ್ ಅಧಿಕಾರಿ ಕೊಡಗಿನ ಅಯ್ಯಪ್ಪ ಗಣಪತಿ ಅವರನ್ನು ರಾಷ್ಟ್ರೀಯ ಭದ್ರತಾ ದಳದ (NSG) ಮಹಾ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.
* ಈ ಮೊದಲು ಎಂ.ಎ. ಗಣಪತಿ ಅವರು ನಾಗರಿಕ ವಿಮಾನಯಾನದ ಭದ್ರತಾ ವಿಭಾಗ ಮಹಾ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.
* ಎಂ.ಎ. ಗಣಪತಿ ಅವರು 1986ನೇ ಸಾಲಿನ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದಾರೆ, ಇವರು 29 ಫೆಬ್ರವರಿ 2024ರಂದು ಸೇವೆಯಿಂದ ನಿವೃತ್ತಿಯಾಗಲಿದ್ದಾರೆ, ಹಾಗೂ ಇವರು 2024ರ ವರೆಗೆ NSGಯ ಮಹಾ ನಿರ್ದೇಶಕರಾಗಿ ಸೇವೆಯಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ.
* ಎಂ.ಎ.ಗಣಪತಿ ಅವರು 1999ರಲ್ಲಿ ಕೇಂದ್ರಿಯ ತನಿಖಾ ಸಂಸ್ಥೆ (CBI)ನಲ್ಲೂ ಸೇವೆ ಸಲ್ಲಿಸಿದ್ದಾರೆ, ಹಾಗೂ ಇವರ ಅತ್ಯುನ್ನತ ಸೇವೆ ಸಲ್ಲಿಸಿದಕ್ಕಾಗಿ ರಾಷ್ಟ್ರಪತಿಗಳ ವಿಶೇಷ ಸೇವಾ ಪದಕವನ್ನು ಪಡೆದು ಕೊಂಡಿದ್ದಾರೆ.

## ಭಾರತದಿಂದ 109 ಆಂಬ್ಯುಲೆನ್ಸ್‌ಗಳು ಬಾಂಗ್ಲಾದೇಶಕ್ಕೆ ಕೊಡುಗೆ



* ಭಾರತ ದೇಶವು ಬಾಂಗ್ಲಾದೇಶದ ಮೊದಲ ರಾಷ್ಟ್ರಪತಿಯಾಗಿದ್ದ ದಿವಂಗತ ಶೇಖ್ ಮುಜಿಬುರ್ ರಹಮಾನ್ ಅವರ ಜನ್ಮ ಶತಮಾನೋತ್ಸವದ ನೆನಪಿಗಾಗಿ ಒಟ್ಟು 109 ಆಂಬುಲೆನ್ಸ್‌ಗಳನ್ನು ಬಾಂಗ್ಲಾದೇಶಕ್ಕೆ ಕೊಡುಗೆಯಾಗಿ ನೀಡಲಿದೆ ಎಂದು ತಿಳಿದು ಬಂದಿದೆ.
* ವಿದೇಶಾಂಗ ಸಚಿವ ಅಕ್ ಅಬ್ದುಲ್ ಮೊಮೆನ್ ಅವರಿಗೆ, ಭಾರತೀಯ ಹೈಕಮಿಷನರ್ ಆಗಿರುವ ವಿಕ್ರಮ್ ದೋರೈಸ್ವಾಮಿ ಯವರು ಸಭೆಯಲ್ಲಿ ವಿಷಯ ತಿಳಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಪ್ರಕಟಣೆಯಲ್ಲಿ ನೀಡಿರುವ ಮಾಹಿತಿಯಿಂದ ತಿಳಿದುಬಂದಿದೆ.
*ಒಟ್ಟು109ಆಂಬುಲೆನ್ಸ್‌ಗಳನ್ನುಪ್ರಧಾನಿನರೇಂದ್ರಮೋದಿಯವರುರಹಮಾನ್ ಅವರ ಜನ್ಮ ಶತಮಾನೋತ್ಸವ ಮತ್ತು ಬಾಂಗ್ಲಾದೇಶದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳಲು ಪ್ರವಾಸ ಕೈಗೊಂಡಾಗ ಈ ಆಂಬುಲೆನ್ಸ್‌ಗಳನ್ನು ವಿತರಿಸಲಾಗುವದು ಎಂದು ಸಚಿವಾಲಯ ಮಾಹಿತಿಯನ್ನು ನೀಡಿದೆ.
* ಬಾಂಗ್ಲಾ ದೇಶ ಪ್ರಧಾನಿ ಶೇಖ್ ಹಸೀನಾ ಅವರ ಸ್ವಾಗತದ ಮೇರೆಗೆ ಪ್ರಧಾನಿ ಮೋದಿ ಅವರು ಮಾರ್ಚ್ 26 ಮತ್ತು 27 ರಂದು ಬಾಂಗ್ಲಾದೇಶಕ್ಕೆ ಭೇಟಿ ನೀಡಲಿದ್ದಾರೆ.
* ಪ್ರಧಾನಿ ಮೋದಿ ಈ ಬಾಂಗ್ಲಾ ಭೇಟಿಯುನ್ನು ಮುಜಿಬ್ ಬೊಶೋರ್ ಎಂಬ ಹೆಸರಿನಲ್ಲಿ ಆಚರಿಸಲಾಗುವದು ಎಂದು ತಿಳಿಸಲಾಗಿದೆ.

## ಬಿಜೆಪಿ ಸಂಸದ ರಾಮ್ ಸ್ವರೂಪ್ ಶರ್ಮಾ ನಿಧನ



* ಹಿಮಾಚಲ ಪ್ರದೇಶದ ಬಿಜೆಪಿ ಸಂಸದರಾಗಿರುವ ರಾಮ್ ಸ್ವರೂಪ್ ಶರ್ಮಾ ಅವರು ಇತ್ತೀಚಿಗೆ ನಿಧನರಾಗಿದ್ದು, ದೆಹಲಿ ಪೊಲೀಸರು ಮಾಹಿತಿಯ ನೀಡಿರುವ ಪ್ರಕಾರ ಶರ್ಮಾ ಅವರು ದೆಹಲಿಯ ತಮ್ಮ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಶರ್ಮಾ ರವರ ಸಾವಿಗೆ ಕಾರಣ ತಿಳಿದು ಬಂದಿಲ್ಲ.
* 1958ರಲ್ಲಿ ರಾಮ್ ಸ್ವರೂಪ್ ಶರ್ಮಾ'ರವರು ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಜನಿಸಿದ್ದರು.
* ಮೊದಲ ಬಾರಿ 2014ರಲ್ಲಿ ಸಂಸತ್‌ಗೆ ಆಯ್ಕೆಯಾಗಿದ್ದರು, ಮತ್ತು 2019ರಲ್ಲಿ ಎರಡನೆಯ ಬಾರಿ ಆಯ್ಕೆಯಾಗಿ ವಿದೇಶಾಂಗ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯಲ್ಲಿ ಕಾರ್ಯ ನಿರ್ವಹಿಸಿದ್ದರು.
* ಹಿಮಾಚಲ ಪ್ರದೇಶದ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

## ಅಮೆರಿಕದಿಂದ ಚೀನಾ ಮತ್ತು ಹಾಂಗ್‌ಕಾಂಗ್‌ನ 24 ಅಧಿಕಾರಿಗಳ ಮೇಲೆ ನಿರ್ಬಂಧ



* ಅಮೇರಿಕ ರಾಷ್ಟ್ರವು ಚೀನಾ ಮತ್ತು ಹಾಂಗ್‌ಕಾಂಗ್‌ನ 24 ಅಧಿಕಾರಿಗಳ ಮೇಲೆ ನಿರ್ಬಂಧ ಹೇರಿದೆ.
* ಚೀನಾ ಹಾಗೂ ಹಾಂಗ್‌ಕಾಂಗ್ ರಾಷ್ಟ್ರಗಳು ರಾಷ್ಟ್ರೀಯ ಭದ್ರತಾ ಕಾಯ್ದೆ ಮೂಲಕ ಪ್ರಜಾಪ್ರಭುತ್ವ ಪರ ಹೋರಾಟ ಹತ್ತಿಕ್ಕುವುದನ್ನು ಸತತವಾಗಿ ಮುಂದುವರಿಸಿರುವ ಕಾರಣದಿಂದಾಗಿ ಈ ರಾಷ್ಟ್ರಗಳಿಗೆ ಸೇರಿದ 24 ಅಧಿಕಾರಿಗಳ ಮೇಲೆ ಅಮೆರಿಕ ನಿರ್ಬಂಧ ಹೇರಿದೆ.
* 24 ಪ್ರಮುಖ ಅಧಿಕಾರಿಗಳ ಮೇಲೆ ನಿರ್ಬಂಧವನ್ನು,ಹಾಂಗ್‌ಕಾಂಗ್ ಸ್ವಾಯತ್ತತೆ ಕಾಯ್ದೆ ಅಡಿಯಲ್ಲಿ ಹೇರಲಾಗಿದೆ ಎಂದು ಅಮೇರಿಕ ವಾಷಿಂಗ್ಟನ್‌ನಲ್ಲಿ ಮಾಹಿತಿಯನ್ನು ನೀಡಿದೆ.
* ಈ ಮೊದಲು 1997ರಲ್ಲಿ ಬ್ರಿಟನ್ ವಶದಲ್ಲಿದ್ದ ಹಾಂಗ್‌ಕಾಂಗ್'ನ್ನು ಚೀನಾಕ್ಕೆ ಹಸ್ತಾಂತರ ಮಾಡಲಾಯಿತು.
* ಹಾಂಗ್‌ಕಾಂಗ್‌ನಲ್ಲಿ ವಿವಾದಾತ್ಮಕ ರಾಷ್ಟ್ರೀಯ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸಿರುವ ಹಿನ್ನಲೆಯಿಂದ ಹಾಂಗ್‌ಕಾಂಗ್‌ನ ಚುನಾವಣಾ ವ್ಯವಸ್ಥೆ ದುರ್ಬಲಗೊಳ್ಳುತ್ತದೆ ಎಂದು ಪರಿಗಣಿಸಿ ಹಾಂಗ್‌ಕಾಂಗ್ ಸ್ವಾಯತ್ತತೆ ಕಾಯ್ದೆಅಡಿಯಲ್ಲಿ ನಿರ್ಬಂಧ ಹೇರಲಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಯಂಟೊನಿ ಬ್ಲಿಂಕೆನ್ ತಿಳಿಸಿದ್ದಾರೆ.

## ಅಂತರರಾಷ್ಟ್ರೀಯ ಸೌರ ಒಕ್ಕೂಟಕ್ಕೆ (ISA) ಸೇರುವ ಒಪ್ಪಂದಕ್ಕೆ ಸಹಿ ಹಾಕಿದ ಇಟಲಿ




* ಇಟಲಿ ಅಂತರರಾಷ್ಟ್ರೀಯ ಸೌರ ಒಕ್ಕೂಟಕ್ಕೆ ಸೇರಲು ಮಾರ್ಚ್ 17, 2021ರಂದು ಭಾರತದೊಂದಿಗೆ ಚೌಕಟ್ಟಿನ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ.
* 2021ರ ಜನವರಿ 8 ರಿಂದ ಜಾರಿಗೆ ತರಲಾದ ISAನ ಚೌಕಟ್ಟಿನ ಒಪ್ಪಂದಕ್ಕೆ ತಿದ್ದುಪಡಿ ಮಾಡಿದ ಬಳಿಕ ಇಟಲಿಯ ರಾಯಭಾರಿ ವಿನ್ಸೆಂಜೊ ಡಿ ಲುಕಾ ಈ ಒಪ್ಪಂದಕ್ಕೆ ಸಹಿ ಹಾಕಿದರು.
* ವಿಶ್ವಸಂಸ್ಥೆಯ ಎಲ್ಲ ಸದಸ್ಯರಿಗೆ ಸೌರ ಒಕ್ಕೂಟದಲ್ಲಿ ಸದಸ್ಯತ್ವವನ್ನು ನೀಡಲಾಗಿದೆ.
* ಮಾರ್ಚ್ 17, 2021 ರಂದು ಭಾರತದ ವಿದೇಶಾಂಗ ಕಾರ್ಯದರ್ಶಿ ಹರ್ಷ್ ವರ್ಧನ್ ಶಿಂಗ್ಲಾರವರು ಇಟಲಿಯ ರಾಯಭಾರಿ ವಿನ್ಸೆಂಜೊ ಡಿ ಲುಕಾ ಅವರನ್ನು ಭೇಟಿ ಮಾಡಿದ್ದರು. ಪರಿಣಾಮ ಇಟಲಿಯನ್ನು ಅಂತರರಾಷ್ಟ್ರೀಯ ಸೌರ ಒಕ್ಕೂಟಕ್ಕೆ ಪ್ರವೇಶಿಸುವುದನ್ನು ಭಾರತೀಯ ಕಾರ್ಯದರ್ಶಿ ಸ್ವಾಗತಿಸಿದರು.
* ಅಂತರರಾಷ್ಟ್ರೀಯ ಸೌರ ಒಕ್ಕೂಟ(ISA) ಪ್ರಸ್ತುತ 121 ದೇಶಗಳನ್ನು ಒಳಗೊಂಡ ಒಪ್ಪಂದದ ಅಂತರ್ ಸರ್ಕಾರಿ ಮೈತ್ರಿಕೂಟವಾಗಿದೆ, ಹಾಗೂ ಮೈತ್ರಿಯ ಸ್ಥಾಪನೆಯನ್ನು ಭಾರತ ಪ್ರಾರಂಭಿಸಿತು.
* ಪಳೆಯುಳಿಕೆ ಇಂಧನಗಳಮೇಲಿನಅವಲಂಬನೆಯನ್ನುಕಡಿಮೆಮಾಡಲುಸೌರಶಕ್ತಿಯ ಸಮರ್ಥ ಬಳಕೆಗಾಗಿ ಕೆಲಸ ಮಾಡುವ ಉದ್ದೇಶದಿಂದ ISA

ಕಾರ್ಯನಿರ್ವಹಿಸುತ್ತದೆ.

## ಟಿಬಿ ಪಾಲುದಾರಿಕೆ ಮಂಡಳಿಯನ್ನು ನಿಲ್ಲಿಸಿ' ಅಭಿಯಾನದ ಅಧ್ಯಕ್ಷರಾಗಿ ಡಾ.ಹರ್ಷ್ ವರ್ಧನ್ ನೇಮಕ



* ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ ಅವರನ್ನು 2021 ಮಾರ್ಚ್ 18, ರಂದು "ಟಿಬಿ ಪಾಲುದಾರಿಕೆ ಮಂಡಳಿಯನ್ನು ನಿಲ್ಲಿಸಿ" ಆಂದೋಲನದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.
* ಡಾ.ಹರ್ಷ್ ವರ್ಧನ್'ರವರು ಭಾರತದಿಂದ ಕ್ಷಯರೋಗವನ್ನು (TB) ನಿರ್ಮೂಲನೆ ಮಾಡುವ ಆಂದೋಲನಕ್ಕೆ ಅವರು ನೀಡಿದ ಅತ್ಯುತ್ತಮ ಕೊಡುಗೆಯನ್ನು ಗುರುತಿಸಿ ನೇಮಕ ಮಾಡಲಾಗಿದೆ.
* ಡಾ. ಹರ್ಷವರ್ಧನ್ ಅವರು ಸತತ ಮೂರು ವರ್ಷಗಳ ಅವಧಿಗೆ ಅಂದರೆ 2025 ಜುಲೈ 2021ವರೆಗೆ ಜಾಗತಿಕ ಸಂಸ್ಥೆಗೆ ಸೇವೆ ಸಲ್ಲಿಸಲಿದ್ದಾರೆ.
* ಈ ಅಂತರರಾಷ್ಟ್ರೀಯ ಸಂಸ್ಥೆಯ TB ವಿರುದ್ಧ ಹೋರಾಡಲು ರಾಷ್ಟ್ರಗಳನ್ನು ಸೇರಿಸುವ ಅಧಿಕಾರವನ್ನು ಹೊಂದಿದೆ.
* ಸ್ಟಾಪ್ ಟಿಬಿ (STOP TB) ಪಾಲುದಾರಿಕೆಯನ್ನು 2000 ರಲ್ಲಿ ಸ್ಥಾಪನೆ ಮಾಡಲಾಯಿತು.
* ಲಂಡನ್‌ನಲ್ಲಿ ನಡೆದ ಕ್ಷಯರೋಗ ಸಾಂಕ್ರಾಮಿಕ ಕುರಿತ ತಾತ್ಕಾಲಿಕ ಸಮಿತಿಯ ಮೊದಲ ಅಧಿವೇಶನದ ಸಭೆಯ 1998 ರಲ್ಲಿ ನಡೆಯಿತು, ಇದಾದ ನಂತರ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.
* ಭಾರತವು 2025 ರ ಹೊತ್ತಿಗೆ ಟಿಬಿ(TB)ಯನ್ನು ನಿರ್ಮೂಲನೆ ಮಾಡಲು ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಡಾ. ಹರ್ಷ್ ವರ್ಧನ್ ರವರ ಬಗ್ಗೆ ಮಾಹಿತಿ :
* ಡಾ.ಹರ್ಷ್ ವರ್ಧನ್ ಅವರು ಕೇಂದ್ರದ ಈಗಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
* ಜನನ: 13 ಡಿಸೆಂಬರ್ 1954 ದೆಹಲಿ
* ಇವರ ಪೂರ್ಣ ಹೆಸರು: ಹರ್ಷವರ್ಧನ್ ಗೋಯೆಲ್
* ಪಕ್ಷ : ಭಾರತೀಯ ಜನತಾ ಪಕ್ಷ

## 19- 03- 2021

## ಆಧಾರ್ ಜೊತೆ `ವೋಟರ್ ಐಡಿ' ಲಿಂಕ್ ಕೇಂದ್ರ ಸರ್ಕಾರ ಚಿಂತನೆ




* ಕೇಂದ್ರ ಸರ್ಕಾರವು ಆಧಾರ್ ಕಾರ್ಡ್'ಗೆ ವೋಟರ್ ಐಡಿ ಜೋಡಣೆ ಮಾಡಲು ಚಿಂತನೆ ನಡೆಸಿದೆ ಎಂದು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಮಾಹಿತಿಯನ್ನು ನೀಡಿದ್ದಾರೆ.
* ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ಆಧಾರ್'ನೊಂದಿಗೆ ಲಿಂಕ್ ಮಾಡಲು ಉದ್ದೇಶಿಸಲಾಗಿದೆ, ಇದರಿಂದ ಒಬ್ಬ ವ್ಯಕ್ತಿ ಬೇರೆ ಬೇರೆ ಚುನಾವಣೆ ಸ್ಥಳಗಳಲ್ಲಿ ಮತ ಹಾಕುವದನ್ನು ತಡೆಗಟ್ಟಬಹುದುಎಂದು ತಿಳಿಸಿದ್ದಾರೆ.
* ಈ ಹಿಂದೆ ಮತದಾರರ ಪಟ್ಟಿಯನ್ನು ಪರಿಶೀಲಿಸಲು ಮತದಾರರ ಮಾಹಿತಿಯೊಂದಿಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡುವ ಚುನಾವಣಾ ಆಯೋಗದ ಯೋಜನೆಗೆ 2015ರ ಆಗಸ್ಟ್'ನಲ್ಲಿ, ಸುಪ್ರೀಂ ಕೋರ್ಟ್ ಬ್ರೇಕ್ ಹಾಕಿತ್ತು. ರವಿಶಂಕರ್ ಪ್ರಸಾದ್ ರವರ ಬಗ್ಗೆ ಮಾಹಿತಿ :
* ಜನನ: 30 ಆಗಸ್ಟ್ 1954 ಪಾಟ್ನಾ
* ರವಿಶಂಕರ್ ಪ್ರಸಾದ್ ಅವರು ಭಾರತೀಯ ವಕೀಲರಾಗಿದ್ದರು.
* ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ಖಾತೆಗಳನ್ನು ಹೊಂದಿರುವ ಪ್ರಸ್ತುತ ಕೇಂದ್ರ ಸಚಿವರಾಗಿದ್ದಾರೆ.
* ಭಾರತೀಯ ಜನತಾ ಪಕ್ಷದ ಸದಸ್ಯ ಪ್ರಸಾದ್ ಅವರು ಪಾಟ್ನಾ ಸಾಹಿಬ್ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ.
* ಪಕ್ಷ: ಭಾರತೀಯ ಜನತಾ ಪಕ್ಷ
* ಕಚೇರಿ: 2000 ರಿಂದ ರಾಜ್ಯಸಭಾ ಸದಸ್ಯ

## 120 ವರ್ಷ ಹಳೆ ಕಾಯಿದೆ ಸರಿಪಡಿಸಿದ ರಾಜಸ್ಥಾನ ಸರ್ಕಾರ



* ರಾಜಸ್ಥಾನ ಸರ್ಕಾರವು 120 ವರ್ಷ ಹಳೆಯ ಕಾಯಿದೆಯನ್ನುತಿದ್ದುಪಡಿ ಮಾಡಿದೆ.
* ಈ ಕಾಯಿದೆ ಅನ್ವಯ ಹಿಂದುಳಿದ ವರ್ಗಗಳಿಗೆ ಸೇರಿದ ಖೈದಿಗಳನ್ನು ಅಡುಗೆ ಮಾಡಲು ಅವಕಾಶ ನೀಡದ ಕಾಯಿದೆಯಾಗಿತ್ತು.
* ಈ ಕಾಯಿದೆಯನ್ನು ಬ್ರಿಟಿಷ್ ರಾಜ್ ಕಾಲದಲ್ಲಿ ಜಾರಿಗೆ ತರಲಾಗಿತ್ತು, ಇದರಿಂದ ಜೈಲುಗಳಲ್ಲಿರುವ ಖೈದಿಗಳಿಗೆ ಜಾತಿ ಆಧಾರದ ಮೇಲೆ ಕೆಲಸ ಹಂಚುವ ವಿಚಾರದಲ್ಲಿ ತಾರತಮ್ಯ ಮಾಡಲಾಗುತ್ತಿತ್ತು, ಇದೀಗ ರಾಜಸ್ಥಾನ ಸರ್ಕಾರವು ಕಾಯಿದೆಯನ್ನು ಸರಿಪಡಿಸಿದೆ.
* ಪ್ರಸ್ತುತ ರಾಜಸ್ಥಾನ ಕಾರಾಗೃಹಗಳ ಡಿಜಿ ಯಾಗಿರುವ ರಾಜೀವ್ ದಸೋತ್'ರವರು ಈ ಕಾಯಿದೆ ತಿದ್ದುಪಡಿ ತರುವಲ್ಲಿ ಯಶಸ್ವಿಯಾಗಿದ್ದಾರೆ.
* 1894ರಲ್ಲಿ ಈ ಕಾರಾಗೃಹ ಕಾಯಿದೆ ತರಲಾಗಿತ್ತು ಮತ್ತು ಇದು ರಾಜಸ್ಥಾನ ಕಾರಾಗೃಹಗಳ ನಿಯಮ, 1951ರ ಅಡಿಯಲ್ಲಿ ಯಥಾಸ್ಥಿತಿಯಲ್ಲಿ ಸಾಗುತಿತ್ತು.
* ಕೇವಲ 20 ದಿನಗಳಲ್ಲಿ ಕಾಯಿದೆ ತಿದ್ದುಪಡಿಯನ್ನು ರಾಜಸ್ಥಾನ ಸಿಎಂ ಅಶೋಕ್ ಗೆಹ್ಲೋಟ್'ರವರು ಮಾಡಿದ್ದಾರೆ ಎಂದು ರಾಜೀವ್ ದಸೋತ್'ರವರು ತಿಳಿಸಿದರು. ರಾಜಸ್ಥಾನ ರಾಜ್ಯದ ಬಗ್ಗೆ ಮಾಹಿತಿ :
* ರಾಜಸ್ಥಾನವು ಉತ್ತರ ಭಾರತದ ರಾಜ್ಯ ವಾಗಿದೆ.
* ರಾಜಸ್ಥಾನದ ಒಟ್ಟು ವಿಸ್ತೀರ್ಣ 342,239 ಚದರ ಕಿಲೋಮೀಟರ್ ಅಥವಾ ಭಾರತದ ಒಟ್ಟು ಭೌಗೋಳಿಕ ಪ್ರದೇಶದ ಶೇಕಡಾ 10.4 ರಷ್ಟಿದೆ.
*ಭಾರತದ ಅತಿದೊಡ್ಡ ರಾಜ್ಯ ಮತ್ತು ಜನಸಂಖ್ಯೆಯ ಪ್ರಕಾರ ಏಳನೇ ಅತಿ ದೊಡ್ಡ ರಾಜ್ಯವಾಗಿದೆ.
* ರಾಜಧಾನಿ : ಜೈಪುರ
* ರಾಜ್ಯಪಾಲರು : ಕಲ್ರಾಜ್ ಮಿಶ್ರಾ
* ಜನಸಂಖ್ಯೆ : 6.89 ಕೋಟಿ 2012ರ ಪ್ರಕಾರ

## ಶೀಘ್ರದಲ್ಲೇ ರಾಜ್ಯದಲ್ಲಿ ಸರಕಾರಿ ಆಭರಣ ಮಳಿಗೆ ಆರಂಭ



* ಕರ್ನಾಟಕ ರಾಜ್ಯವು ದೇಶದಲ್ಲೇ ಚಿನ್ನ ಉತ್ಪಾದಿಸುವ ಏಕೈಕ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.
* ಕರ್ನಾಟಕ ಸರ್ಕಾರವು ಸರಕಾರಿ ಒಡೆತನದ ಆಭರಣ ಮಳಿಗೆಗಳನ್ನೂ ಖಾಸಗಿ ಕಂಪೆನಿಗಳ ಸಹಯೋಗದೊಂದಿಗೆ ತೆರೆಯಲು ನಿರ್ಧರಿಸಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ನಿರಾಣಿ ಮಾಹಿತಿಯನ್ನು ನೀಡಿದ್ದಾರೆ.
* ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಸರಕಾರಿ ಒಡೆತನದ ಆಭರಣಗಳ ಮಳಿಗೆಗಳು ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗಲಿವೆ ಎಂದು ತಿಳಿಸಿದ್ದಾರೆ.

## ತಾಂಜೇನಿಯಾ ಅಧ್ಯಕ್ಷ ಜಾನ್ ಮಗುಫುಲಿ ನಿಧನ



* ಬುಲ್ಡೋಜರ್ ಎಂದೇ ಪ್ರಖ್ಯಾತಿ ಪಡೆದಿರುವ ತಾಂಜೇನಿಯಾ ಅಧ್ಯಕ್ಷ ಜಾನ್ ಮಗುಫುಲಿ ವಿಧಿವಶರಾಗಿದ್ದಾರೆ.
* ರಸ್ತೆ ನಿರ್ಮಾಣದ ಕಾರ್ಯಗಳಲ್ಲಿ ಇವರ ನಾಯಕತ್ವದ ಶೈಲಿಯು ತಾಂಜೇನಿಯಾ ಜನರನ್ನು ಆಕರ್ಷಿಸಿತ್ತು, ಇದೆ ಕಾರಣಕ್ಕೆ ಇವರನ್ನು ಬುಲ್ಡೋಜರ್ ಎಂದು ಕರೆಯಲಾಗುತ್ತಿತ್ತು.
* ಜಾನ್ ಪೊಂಬೆ ಜೋಸೆಫ್ ಮಾಗುಫುಲಿ ಟಾಂಜೇನಿಯಾದ ರಾಜಕಾರಣಿ ಇವರು 2015 ರಿಂದ 2021 ರಲ್ಲಿ ನಿಧನ ಹೊಂದುವವರೆಗೂ ಟಾಂಜಾನಿಯಾದ 5ನೇ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.
* 2000 ರಿಂದ 2005 ಮತ್ತು 2010 ರಿಂದ 2015 ರವರೆಗೆ ಸಾರಿಗೆ ಮತ್ತು ಸಂವಹನ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ.
* 2019 ರಿಂದ 2020 ರವರೆಗೆ ದಕ್ಷಿಣ ಆಫ್ರಿಕಾದ ಅಭಿವೃದ್ಧಿಯ ಅಧ್ಯಕ್ಷರಾಗಿದ್ದರು.
* ಇದೀಗ ತಾಂಜೇನಿಯಾದ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಸಮೀಹ ಹಸನ್ ನೇಮಕಗೊಂಡಿದ್ದಾರೆ. ತಾಂಜೇನಿಯಾ ದೇಶದ ಬಗ್ಗೆ :
* ತಾಂಜೇನಿಯಾ ಪೂರ್ವ ಆಫ್ರಿಕಾದ ದೇಶವಾಗಿದ್ದು, ವಿಶಾಲವಾದ ಅರಣ್ಯ ಪ್ರದೇಶಗಳಿಗೆ ಹೆಸರುವಾಸಿಯಾಗಿದೆ.
* ಆಫ್ರಿಕಾದ ಅತ್ಯುನ್ನತ ಪರ್ವತದ ನೆಲೆಯಾದ ಕಿಲಿಮಂಜಾರೊ ರಾಷ್ಟ್ರೀಯ ಉದ್ಯಾನವನಗಳಿಂದ ಕೂಡಿದ ಸಫಾರಿ ಮೆಕ್ಕಾದ ಸೆರೆಂಗೆಟಿ ರಾಷ್ಟ್ರೀಯ ಉದ್ಯಾನದ ಬಯಲು ಪ್ರದೇಶಗಳು ಸೇರಿವೆ.
* ಪ್ರಸ್ತುತ ಅಧ್ಯಕ್ಷ: ಸಮಿಯಾ ಸುಲುಹು ಟ್ರೆಂಡಿಂಗ್
* ರಾಜಧಾನಿ : ಡೋಡೋಮಾ
* ಡಯಲಿಂಗ್ ಕೋಡ್ :+255
* ಕರೆನ್ಸಿ : ಟಾಂಜೇನಿಯಾದ ಶಿಲ್ಲಿಂಗ್
* ರಾಷ್ಟ್ರೀಯ ಭಾಷೆ : ಸ್ವಹಿಲಿ

## GPS ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಒಂದು ವರ್ಷದೊಳಗೆ ಜಾರಿ



* ಪ್ರಸ್ತುತ ದೇಶಾದ್ಯಂತ ಈಗಿರುವ ಎಲ್ಲಾ ಟೋಲ್ ಬೂತ್ ಗಳನ್ನು ತೆಗೆದು ಜಿಪಿಎಸ್(GPS) ಆಧಾರಿತ ಟೋಲ್ ಸಂಗ್ರಹದ ವ್ಯವಸ್ಥೆಯನ್ನು ಒಂದು ವರ್ಷದೊಳಗೆ ಜಾರಿಗೆ ತರಲಾಗುವದು ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಲೋಕಸಭೆಗೆ ಮಾಹಿತಿಯನ್ನು ನೀಡಿದರು.
* ಈ GPS ಇಮೇಜಿಂಗ್ ವ್ಯವಸ್ಥೆಯಿಂದ ಟೋಲ್ ಶುಲ್ಕ ವಾಹನ ಸವಾರರ ಬ್ಯಾಂಕ್ ಖಾತೆಯಿಂದ ನೇರವಾಗಿ ಕಡಿತವಾಗಲಿದೆ ಎಂದು ಸಚಿವ ಗಡ್ಕರಿ ಮಾಹಿತಿ ನೀಡಿದರು.
* ಜಿಪಿಎಸ್ ವ್ಯವಸ್ಥೆಯನ್ನು ರಷ್ಯಾ ದೇಶದ ನೆರವಿನೊಂದಿಗೆ ಪ್ರಾರಂಭ ಮಾಡಲಾಗುತ್ತದೆ ಎಂದು ಇದೆ ವೇಳೆ ತಿಳಿಸಿದರು.

## ಭಾರತದ 48 ರಾಜಕೀಯ ಪಕ್ಷಗಳ ಒಟ್ಟು ಆಸ್ತಿ ಮೌಲ್ಯ




* ಚುನಾವಣಾ ಆಯೋಗಕ್ಕೆ 7 ರಾಷ್ಟ್ರೀಯ ಹಾಗೂ 41 ಪ್ರಾದೇಶಿಕ ಪಕ್ಷಗಳು 2018 19 ಆರ್ಥಿಕ ವರ್ಷದಲ್ಲಿ ಸಲ್ಲಿಸಿರುವ ಮಾಹಿತಿ ಪ್ರಕಾರ 7372.96 ಕೋಟಿ ರೂ. ಆಸ್ತಿ ಹೊಂದಿರುವದಾಗಿ ತಿಳಿದು ಬಂದಿದೆ.
* 7 ರಾಷ್ಟ್ರೀಯ ಪಕ್ಷಗಳು 5349.25 ಕೋಟಿ ರೂ. ಆಸ್ತಿಯನ್ನು ಹೊಂದಿವೆ.
* 41 ಪ್ರಾದೇಶಿಕ ಪಕ್ಷಗಳು 2023.71 ಕೋಟಿ ರೂ. ಆಸ್ತಿಯನ್ನು ಹೊಂದಿವೆ.
* ಪ್ರಸ್ತುತ 7 ರಾಷ್ಟ್ರೀಯ ಪಕ್ಷಗಳಲ್ಲಿ ಅತಿ ಹೆಚ್ಚು ಆಸ್ತಿ ಹೊಂದಿರುವ ಪಕ್ಷಗಳು.
* ಬಿಜೆಪಿ ಸರಿ ಸುಮಾರು 2904.18 ಕೋಟಿರೂ.ಆಸ್ತಿ ಹೊಂದಿದೆ, ಕಾಂಗ್ರೆಸ್ ಪಕ್ಷವು 928.84 ಕೋಟಿ ರೂ.ಆಸ್ತಿ ಹೊಂದಿದೆ, ಬಿಎಸ್‌ಪಿ(BSP) 738 ಕೋಟಿ ರೂ ಆಸ್ತಿ ಹೊಂದಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ADR) ವರದಿಯಲ್ಲಿ ತಿಳಿದು ಬಂದಿದೆ.
* ಪ್ರಾದೇಶಿಕ ಪಕ್ಷಗಳಲ್ಲಿ ಒಂದಾದ ಸಮಾಜವಾದಿ ಪಕ್ಷವು ಅತಿ ಹೆಚ್ಚು 572.21 ಕೋಟಿ ರೂ.ಆಸ್ತಿ ಹೊಂದಿದೆ.
*2018 19ನೇ ಆರ್ಥಿಕ ಸಾಲಿನಲ್ಲಿ ಸಾಲವನ್ನೂ ಹೊಂದಿರುವ ರಾಜಕೀಯ ಪಕ್ಷಗಳು.
* ಕಾಂಗ್ರೆಸ್ ಪಕ್ಷದ ಸಾಲ 78.415 ಕೋಟಿ ರೂ.
* ಬಿಜೆಪಿ ಪಕ್ಷದ ಸಾಲ 37.463 ಕೋಟಿ ರೂ.
* ಕರ್ನಾಟಕದ ಜೆಡಿಎಸ್ 18.01 ಕೋಟಿ ರೂ. ಸಾಲ ಹೊಂದಿದೆ.

## ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಕಂಬಳಕ್ಕೆ 1 ಕೋಟಿ ರೂ. ಸಹಾಯಧನ ಬಿಡುಗಡೆ



* ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಕಂಬಳಗಳಿಗೆ ಸಹಾಯಧನ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.
* ಕರ್ನಾಟಕ ಸರ್ಕಾರವು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಸುವ ಕರಾವಳಿಯ ಜಾನಪದ ಕ್ರೀಡೆಯಾದ ಕಂಬಳವನ್ನು ಪ್ರೋತ್ಸಾಹಿಸಲು 1 ಕೋಟಿ ರೂ. ಸಹಾಯಧನ ನೀಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.
* ಪ್ರವಾಸೋದ್ಯಮ ಸಚಿವರಾದ ಸಿ.ಪಿ.ಯೋಗೇಶ್ವರ ಈ ಸಹಾಯಧನ ಘೋಷಣೆ ಮಾಡಿದ್ದಾರೆ, ಇದೀಗ ಕರ್ನಾಟಕ ರಾಜ್ಯಸರ್ಕಾರ ಸಹಾಯಧನ ಬಿಡುಗಡೆ ಆದೇಶವನ್ನು ಹೊರಡಿಸಿದೆ.
* ಸರ್ಕಾರವು ಪ್ರತಿ ಕಂಬಳಕ್ಕೆ 5 ಲಕ್ಷ ರೂ.ಗಳನ್ನು ಸಹಾಯಧನ ನೀಡಲು ಆದೇಶ ಹೊರಡಿಸಿದೆ.
* ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ಕಂಬಳಗಳಿಗೆ 50 ಲಕ್ಷ ರೂ. ಹಾಗೂ ಉಡುಪಿ ಜಿಲ್ಲೆಯಲ್ಲಿ 10 ಕಂಬಳಗಳಿಗೆ 50 ಲಕ್ಷ ರೂಗಳನ್ನು ನೀಡಲಾಗುವದು ಎಂದು ತಿಳಿಸಿದೆ.

## 3ವರ್ಷಗಳಲ್ಲಿ7ಮೆಗಾಜವಳಿಪಾರ್ಕ್‌ಸ್ಥಾಪನೆ:ಕೇಂದ್ರಸಚಿವೆ ಸ್ಮೃತಿ ಇರಾನಿ



* ಕೇಂದ್ರ ಜವಳಿ ಸಚಿವೆ ಸ್ಮೃತಿ ಇರಾನಿ ಮುಂದಿನ 3 ವರ್ಷಗಳಲ್ಲಿ ಒಟ್ಟು 7 ಮೆಗಾ ಜವಳಿ ಪಾರ್ಕ್ ಸ್ಥಾಪಿಸಲಾಗುವುದು ಎಂದು ರಾಜ್ಯಸಭೆಗೆ ತಿಳಿಸಿದ್ದಾರೆ.
* ಈ ಜವಳಿ ಪಾರ್ಕ್ ಸ್ಥಾಪನೆಯಿಂದಾಗಿ ಬೃಹತ್ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಸಲು ಸಹಾಯಕಾರಿಯಾಗಲಿವೆ.
* 2021 22ರ ಕೇಂದ್ರ ಬಜೆಟ್'ನಲ್ಲಿ ಘೋಷಣೆ ಮಾಡಿರುವಂತೆ, ದೇಶೀಯ ಉತ್ಪಾದನೆಯಲ್ಲಿ ಜವಳಿ ಕ್ಷೇತ್ರವೂ ಕ್ರಮೇಣ ಪ್ರಗತಿಯಾಗಲಿದೆ ಹಾಗೂ ಎಂಎಂಎಫ್ ಮತ್ತು ತಾಂತ್ರಿಕ ಜವಳಿ ಕ್ಷೇತ್ರವನ್ನು ಒಳಗೊಂಡ ಐದು ವರ್ಷಗಳ ಅವಧಿಯ 10.683 ಕೋಟಿ ರೂ.ಗಳ ಉತ್ಪಾದನೇ ಸೃಷ್ಟಿಸಲಿದೆ ಎಂದು ಲಿಖಿತ ಉತ್ತರದಲ್ಲಿ ರಾಜ್ಯಸಭೆಗೆ ಮಾಹಿತಿಯನ್ನು ನೀಡಿದ್ದಾರೆ.

# 20- 03- 2021

## ಮಾರ್ಚ್ 20 : ವಿಶ್ವ ಗುಬ್ಬಿ ದಿನ



* ಪ್ರತಿ ವರ್ಷ ಮಾರ್ಚ್ 20ರಂದು ವಿಶ್ವ ಗುಬ್ಬಿ ದಿನ ಆಚರಣೆ ಮಾಡಲಾಗುತ್ತಿದೆ.
* 2010ರಿಂದ ಮಾರ್ಚ್ 20ರಂದು ವಿಶ್ವ ಗುಬ್ಬಿ ದಿನವನ್ನು ಆಚರಿಸಲು ಪ್ರಾರಂಭಿಸಿದೆ.
* ಜೀವ ವೈವಿಧ್ಯಗಳ ಸಹಜ ಪರಿಸರವನ್ನು ಕಾಪಾಡುವ ಅಗತ್ಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವನ್ನು ಮೂಡಸುವುದು ಈ ದಿನಾಚರಣೆ ಉದ್ದೇಶವಾಗಿದೆ.

## ಕೇಂದ್ರ ಸರ್ಕಾರದಿಂದ ದೇಸಿ ಮೊಬೈಲ್ ಸೇವಾ ಆಪ್ ರಿಲೀಸ್

* ಕೇಂದ್ರ ಸರ್ಕಾರವು ಗೂಗಲ್'ಗೆ ಪರ್ಯಾಯವಾಗಿ ದೇಶಿ ಮೊಬೈಲ್ ಸೇವಾ ಆಪ್ ಸ್ಟೋರ್ ಆಪ್ ಬಿಡುಗಡೆ ಮಾಡಿದೆ.
* ಕೇಂದ್ರ ಸರ್ಕಾರವು ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಮೊಬೈಲ್ ಸೇವಾ ಆಪ್ ಸ್ಟೋರ್ ಆಪ್ ಅನ್ನು ಬಿಡುಡಗೆ ಮಾಡಿದೆ, ಇದರಿಂದ ಗೂಗಲ್, ಆಪಲ್ ಮೊದಲಾದ ಕಂಪನಿಗಳಿಗೆ ಕೊಂಚ ಸಂಕಷ್ಟ ಎದುರಾಗಿದೆ ಎನ್ನಲಾಗಿದೆ.
* ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ರವಿಶಂಕರ ಪ್ರಸಾದ್'ರವರು ರಾಜ್ಯಸಭೆಯಲ್ಲಿ ಈ ನೂತನ ಮೊಬೈಲ್ ಸೇವಾ ಆಪ್ ಸ್ಟೋರ್ ಆಪ್'ನ ಬಳಕೆ ಮತ್ತು ಮಾಹಿತಿಯನ್ನು ನೀಡಿದರು.
* ಕೇಂದ್ರ ಸರ್ಕಾರದ ಈ ಆಪ್ ಬಳಕೆಯಿಂದ ಗೂಗಲ್, ಪ್ಲೇ ಸ್ಟೋರ್'ನ ಅವಲಂಬನೆಯನ್ನು ಕಡಿಮೆ ಮಾಡಬಹುದಾಗಿದೆ, ಮತ್ತು ಮೇಕ್ ಇನ್ ಇಂಡಿಯಾಗೆ ಉತ್ತೇಜನ ನೀಡಲಾಗುತ್ತಿದೆ ಎಂದು ತಿಳಿಸಿದರು.

## ವಿಶ್ವ ಸಂತೋಷದ ಸೂಚ್ಯಂಕ (world happiness index) ಪ್ರಕಟ



* ವಿಶ್ವಸಂಸ್ಥೆಯು 2021ರ ವಿಶ್ವ ಸಂತೋಷ ವರದಿಯನ್ನು ಪ್ರಕಟಿಸಿದೆ, ಈ ಪಟ್ಟಿಯಲ್ಲಿ ಒಟ್ಟು 149 ದೇಶಗಳು ಸ್ಥಾನ ಪಡೆದಿವೆ.
* ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರಗಳ ನೆಟ್ ವರ್ಕ್ ಅಡಿಯಲ್ಲಿ ವಿಶ್ವದ 149 ರಾಷ್ಟ್ರಗಳು ತಮ್ಮ ನಾಗರಿಕರು ತಾವು ಎಷ್ಟು ಸಂತೋಷವಾಗಿದ್ದರೆ ಎನ್ನುವ

ಪಟ್ಟಿಯನ್ನು ಬಿಡುಗಡೆ ಮಾಡಿದೆ.
* 2021ರ ವಿಶ್ವ ಸಂತೋಷ ವರದಿಯ ಪ್ರಕಾರ ಫಿನ್ಲ್ಯಾಂಡ್ ಜಗತ್ತಿನ ಅತ್ಯಂತ ಸಂತೋಷದಿಂದ ತುಂಬಿರುವ ದೇಶ ಎಂಬ ಹೆಗ್ಗಳಿಕೆ ಮತ್ತು ಈ ದೇಶ ಪ್ರಥಮ ಸ್ಥಾನ ಪಡೆದಿದೆ.
* ವಿಶ್ವ ಸಂತೋಷ 2021ರ ವರದಿಯ ಪ್ರಕಾರ ಭಾರತ 139ನೇ ಸ್ಥಾನ ಪಡೆದಿದೆ, ಈ ಹಿಂದೆ ಭಾರತವು 2019ರಲ್ಲಿ ಭಾರತ 140ನೇ ಸ್ಥಾನ ಪಡೆದುಕೊಂಡಿತ್ತು.
* ಚೀನಾ 84ನೇ ಸ್ಥಾನ ಮತ್ತು ಪಾಕಿಸ್ತಾನ 105ನೇ, ಬಾಂಗ್ಲಾದೇಶ 101ನೇ ಸ್ಥಾನ ಪಡೆದುಕೊಂಡಿವೆ.
* ಅತ್ಯಂತ ದುಃಖಿತವಾಗಿರುವ ದೇಶ ಎಂದರೆ ಅದುವೇ ಆಫ್ಘಾನಿಸ್ತಾನ, ಇದು ಯುದ್ಧಪೀಡಿತ ದೇಶವಾಗಿದೆ ಎಂದು ವರದಿ ಮಾಹಿತಿಯನ್ನು ನೀಡಿದೆ.

## ಭಾರತೀಯ ಸೇನೆಗೆ ಸೇರಲಿದೆ ಮಿಲಾನ್ 2ಟಿ




* ಭಾರತೀಯ ರಕ್ಷಣಾ ಇಲಾಖೆಯು ಸೇನೆಯ ದಾಳಿ ಸಾಮರ್ಥ್ಯವನ್ನು ಹೆಚ್ಚಿಸಲು, ಭಾರತ್ ಡೈನಾಮಿಕ್ಸ್‌ಲಿ.(BDL)ಜೊತೆಗೆ4,960ಮಿಲಾನ್ 2ಟಿಆಯಂಟಿ ಟ್ಯಾಂಕ್‌ಗೈಡೆಡ್ ಕ್ಷಿಪಣಿ ಗಳನ್ನು ಖರೀದಿಸುವ 1,188 ಕೋಟಿ ರೂ.ಗಳ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದೆ.
* ಭಾರತ್ ಡೈನಾಮಿಕ್ಸ್‌ಲಿ.ಮುಂದಿನ3ವರ್ಷಗಳಲ್ಲಿ ಭೂ ಸೇನೆಗೆಮಿಲಾನ್ 2ಟಿಕ್ಷಿಪಣಿಗಳನ್ನು ನೀಡಲಿದೆ.
* ಫ್ರಾನ್ಸ್‌ನ MBDA ಮಿಸೈಲ್ ಸಿಸ್ಟಂನಿಂದ ಅನುಮತಿಯನ್ನು ಪಡೆದು ಮಿಲಾನ್ 2ಟಿಯನ್ನು ಭಾರತದಲ್ಲಿ ಪರೀಕ್ಷೆ ಮಾಡಲಾಗಿದೆ.
* ಈ ಮಿಲಾನ್ 2ಟಿ ಕ್ಷಿಪಣಿಯು ವೈರಿ ಟ್ಯಾಂಕರ್‌ಗಳನ್ನು ದೂರದಿಂದಲೇ ನಾಶಗೊಳಿಸುವ ಶಕ್ತಿಯನ್ನು ಹೊಂದಿದೆ, ಈ ಕ್ಷಿಪಣಿಯು ಒಂದು ಪ್ರದೇಶ ದಿಂದ ಬೇರೊಂದು ಪ್ರದೇಶಕ್ಕೆ ಸುಲಭವಾಗಿ ಸಾಗಿಸಬಹುದಾಗಿದೆ.
* ಇದು ಪೋರ್ಟಬಲ್ ಕ್ಷಿಪಣಿ ಆಗಿದೆ, ಇದನ್ನು ಟ್ಯಾಂಕರ್ ಅಥವಾ ನೆಲದ ಮೇಲಿಂದ ಉಡಾಯಿಸಬಹುದು ಎಂದು ಭಾರತ್ ಡೈನಾಮಿಕ್ಸ್ ಲಿ. ತಿಳಿಸಿದೆ.

## ತಾಂಝಾನಿಯ ದೇಶದ ಮೊದಲ ಮಹಿಳಾ ಅಧ್ಯಕ್ಷರಾಗಿ ಸಮೀಹ ಸುಲುಹು ಹಸನ್ ಅಧಿಕಾರ ಸ್ವೀಕಾರ



* ತಾಂಝಾನಿಯ ದೇಶದ ಮೊದಲ ಮಹಿಳಾ ಅಧ್ಯಕ್ಷೆಯಾಗಿ 61 ವರ್ಷದ ಮುಸ್ಲಿಮ್ ಮಹಿಳೆ ಸಮೀಹ ಸುಲುಹು ಹಸನ್ ರವರು ಪ್ರಮಾಣ ವಚನ ಸ್ವೀಕಾರ ಮಾಡಿದರು.
* ಸಮೀಹ ಹಸನ್ ರವರು ಈ ಮೊದಲು ತಾಂಝಾನಿಯ ದೇಶದ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.
* ಇತ್ತೀಚಿಗೆ ನಿಧನರಾದ ಜಾನ್ ಮಗುಫುಲಿಯವರ 2ನೇ ಅಧಿಕಾರದ 5 ವರ್ಷದ ಅವಧಿ 2025ರವರೆಗೆ ಇರುತ್ತದೆ, ಇದನ್ನು ಸಮೀಹ ಹಸನ್ ಅಧಿಕಾರ ಪೂರ್ಣಗೊಳಿಸಲಿದ್ದಾರೆ. ಸಮೀಹ ಸುಲುಹು ಹಸನ್ ರವರ ಬಗ್ಗೆ ಮಾಹಿತಿ :
* ಸಮಿಯಾ ಸುಲುಹು ಹಸನ್ ಟಾಂಜಾನಿಯಾದ ರಾಜಕಾರಣಿಯಾಗಿದ್ದು, 2021ರ ಮಾರ್ಚ್ 19 ರಿಂದ ಟಾಂಜಾನಿಯಾದ ಆರನೇ ಅಧ್ಯಕ್ಷರಾಗಿದ್ದಾರೆ.
* ಎರಡು ದಿನಗಳ ಹಿಂದೆ ಹಿಂದಿನ ಅಧ್ಯಕ್ಷ ಜಾನ್ ಮಾಗುಫುಲಿ ಅವರ ನಿಧನದ ನಂತರ ಅಧಿಕಾರ ವಹಿಸಿಕೊಂಡಿದ್ದಾರೆ.
* ಇವರ ಶಿಕ್ಷಣವನ್ನು ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಕಲಿತಿದ್ದಾರೆ.
* ಜನನ : 27 ಜನವರಿ 1960 (ವಯಸ್ಸು 61 ವರ್ಷ), ಸುಲ್ತಾನರಜಾಂಜಿಬಾರ್

## ಕೇಂದ್ರ ಸರ್ಕಾರದ ಇ ಸಂಜೀವಿನಿ ಸರ್ವೀಸ್




* ಕೇಂದ್ರ ಸರ್ಕಾರ ಇ ಸಂಜೀವಿನಿ ಸೇವೆಗಳನ್ನು ಜಾರಿಗೆ ತಂದಿದೆ.
* ಇ ಸಂಜೀವಿನಿ ಸರ್ವೀಸ್ ನಿಂದ ಕೊರೋನಾ ಸಂದರ್ಭದಲ್ಲಿ ಆಸ್ಪತ್ರೆಗೆ ತೆರಳಲು ಸಾಧ್ಯವಾಗದ ಜನರಿಗೆ ವೈದ್ಯರ ಸಲಹೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಇ ಸಂಜೀವಿನಿ ಸರ್ವಿಸ್ ಜಾರಿಗೆ ತರಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.
* ಇ ಸಂಜೀವಿನಿ ಸರ್ವಿಸ್ ಮೂಲಕ ಜನರು ಮನೆಯಲ್ಲಿಯೆ ಕುಳಿತು ತಮ್ಮ ಅಂತರ್ಜಾಲ ಸಂಪರ್ಕವನ್ನು ಬಳಸಿಕೊಂಡು ಕಾಯಿಲೆಗಳಿಗೆ ವೈದ್ಯಕೀಯ ಸಲಹೆಗಳನ್ನು ಪಡೆಯಬಹುದಾಗಿದೆ.
* ಇ ಸಂಜೀವಿನಿ ಸರ್ವಿಸ್ ಎನ್ನುವದು ಒಂದು ಮೊಬೈಲ್ ಆಪ್ ಆಗಿದೆ ಇಅದನ್ನು ಸಾಮಾನ್ಯ ಜನರು ಈ ಆಪ್ ಡೌನ್ಲೋಡ್ ಮಾಡಿಕೊಂಡು ಬಳಸಬಹುದಾಗಿದೆ.

## ಜಗತ್ತಿನಲ್ಲೇ ಅತೀ ಹೆಚ್ಚು ಅಪಾಯಕಾರಿ ರಸ್ತೆಗಳನ್ನು ಹೊಂದಿರುವ ರಾಷ್ಟ್ರಗಳು



* ಅಂತರರಾಷ್ಟ್ರೀಯ ಚಾಲನಾ ಶಿಕ್ಷಣ ಕಂಪನಿ ಝುಟೊಬಿ, ಜಗತ್ತಿನಲ್ಲೇ ಅತ್ಯಂತ ಹೆಚ್ಚು ಅಪಾಯಕಾರಿ ರಸ್ತೆಗಳನ್ನು ಹೊಂದಿರುವ 56 ರಾಷ್ಟ್ರಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.
* ದಕ್ಷಿಣ ಆಫ್ರಿಕಾ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಅಪಾಯಕಾರಿ ರಸ್ತೆಗಳನ್ನು ಹೊಂದಿರುವ ರಾಷ್ಟ್ರವಾಗಿ ಮೊದಲ ಸ್ಥಾನದಲ್ಲಿದೆ.
* ಥಾಯ್ಲೆಂಡ್ ದೇಶವು ಅತೀ ಹೆಚ್ಚು ಅಪಾಯಕಾರಿ ರಸ್ತೆಗಳನ್ನು ಒಳಗೊಂಡು 2ನೇ ಸ್ಥಾನ ಹಾಗು ಅಮೆರಿಕ ದೇಶವು 3ನೇ ಸ್ಥಾನ ಪಡೆದಿದೆ.
*ಅಪಾಯಕಾರಿ ರಸ್ತೆಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ಭಾರತವು 4ನೇ ಸ್ಥಾನ ಪಡೆದಿದೆ. ಜಗತ್ತಿನಲ್ಲೇ ಸುರಕ್ಷಿತ ಹಾಗೂ ಉತ್ತಮ ರಸ್ತೆಗಳನ್ನು ಹೊಂದಿರುವ ರಾಷ್ಟ್ರಗಳು:
* ನಾರ್ವೆ ದೇಶವು ಸುರಕ್ಷಿತ ಹಾಗೂ ಉತ್ತಮ ರಸ್ತೆಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ಮೊದಲನೇ ಸ್ಥಾನ ಪಡೆದಿದೆ.

* ಜಪಾನ್ ದೇಶವು 2ನೇ ಸ್ಥಾನ, ಸ್ವೀಡನ್ 3ನೇ ಸ್ಥಾನ ಪಡೆದುಕೊಂಡಿವೆ, ಎಂದು ಅಂತರರಾಷ್ಟ್ರೀಯ ಚಾಲನಾ ಶಿಕ್ಷಣ ಕಂಪನಿ ಝುಟೊಬಿ ನೀಡಿರುವ ವರದಿ ಪ್ರಕಾರ ತಿಳಿದು ಬಂದಿದೆ.

## ಪ್ರಧಾನಿ ನರೇಂದ್ರ ಮೋದಿ ಭೇಟಿಯಾದ ಅಮೇರಿಕ ರಕ್ಷಣಾ ಕಾರ್ಯದರ್ಶಿ



* ಇತ್ತೀಚಿಗೆ ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಅಮೆರಿಕ ರಕ್ಷಣಾ ಕಾರ್ಯದರ್ಶಿಯಾಗಿರುವ ಲಾಯ್ಡ್ ಜೇಮ್ಸ್ ಆಸ್ಟಿನ್ ರವರು ಭೇಟಿ ಮಾಡಿದರು.
* ಭಾರತ ಹಾಗೂ ಅಮೆರಿಕ ಈ ಎರಡು ರಾಷ್ಟ್ರ ಪ್ರಜಾಪ್ರಭುತ್ವ ಆಧಾರಿತ ದೇಶಗಳಾಗಿವೆ.
* ಎರಡು ದೇಶಗಳ ನಡುವಿನ ಆತ್ಮೀಯ ಸಂಬಂಧ ಹಾಗೂ ದ್ವಿಪಕ್ಷೀಯ ರಕ್ಷಣಾ ಸಂಬಂಧಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಅಮೆರಿಕ ಸರ್ಕಾರದ ಬದ್ಧವಾಗಿದೆ ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಹೇಳಿದರು.

# 22-03-2021

## ವಿಶ್ವ ಜಲ ದಿನಾಚರಣೆ: ಪ್ರಧಾನಿ ಮೋದಿಯಿಂದ 'ಕ್ಯಾಚ್ ದಿ ರೇನ್' ಅಭಿಯಾನಕ್ಕೆ ಚಾಲನೆ




ಪ್ರತಿ ವರ್ಷ ಮಾರ್ಚ್ 22 ರಂದು ವಿಶ್ವ ಜಲ ದಿನಾಚರಣೆ ಆಚರಿಸಲಾಗುತ್ತದೆ, ಅದರಂತೆ ಈ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿಯವರು ಜಲಶಕ್ತಿ ಅಭಿಯಾನವಾದ 'ಕ್ಯಾಚ್ ದಿ ರೇನ್' ಅಭಿಯಾನಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಲಿದ್ದಾರೆ.
* ಈ 'ಕ್ಯಾಚ್ ದಿ ರೇನ್' ಅಭಿಯಾನದ ಮೂಲಕ 'ಮಳೆ, ಯಾವಾಗ ಬೀಳುತ್ತೆ, ಎಲ್ಲಿ ಬೀಳುತ್ತದೆ' ಎಂಬ ಥೀಮ್ ನೊಂದಿಗೆ ಭಾರತದ ಉದ್ದಗಲಕ್ಕೂ ಈ ಆಂದೋಲನ ನಡೆಸಲಾಗುವುದು ಹಾಗು ಈ ಮೂಲಕ ನಮ್ಮ ದೇಶದಲ್ಲಿ ಜಲ ಸಂರಕ್ಷಣೆ ಪ್ರಯತ್ನಗಳು ಬಲಗೊಳಿಸುವ ಉದ್ದೇಶ ಹೊಂದಲಾಗಿದೆ.

## ಸುಮಾರು 900 ವರ್ಷಗಳ ಬಳಿಕ ಸ್ಫೋಟಿಸಿದ ಜ್ವಾಲಾಮುಖಿ



ಐಸ್‌ಲ್ಯಾಂಡ್ ರಾಜಧಾನಿ ರೆಯ್ಕಜೆವಿಕ್ ಸನಿಹದಲ್ಲಿ ಸುಮಾರು 900 ವರ್ಷಗಳ ಬಳಿಕ ಜ್ವಾಲಾಮುಖಿಯೊಂದು ಮತ್ತೆ ಸ್ಫೋಟಗೊಂಡಿದೆ. ರೆಯ್ಕಜೇನ್ಸ್ ನ ದ್ವೀಪದ ಜೆಲ್ಡಿಂಗಡಲುರ್ ಕಣಿವೆಯಲ್ಲಿ ಈ ಜ್ವಾಲಾಮುಖಿ ಸ್ಫೋಟಗೊಂಡಿದ್ದು, ಈ ಸ್ಫೋಟದಲ್ಲಿ ಕೆಂಪು ಶಿಲಾರಸ ಉಕ್ಕಿ ಹರಿದಿದೆ. ಈ ಜ್ವಾಲಾಮುಖೀ ಸ್ಫೋಟದಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ.

## 'ಮಿಲಿಟರಿ ಡೈರೆಕ್ಟ್' ಅಧ್ಯಯನ ವರದಿ ಪ್ರಕಟ




ಇತ್ತೀಚಿಗೆ ಮಿಲಿಟರಿ ಡೈರೆಕ್ಟ್ ಜಾಲತಾಣ ವಿವಿಧ ರಾಷ್ಟ್ರಗಳ ರಕ್ಷಣಾ ಸಾಮರ್ಥ್ಯದ ಕುರಿತು ವರದಿ ಪ್ರಕಟಿಸಿದೆ, ಈ ವರದಿಯ ಕೆಲವು ಪ್ರಮುಖ ಅಂಶಗಳು ಈ ಕೆಳಗಿನಂತಿವೆ :
* ಒಟ್ಟು 100 ಅಂಕಗಳಲ್ಲಿ 82 ಅಂಕ ಗಳಿಸಿದ ಚೀನಾ ವಿಶ್ವದಲ್ಲಿ ಅತ್ಯಂತ ಬಲಿಷ್ಠ ಸೇನೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ನಂತರದಲ್ಲಿ ಅಮೆರಿಕ 79 ಅಂಕಗಳೊಂದಿಗೆ ಎರಡನೇ ಸ್ಥಾನಪಡೆದಿದೆ.
* 69 ಅಂಕ ಪಡೆದಿರುವ ರಶ್ಯಾ ಮೂರನೇ ಸ್ಥಾನ ಹಾಗು 61 ಅಂಕ ಪಡೆದಿರುವ ಭಾರತ ನಾಲ್ಕನೇ ಸ್ಥಾನ ಪಡೆದಿವೆ ಎಂದು 'ಮಿಲಿಟರಿ ಡೈರೆಕ್ಟ್' ಅಧ್ಯಯನ ವರದಿ ತಿಳಿಸಿದೆ.
* ಫ್ರಾನ್ಸ್ 58 ಅಂಕಗಳೊಂದಿಗೆ ಐದನೇ ಸ್ಥಾನ, ಬ್ರಿಟನ್ 43 ಅಂಕಗಳೊಂದಿಗೆ 9ನೇ ಸ್ಥಾನ ಪಡೆದಿವೆ.
* ಈ ಅಧ್ಯಯನ ವರದಿಯನ್ನು ರಕ್ಷಣಾ ಕ್ಷೇತ್ರಕ್ಕೆ ಅನುದಾನ, ಸಕ್ರಿಯ ಮತ್ತು ಸಕ್ರಿಯವಲ್ಲದ ಸೇನಾ ಸಿಬಂದಿಗಳ ಸಂಖ್ಯೆ, ವಾಯುಪಡೆ, ನೌಕಾಬಲ, ಭೂಸೇನೆ ಮತ್ತು ಪರಮಾಣು ಶಸ್ತ್ರಗಳ ಸಂಪನ್ಮೂಲ, ಸರಾಸರಿ ವೇತನ, ಆಯುಧಗಳ ತೂಕವನ್ನು ಪರಿಗಣಿಸಿ ಪ್ರಕಟಿಸಲಾಗಿದೆ. ಇದೀಗ ಯುದ್ಧ ಸಂಭವಿಸಿದರೆ ? ಒಂದು ವೇಳೆ ಪ್ರಸ್ತುತ ಯುದ್ಧವೇನಾದರೂ ಸಂಭವಿಸಿದ್ದೇ ಆದಲ್ಲಿ ಚೀನಾ ದೇಶವು ತನ್ನ ನೌಕಾಪಡೆಯಿಂದಾಗಿ ಗೆಲುವು ಪಡೆಯಲಿದೆ. ಅಮೆರಿಕದ ತನ್ನ ಸಶಕ್ತ ವಾಯುಪಡೆಯಿಂದ ವಿಜಯಶಾಲಿಯಾಗಲಿದ್ದು, ರಶ್ಯಾ ಭೂಸೇನೆಯಿಂದ ಗೆಲುವು ಪಡೆಯುವುದಾಗಿ 'ಮಿಲಿಟರಿ ಡೈರೆಕ್ಟ್' ವರದಿ ತಿಳಿಸಿದೆ.

## ರಸ್ತೆ ಸುರಕ್ಷತಾ ವಿಶ್ವ ಸರಣಿ ಟಿ 20 ಪ್ರಶಸ್ತಿ ಪಡೆದ ಭಾರತ ಲೆಜೆಂಡ್ಸ್ ತಂಡ



*ಭಾರತ ಲೆಜೆಂಡ್ಸ್ ತಂಡವು ರಸ್ತೆ ಸುರಕ್ಷತಾ ವಿಶ್ವ ಸರಣಿ ಟಿ20 ಪಂದ್ಯಗಳಲ್ಲಿ ಗೆದ್ದು ಚಾಂಪಿಯನ್ ಆಗಿ ಹೊರಹೊಮ್ಮಿದೆ.
* ಸಚಿನ್ ತೆಂಡುಲ್ಕರ್ ನಾಯಕತ್ವದ ಭಾರತ ತಂಡವು ರಸ್ತೆ ಸುರಕ್ಷತಾ ವಿಶ್ವ ಸರಣಿ ಟಿ20 ಫೈನಲ್ ಪಂದ್ಯದಲ್ಲಿ 14 ರನ್‌ಗಳಿಂದ ಶ್ರೀಲಂಕಾ ಲೆಜೆಂಡ್ಸ್ ತಂಡವನ್ನು ಮಣಿಸಿತು.
* ಶಹೀದ್ ವೀರನಾರಾಯಣ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಟಾಸ್ ಸೋತು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.
* ಈ ಲೆಜೆಂಡ್ಸ್ ಕ್ರೀಡಾಕೂಟದಲ್ಲಿ ಭಾರತದ ಲೆಜೆಂಡ್ಸ್ ತಂಡದ ಆಟಗಾರರಾದ ಯೂಸುಫ್ ಪಠಾಣ್ ಹಾಗೂ ಯುವರಾಜ್ ಸಿಂಗ್ ಉತ್ತಮ ಪ್ರದರ್ಶನವನ್ನು ತೋರಿದರು.

* ಬ್ಯಾಟಿಂಗ್ ಮತ್ತು ಬೌಲಿಂಗ್ ನಲ್ಲಿ ಉತ್ತಮ ಪ್ರದರ್ಶನ ನೀಡಿದ ಯೂಸುಫ್ ಪಠಾಣ್ ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಹಾಗೂ ಶ್ರೀಲಂಕಾ ಲೆಜೆಂಡ್ಸ್ ನಾಯಕ ತಿಲಕರತ್ನೆ ದಿಲ್ಶಾನ್ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

## ಸ್ಥಳೀಯ ಭಾಷೆ, ಸಂಸ್ಕೃತಿ ಕಲಿಸುವ ಶಾಲೆ ಅರುಣಾಚಲ ಪ್ರದೇಶದಲ್ಲಿ ಉದ್ಘಾಟನೆ




* ಅರುಣಾಚಲ ಪ್ರದೇಶದಲ್ಲಿ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯನ್ನು ಕಲಿಸುವ ರಾಜ್ಯದ ಮೊದಲ ಶಾಲೆಯನ್ನು ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೆಮಾ ಖಂಡು ರವರು ಉದ್ಘಾಟಣೆ ಮಾಡಿದರು.
* ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯನ್ನು ಕಲಿಸುವ ಶಾಲೆಗೆ 'ನಯುಬು ನೈವಗಂ ಯೆರ್ಕೊ' ಎಂಬ ಹೆಸರನ್ನು ಇಡಲಾಗಿದೆ ಈ ಶಾಲೆಯನ್ನು ಸೆಪ್ಪಾ ಸಮೀಪದ ರಂಗ್ ಗ್ರಾಮದಲ್ಲಿ ಉದ್ಘಾಟಿಸಲಾಯಿತು.
* ಅರುಣಾಚಲ ಪ್ರದೇಶದ ಈ ಶಾಲೆಯಲ್ಲಿ ಸ್ಥಳೀಯ ಸಂಪ್ರದಾಯ, ಭಾಷೆಗಳು, ಸಂಸ್ಕೃತಿಯ ಕುರಿತು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ ಎಂದು ಮುಖ್ಯ ಮಂತ್ರಿ ಪೆಮಾ ಖಂಡು ರವರು ಮಾಹಿತಿ ನೀಡಿದರು.
* ಅರುಣಾಚಲ ಪ್ರದೇಶ ಸರ್ಕಾರವು ಭಾಷೆ ಮತ್ತು ಸಂಸ್ಕೃತಿಯ ಶಾಲೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಸುಮಾರು 3 ಕೋಟಿ ಅನುದಾನವನ್ನು ಮೀಸಲಿರಿಸಿದೆ.
*ಈ ಶಾಲೆಗಳಲ್ಲಿ ಸ್ಥಳೀಯ ಸಂಸ್ಕೃತಿ, ಪರಂಪರೆ, ಭಾಷೆ, ಜೀವನ ವಿಧಾನವನ್ನು ಮತ್ತು ಬೌದ್ಧ ಧರ್ಮದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುವದು.
* ವಿದ್ಯಾರ್ಥಿಗಳು ಈ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯ ಶಾಲೆಗಳಲ್ಲಿ ಪದವಿಯನ್ನೂ ಪಡೆಯಬಹುದು.

## ಭಾರತದಲ್ಲಿ 70 ಸಾವಿರ ಆಯುಷ್ಮಾನ್ ಭಾರತ ಕೇಂದ್ರಗಳ ಪ್ರಾರಂಭ




* ಕೇಂದ್ರ ಆರೋಗ್ಯ ಸಚಿವಾಲಯ ನೀಡಿರುವ ಮಾಹಿತಿಯ ಪ್ರಕಾರ ಪ್ರಸ್ತುತ ದೇಶದಲ್ಲಿ 70 ಸಾವಿರ ಆಯುಷ್ಮಾನ್ ಭಾರತ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದೆ.
* ಕೇಂದ್ರ ಆರೋಗ್ಯ ಸಚಿವಾಲಯ ಆಯುಷ್ಮಾನ್ ಭಾರತ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಇಲ್ಲಿಯವರೆಗೆ ಸರಿ ಸುಮಾರು 41.35 ಕೋಟಿ ಜನ ಸೇವೆಯನ್ನು ಪಡೆದುಕೊಂಡಿದ್ದಾರೆ.
* ಆಯುಷ್ಮಾನ್ ಭಾರತ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಸೇವೆಯನ್ನು ಪಡೆದುಕೊಂಡಿರವ 41.35 ಕೋಟಿ ಜನರಲ್ಲಿ ಶೇಕಡ 54ರಷ್ಟು ಮಹಿಳೆಯರು ಸೇವೆಯನ್ನು ಪಡೆದುಕೊಂಡಿದ್ದಾರೆ ಎಂದು ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.
* ಆಯುಷ್ಮಾನ್ ಭಾರತ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಯೋಜನೆಯನ್ನು 2018ರ ಏಪ್ರಿಲ್ ತಿಂಗಳಿನಲ್ಲಿ ಪ್ರಾರಂಭಮಾಡಲಾಗಿದೆ.
*ಕೇಂದ್ರ ಆರೋಗ್ಯ ಸಚಿವಾಲಯವು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ 1.50 ಲಕ್ಷ ಉಪ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಡಿಸೆಂಬರ್ 2022ರ ವೇಳೆಗೆ ಆಯುಷ್ಮಾನ್ ಭಾರತ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಬದಲಾವಣೆ ಮಾಡಲಾಗುವದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿಯನ್ನು ನೀಡಿದೆ.

## ಕ್ರೀಡಾಪಟುಗಳಿಗೆ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಶೇ. 2 ರಷ್ಟು ಮೀಸಲಾತಿ




* ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಲು ಆಸೆಪಡುವ ಕ್ರೀಡಾಪಟುಗಳಿಗೆ ಶೇ.2 ರಷ್ಟು ಮೀಸಲಾತಿ ನೀಡಲಾಗುತ್ತದೆ ಎಂದು ರಾಜ್ಯ ಸರ್ಕಾರವು ಅಧಿಕೃತ ಘೋಷಣೆಯನ್ನು ನೀಡಿದೆ.
* ಪ್ರಸ್ತುತ ಪೊಲೀಸ್ ಇಲಾಖೆಗಳಲ್ಲಿ ಕ್ರೀಡಾಪಟುಗಳ ನೇಮಕ್ಕೆ ಸಂಬಂಧಪಟ್ಟ ಅಂತಿಮ ಅಧಿಸೂಚನೆಯನ್ನು ಪ್ರಕಟಣೆ ಮಾಡಲಾಗಿದೆ ಎಂದು KSRP ಎಡಿಜಿಪಿ(ADGP)ಯಾಗಿರುವ ಅಲೋಕ್ ಕುಮಾರ್ ತಿಳಿಸಿದರು.
* ಇನ್ನುಮುಂದೆ ಪ್ರತಿ ಪೊಲೀಸ್ ನೇಮಕಾತಿಯಲ್ಲಿ ಕ್ರೀಡಾ ಪಟುಗಳಿಗೆ ಶೇ.2ರಷ್ಟು ಮೀಸಲಾತಿಯನ್ನು ನೀಡಲಾಗುತ್ತದೆ, ಮತ್ತು ಇದು ಸರಿ ಸುಮಾರು 12 ವರ್ಷಗಳ ಸುದೀರ್ಘ ಬೇಡಿಕೆ ಯಾಗಿತ್ತು ಎಂದು ತಿಳಿದು ಬಂದಿದೆ.
* ಪೊಲೀಸ್ ಇಲಾಖೆಯ ಕಾನ್ ಸ್ಟೇಬಲ್, ಸಬ್ ಇನ್ಸ್ಪೆಕ್ಟರ್,ಡಿವೈಎಸ್ಪಿ, ಈ ತರಹದ ಹುದ್ದೆಗಳನ್ನು ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ಸರ್ಕಾರ ಮಾಹಿತಿಯನ್ನು ನೀಡಿದೆ.

## 2024ರ ಲೋಕಸಭಾ ಚುನಾವಣೆಗೆ ರಿಮೋಟ್ ವೋಟಿಂಗ್ ವ್ಯವಸ್ಥೆ



* ದೇಶದಲ್ಲಿ 2024ರ ಲೋಕಸಭಾ ಚುನಾವಣೆ ಹೊತ್ತಿಗೆ ರಿಮೋಟ್ ವೋಟಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ಸಿದ್ಧತೆಗಳನ್ನು ಭರದಿಂದ ನಡೆಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುನೀಲ್ ಅರೋರ ತಿಳಿಸಿದ್ದಾರೆ.
* ರಿಮೋಟ್ ವೋಟಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಐಐಟಿ ಮದ್ರಾಸ್ ಹಾಗೂ ಇತರೆ ಐಐಟಿಗಳ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ಹೊಂದಿರುವ ವ್ಯಕ್ತಿಗಳನ್ನೂ ಸೇರಿಸಿಕೊಂಡು ಸಂಶೋಧನೆಯನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.
* ರಾಜಕೀಯ ಪಕ್ಷಗಳ ಜೊತೆಗೆ ರಿಮೋಟ್ ವೋಟಿಂಗ್ ಕುರಿತು ಚರ್ಚೆ ನಡೆಸಲಾಗುತ್ತದೆ ಮತ್ತು ಎಲ್ಲರ ಒಪ್ಪಿಗೆಯನ್ನು ಪಡೆದ ನಂತರವೇ ಈ ವ್ಯವಸ್ಥೆ ಜಾರಿಗೆ ತರಲಾಗುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುನೀಲ್ ಅರೋರ ಹೇಳಿದರು.

## 23- 03- 2021

### ವಿಶ್ವ ಹವಾಮಾನ ದಿನ




* ಮಾರ್ಚ್ 23 ವಿಶ್ವ ಹವಾಮಾನ ದಿನ.
* ವಿಶ್ವ ಹವಾಮಾನ ಸಂಸ್ಥೆ ಒಪ್ಪಂದ 1950ರ ಮಾರ್ಚ್ 23ರಂದು ಅಸ್ತಿತ್ವಕ್ಕೆ ಬಂದಿದೆ.
* ಅಂತಾರಾಷ್ಟ್ರೀಯ ಹವಾಮಾನ ಸಂಸ್ಥೆಯು 1873ರಲ್ಲಿ ರಚನೆಯಾಗಿತ್ತು ಅದು ನಂತರ ದಿನಗಳಲ್ಲಿ ಅಂದರೆ 1950ರಲ್ಲಿ ಡಬ್ಲ್ಯುಎಂಒ ಆಗಿ ಬದಲಾಯಿತು.
* ಈ ವರ್ಷದ ಹವಾಮಾನ ಇಲಾಖೆಯ ಧ್ಯೇಯವಾಕ್ಯ "The ocean, our climate and weather"

### 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ




* 67 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ದೆಹಲಿಯ ರಾಷ್ಟ್ರೀಯ ಮಾಧ್ಯಮ ಕೇಂದ್ರದಲ್ಲಿ ಘೋಷಣೆ ಮಾಡಲಾಗಿದೆ.
* ಕನ್ನಡ ಚಿತ್ರರಂಗದ ರಕ್ಷಿತ್ ಶೆಟ್ಟಿ ಅಭಿನಯದ ಅವನೇ ಶ್ರೀಮನ್ನಾರಾಯಣ ಚಿತ್ರದ ಸಾಹಸ ನಿರ್ದೇಶನಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿದೆ.
* 2019ರಲ್ಲಿ ಕೊರೊನಾ ಹಿನ್ನಲೆಯಲ್ಲಿಯಿಂದಾಗಿ ರಾಷ್ಟ್ರೀಯ ಪ್ರಶಸ್ತಿ ಘೋಷಣೆಯಾಗಿರಲಿಲ್ಲ.
* ಕನ್ನಡದ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು 'ಅಕ್ಷಿ' ಚಿತ್ರ ಪಡೆದಿದೆ.
* ಹಿಂದಿ ಚಿತ್ರ ನಟ ಸುಶಾಂತ್ ಸಿಂಗ್ ರಜಪೂತ್ ಮತ್ತು ಶ್ರದ್ಧಾ ಕಪೂರ್ ನಟನೆಯ 'ಚಿಚೋರ್' ಚಿತ್ರವು ಅತ್ಯುತ್ತಮ ಹಿಂದಿ ಚಿತ್ರ ಪ್ರಶಸ್ತಿ ಪಡೆದಿದೆ.
* ಕೇಸರಿ ಚಿತ್ರದ ಹಾಡು "ತೇರಿ ಮಿಟ್ಟಿ" ಹಾಡಿಗಾಗಿ ಬಿ ಪ್ರಾಕ್'ಗೆ ಬೆಸ್ಟ್ ಸಿಂಗರ್ ಪ್ರಶಸ್ತಿ ಲಭಿಸಿದೆ.
* ಮಲಯಾಳಂನ ಜಲ್ಲಿಕಟ್ಟು ಚಿತ್ರಕ್ಕೆ ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿ ಲಭಿಸಿದೆ.

### ತೆಲಂಗಾಣ ರಾಜ್ಯ ಸರ್ಕಾರಿ ನೌಕರರ ವೇತನ, ನಿವೃತ್ತಿ ವಯಸ್ಸು ಹೆಚ್ಚಳ



* ತೆಲಂಗಾಣ ರಾಜ್ಯ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ತೆಲಂಗಾಣ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ರಿಂದ 61 ವರ್ಷಕ್ಕೆ ಹೆಚ್ಚಿಸಲಾಗಿದೆ, ಜೊತೆಗೇನೆ ವೇತನವನ್ನು ಶೇ 30ರಷ್ಟು ಹೆಚ್ಚಿಗೆ ಮಾಡಲಾಗುವದು ಎಂದು ಘೋಷಣೆ ಮಾಡಿದ್ದಾರೆ.
* ಈ ಹೆಚ್ಚಿನ ವೇತನವು ಏಪ್ರಿಲ್ 1, 2021ರಿಂದ ಅನ್ವಯವಾಗಲಿದೆ ಮತ್ತು ನಿವೃತ್ತಿಯ ಹೆಚ್ಚಿನ ವಯಸ್ಸ ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ತಿಳಿಸಿದರು.

### ಪ್ಯೂ ವರದಿ 75 ಮಿಲಿಯನ್ ಭಾರತೀಯರು ಜೀವನ ಬಡತನ ರೇಖೆಯಿಂದ ಕೆಳಮಟ್ಟಕ್ಕೆ ಕುಸಿದಿದೆ



* 2020ರಲ್ಲಿ ಸರಿ ಸುಮಾರು 7.5 ಕೋಟಿ ಭಾರತಿಯರು ಕೋರೋಣ ಸಾಂಕ್ರಾಮಿಕ ರೋಗದ ಆರ್ಥಿಕ ಹಿಂಜರಿತದಿಂದ ಜನರ ಬದುಕು ಬಡತನ ರೇಖೆಯಿಂದ ಕೆಳಮಟ್ಟಕೆ ಹೋಗಿದೆ ಎಂದು ಪ್ಯೂ ವರದಿ ನೀಡಿದೆ.
* ಕೋರೋಣದಿಂದ ಇಡೀ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ಭಾರಿ ಪರಿಣಾಮ ಉಂಟಾಗಿದೆ ಎಂದು ಅಂತರಾಷ್ಟ್ರೀಯ ಪ್ಯೂ ಸಂಶೋಧನಾ ಕೇಂದ್ರ ಅಧ್ಯಯನ ನಡೆಸಿ ಈ ಮಾಹಿತಿಯನ್ನು ಹೊರಹಾಕಿದೆ.
* ಪ್ಯೂ ಸಂಶೋಧನಾ ಕೇಂದ್ರ ನೀಡಿರುವ ವರದಿಯ ಪ್ರಕಾರ ದೇಶದ ಸುಮಾರು 32 ಕೋಟಿ ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಮಟ್ಟ ಕುಸಿದಿದೆ ಎಂದು ವರದಿ ಮಾಡಿದೆ.
* ಪ್ರಸ್ತುತ ಪ್ಯೂ ಸಂಶೋಧನಾ ಕೇಂದ್ರದ ವರದಿಯ ಪ್ರಕಾರ ಭಾರತ ದೇಶದಲ್ಲಿ 13.4 ಕೋಟಿ ಬಡ ಜನರಿದ್ದಾರೆ ಎಂದು ಅಂದಾಜಿಸಲಾಗಿದೆ.
* ಚೀನಾ ದೇಶದಲ್ಲಿ 1ಕೋಟಿ ಮಧ್ಯಮ ವರ್ಗದ ಕುಟುಂಬಗಳ ಆರ್ಥಿಕ ಮಟ್ಟ ಕುಸಿದಿದೆ ಎಂದು ವರದಿ ಮಾಡಿದೆ.

### ಶೇಕ್ ಮುಜೀಬುರ್ರಹ್ಮಾನ್' 2020ರ ಗಾಂಧಿ ಶಾಂತಿ ಪ್ರಶಸ್ತಿಗೆ ಆಯ್ಕೆ



* 2020ರ ಸಾಲಿನ ಗಾಂಧಿ ಪ್ರಶಸ್ತಿಗೆ ಬಾಂಗ್ಲಾದೇಶದ ಶೇಕ್ ಮುಜೀಬುರ್ರಹ್ಮಾನ್'ರವರು ಆಯ್ಕೆಯಾಗಿದ್ದಾರೆ ಎಂದು ಸಂಸ್ಕೃತಿ ಸಚಿವಾಲಯ ಮಾಹಿತಿಯನ್ನು ನೀಡಿದೆ.
*2019ರಪ್ರತಿಷ್ಠಿತಗಾಂಧಿ ಪ್ರಶಸ್ತಿಯನ್ನು ಒಮಾನ್'ನ ದಿವಂಗತ ಸುಲ್ತಾನ್ ಖಬೂಸ್ ಬಿನ್ ಸಯೀದ್ ಅಲ್ ಸಯೀದ್ ಅವರಿಗೆ ನೀಡಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ. ಇವರು ಗಲ್ಫ್ ಪ್ರದೇಶದಲ್ಲಿ ಶಾಂತಿ ಹಾಗೂ ಅಹಿಂಸೆಯನ್ನು ಉತ್ತೇಜಿಸುವ ಪ್ರಯತ್ನವನ್ನು ಗುರುತಿಸಿ ಈ ಗಾಂಧಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
* ಭಾರತ ಸರ್ಕಾರವು ಮಹಾತ್ಮಾ ಗಾಂಧಿಯವರ 125ನೇ ಜನ್ಮ ದಿನಾಚರಣೆಯ ಸವಿನೆನಪಿನಲ್ಲಿ 1995ರಲ್ಲಿ ಗಾಂಧಿ ಶಾಂತಿ ಪ್ರಶಸ್ತಿಯನ್ನು ಸ್ಥಾಪಿಸಿದೆ.
* ಪ್ರತಿ ವರ್ಷ ಮಹಾತ್ಮಾ ಗಾಂಧಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ, ರಾಷ್ಟ್ರೀಯತೆ, ಯಾವುದೇ ಜನಾಂಗ, ಭಾಷೆ, ಜಾತಿ,ಮತ, ಲಿಂಗ ಯಾವುದನ್ನೂ ಪರಿಗಣಿಸದೆ ಈ ಪ್ರಶಸ್ತಿ ಮುಕ್ತವಾಗಿ ಎಲ್ಲರಿಗೂ ನೀಡಲಾಗುತ್ತದೆ.

## ಭಾರತ ಪಾಕಿಸ್ತಾನ ಸಿಂಧೂ ನದಿ ನೀರಿನ ಹಂಚಿಕೆ ಮಾತುಕತೆ



* ಭಾರತ ಪಾಕಿಸ್ತಾನ ದೇಶಗಳು 2 ವರ್ಷಗಳ ಬಳಿಕ ಸಿಂಧೂ ನದಿ ನೀರಿನ ಹಂಚಿಕೆ ಮಾತುಕತೆ ನಡೆಸುತ್ತಿದೆ.
*ಸಿಂಧೂ ಆಯೋಗದ ವಾರ್ಷಿಕ ಸಭೆ ರಾಷ್ಟ್ರ ರಾಜಧಾನಿಯಲ್ಲಿ, ಭಾರತ ಮತ್ತು ಪಾಕಿಸ್ತಾನವು ದೇಶಗಳ ನಡುವೆ ನಡೆಯಲಿದೆ.
* ಈ ಎರಡು ದೇಶಗಳ ಅಧಿಕಾರಿಗಳು ವಾರ್ಷಿಕವಾಗಿ ಒಮ್ಮೆಯಾದರೂ ಭೇಟಿಯಾಗುತ್ತಾರೆ, ಕೊನೆಯದಾಗಿ 2018 ರ ಆಗಸ್ಟನಲ್ಲಿ ಈ ಸಭೆ ನಡೆದಿತ್ತು.
* 2019ರ ಪುಲ್ವಾಮಾ ಭಯೋತ್ಪಾದಕ ದಾಳಿಯಿಂದಾಗಿ ಈ ಸಭೆ ತಾತ್ಕಾಲಿಕವಾಗಿ ರದ್ದಾಗಿತ್ತು.
* ಭಾರತ ಪಾಕಿಸ್ತಾನ 1960ರಲ್ಲಿ ಸಿಂಧು ನದಿ ನೀರನ್ನು ಹಂಚಿಕೊಳ್ಳುವ ಸಿಂಧೂ ಜಲ ಒಪ್ಪಂದವನ್ನು ಮಾಡಿಕೊಂಡಿದ್ದವು.
* ಈ ಸಿಂಧು ನದಿ ವಿಚಾರಕ್ಕಾಗಿ ಭಾರತದ ಪಿ.ಕೆ.ಸಕ್ಸೇನಾ ನೇತೃತ್ವ ವಹಿಸಿಕೊಳ್ಳಲಿದ್ದಾರೆ, ಹಾಗೂ ಸೈಯದ್ ಮುಹಮ್ಮದ್ ಮೆಹರ್ ಅಲಿ ಶಾ ರವರು ಪಾಕಿಸ್ತಾನದ ನೇತೃತ್ವ ವಹಿಸಿಕೊಳ್ಳಲಿದ್ದಾರೆ.

# 24- 03- 2021

## UPSC ಮತ್ತು ಆಫ್ಘಾನಿಸ್ತಾನ ನಡುವೆ ಸಹಕಾರಕ್ಕೆ ಒಪ್ಪಂದ



* ಭಾರತದ ಕೇಂದ್ರ ಲೋಕಸೇವಾ ಆಯೋಗ (UPSC) ಮತ್ತು ಆಫ್ಘಾನಿಸ್ತಾನದ ಸ್ವಾಯತ್ತ ಆಡಳಿತಾತ್ಮಕ ಸುಧಾರಣೆಗಳು ಮತ್ತು ನಾಗರಿಕ ಸೇವೆಗಳ ಆಯೋಗಗಳ ನಡುವೆ ಒಪ್ಪಂದಕ್ಕೆ ಸಚಿವ ಸಂಪುಟ ಇತ್ತೀಚಿಗೆ ಅನುಮೋದನೆ ನೀಡಿದೆ.
* ಈ ಒಪ್ಪಂದದಿಂದಾಗಿ ನೇಮಕಾತಿ ವಲಯದಲ್ಲಿ ಎರಡು ರಾಷ್ಟ್ರಗಳ ಕಡೆಯಿಂದ ಅನುಭವ ವಿಷಯ ವಿಚಾರಗಳನ್ನು ವಿನಿಯೋಗ ಮಾಡಿಕೊಳ್ಳಲು ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

## ಬರುವಏಪ್ರಿಲ್.1ರಿಂದ45ವರ್ಷದಾಟಿದವರಿಗೆಕೋರೋಣ ಲಸಿಕೆ ವಿತರಣೆ




* ಬರುವ ಏಪ್ರಿಲ್ 1 ರಿಂದ 45 ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ವಯಸ್ಸಿನ ಎಲ್ಲಾ ವ್ಯಕ್ತಿಗಳಿಗೆ ಕೋರೋಣ ಲಸಿಕೆಯ ಮೊದಲನೇ ಡೋಸ್ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದರು.
* ಪ್ರಸ್ತುತ ಭಾರತ ದೇಶದ 17 ರಾಜ್ಯಗಳಲ್ಲಿ ಕೋರೋಣ ಸೋಕಿನ ಎರಡನೇ ಅಲೆಹೆಚ್ಚಾಗಿ ಹರಡುತ್ತಿರುವ ಹಿನ್ನೆಲೆಯಿಂದಾಗಿ ಕೇಂದ್ರ ಸಚಿವ ಸಂಪುಟ ಈ ನಿರ್ಧಾರ ಕೈಗೊಂಡಿದೆ.

## ದೇಶಕ್ಕೆ ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮಾದರಿ



* ದಕ್ಷಿಣ ಭಾರತದಲ್ಲೇ ಎರಡು ರನ್‌ವೇ ಗಳನ್ನೂ ಹೊಂದಿರುವ ಮೊದಲ ವಿಮಾನ ನಿಲ್ದಾಣ ಎಂಬ ಖ್ಯಾತಿಗೆ ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಮೆಚ್ಚುಗೆಗೆ ಪಾತ್ರವಾಗಿದೆ.
* ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಉತ್ತರ ರನ್‌ವೇಯನ್ನು ಜೂನ್ 22. 2020 ರಿಂದ ಕಾಮಗಾರಿಯನ್ನು ನಡೆಸಲಾಗುತ್ತಿತ್ತು ಇದೀಗ ಮಾರ್ಚ್ 25ರಂದು ಈ ಉತ್ತರ ರನ್‌ವೇ ಬಳಕೆಗೆ ಸಿಗಲಿದೆ ಎಂದು ತಿಳಿದು ಬಂದಿದೆ.
* 2019ರಲ್ಲಿ ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣವು, ನಿಲ್ದಾಣದ ಪ್ರದೇಶದ ಹವಾಮಾನ ಪರಿಸ್ಥಿತಿ ಅಧ್ಯಯನ ಮಾಡಲು ಜವಾಹರ್‌ಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.
* ಕ್ಯಾಟ್ 3ಬಿ ರನ್‌ವೇ ಹೊಂದಿರುವ ದಕ್ಷಿಣ ಭಾರತದ ಏಕೈಕ ಹಾಗೂ ಪ್ರಸ್ತುತ ದೇಶದ 6ನೇ ವಿಮಾನ ನಿಲ್ದಾಣವಾಗಿ ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣವು ಹೊರಹೊಮ್ಮಿದೆ.

## ಮಿಷನ್ ಗಗನಯಾನ : ರಷ್ಯಾದಲ್ಲಿ ತರಬೇತಿ ಪೂರ್ಣಗೊಳಿಸಿದ ಭಾರತೀಯ ಗಗನಯಾತ್ರಿಗಳು



* 2019ರ ಜೂನ್ ತಿಂಗಳಲ್ಲಿ 'ಮಿಷನ್ ಗಗನ್ ಯಾನ್'ಕ್ಕಾಗಿ ಭಾರತೀಯ ಬಾಹ್ಯಾಕಾಶ ಸಂಸ್ಥೆ (ISRO) ರಷ್ಯಾ ರಾಷ್ಟ್ರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.
* ಮಿಷನ್ ಗಗನಯಾನಕ್ಕಾಗಿ ಒಟ್ಟು 4 ಭಾರತೀಯ ಗಗನಯಾತ್ರಿಗಳು ಮಾನವ ಸಹಿತ ಬಾಹ್ಯಾಕಾಶ ಯಾನಕ್ಕಾಗಿ ರಷ್ಯಾದಲ್ಲಿ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ ಎಂದು ತಿಳಿಸಲಾಗಿದೆ.
* ಮಿಷನ್ ಗಗನಯಾನ ಯೋಜನೆಗೆ ಆಯ್ಕೆಯಾದ 4 ಭಾರತೀಯ ಗಗನಯಾತ್ರಿ ಅಧಿಕಾರಿಗಳಿಗೆ ಮಾಸ್ಕೋ ಬಳಿ ಇರುವ ಜ್ವಿಯೊಜ್ನಿ ಗೊರೊಡೋಕ್ ನಗರದ ಬಳಿ 1 ವರ್ಷಗಳ ಕಾಲ ತರಬೇತಿ ನೀಡಲಾಗಿದೆ ಎಂದು ತಿಳಿದು ಬಂದಿದೆ.
* ರಷ್ಯಾದ ಸರ್ಕಾರಿ ಬಾಹ್ಯಾಕಾಶ ಸಹಕಾರ ಸಂಸ್ಥೆಯ ಮುಖ್ಯಸ್ಥ ಡಿಮಿಟ್ರಿ ರೋಗೋಜಿನ್'ರವರು ಮಿಷನ್ ಗಗನ್ ಯಾನ್'ಕ್ಕಾಗಿ ತರಬೇತಿ ಪಡೆದಿರುವ ಭಾರತೀಯ ಗಗನಯಾನಿಗಳನ್ನು ಗಗಾರಿನ್ ಗಗನಯಾತ್ರಿ ತರಬೇತಿ ಕೇಂದ್ರ ಭೇಟಿ ಮಾಡಿದೆ

ಎಂದುತಿಳಿಸಿದ್ದಾರೆ.

### ಫೇಸ್ಬುಕ್ ನಿಂದ 130 ಕೋಟಿ ನಕಲಿ ಖಾತೆಗಳು ಸ್ಥಗಿತ



* ಸಾಮಾಜಿಕ ಜಾಲತಾಣವಾಗಿರುವ ಫೇಸ್ಬುಕ್ (FaceBook) ಕಳೆದ ಅಕ್ಟೋಬರ್ ನಿಂದ ಡಿಸೆಂಬರ್'ವರೆಗೆ ಒಟ್ಟು 130 ಕೋಟಿ ಫೇಸ್ಬುಕ್'ನ ನಕಲಿ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ ಮತ್ತು1.2 ಕೋಟಿ ಸುಳ್ಳು ಸುದ್ದಿ ಹರಡಿರುವ ಪೋಸ್ಟಗಳನ್ನು ಡಿಲೀಟ್ ಮಾಡಲಾಗಿದೆ ಎಂದು ತಿಳಿಸಿದೆ.
* ಫೇಸ್‌ಬುಕ್ ಕ್ಯಾಲಿಫೋರ್ನಿಯಾದ ಮೆನ್ಲೊ ಪಾರ್ಕ್ ಮೂಲದ ಅಮೆರಿಕನ್ ತಂತ್ರಜ್ಞಾನ ಸಂಘಟನೆಯಾಗಿದೆ. ಇದನ್ನು ಮಾರ್ಕ್ ಜುಕರ್‌ಬರ್ಗ್ ರವರು 4 ಫೆಬ್ರವರಿ 2004ರಲ್ಲಿ ಸ್ಥಾಪಿಸಿದರು. ಫೇಸ್ಬುಕ್ ಸಿಇಒ ಮಾರ್ಕ್ ಜುಕರ್‌ಬರ್ಗ್ ಪ್ರಧಾನ ಕಚೇರಿ: ಮೆನ್ಲೊ ಪಾರ್ಕ್, ಕ್ಯಾಲಿಫೋರ್ನಿಯಾ ಯುನೈಟೆಡ್ ಸ್ಟೇಟ್ಸ್

### 18 ದೇಶಗಳ 38 ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾಯಿಸಿದ ರಷ್ಯಾ



* ರಷ್ಯಾ ದೇಶವು 38 ವಿದೇಶಿ ಉಪಗ್ರಹಗಳನ್ನು18 ದೇಶಗಳ ಕಕ್ಷೆಗೆ ಯಶಸ್ವಿಯಾಗಿ ಉಡಾವಣೆ ಮಾಡಿದೆ.
* ಈ 38 ಉಪಗ್ರಹಗಳಲ್ಲಿ, ಒಂದು ಚಾಲೆಂಜ್ 1, ಇದು ಟುನೀಶಿಯಾದಲ್ಲಿ ಸ್ಥಳೀಯವಾಗಿ ತಯಾರಿಸಿದ ಮೊದಲ ಉಪಗ್ರಹವಾಗಿದೆ, ಇದನ್ನು ಟೆಲ್ನೆಟ್ ಟೆಲಿಕಮ್ಯುನಿಕೇಶನ್ಸ್ ಗುಂಪು ತಯಾರಿಸಿದೆ ಎಂದು ತಿಳಿಸಿದೆ.
*ರಷ್ಯಾಈಹಿಂದೆ2018ರಲ್ಲಿರಷ್ಯಾದಗಗನಯಾತ್ರಿಮತ್ತುನಾಸಾಗಗನಯಾತ್ರಿಗಳನ್ನು ಹೊತ್ತ ಸೋಯುಜ್ ರಾಕೆಟ್ ಅನ್ನು ಉಡಾಯಿಸಿತ್ತು, ಆದರೆ ಅದು ವಿಫಲವಾಯಿತು.

### ವೃದ್ದರಿಗೆ ಪೌಷ್ಠಿಕಾಂಶದ ಬೆಂಬಲ ನೀಡಲು 'ಪೋಶನ್ ಅಭಿಯಾನ್' ಪ್ರಾರಂಭ




* ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಹಿರಿಯರಿಗಾಗಿ ಪೌಷ್ಠಿಕಾಂಶದ ಬೆಂಬಲ ನೀಡುವ ಸಲುವಾಗಿ ಪೋಶನ್ ಅಭಿಯಾನ್' ಅನ್ನು ಪ್ರಾರಂಬಿಸಲಾಗುವದು ಎಂದು ತಿಳಿಸಿದೆ.
* ಈ ಮಿಷನ್ ಯೋಜನೆ ಅಡಿಯಲ್ಲಿ ವೃದ್ಧಾಶ್ರಮಗಳಲ್ಲಿ ಇಲ್ಲದ ಮತ್ತು ಅಪೌಷ್ಠಿಕತೆಗೆ ಬಲಿಯಾದ ಅನಗತ್ಯ ಹಿರಿಯರಿಗೆ ಬೆಂಬಲ ನೀಡುವ ಉದ್ದೇಶವಾಗಿದೆ.
* ಈ ಮಿಷನ್ ಸಹಾಯದಿಂದ ಸ್ಥಳೀಯವಾಗಿ ಸಿಗುವ ಆರೋಗ್ಯಕರ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಮಧ್ಯಾಹ್ನದ ಊಟವನ್ನು ಪೂರೈಸಲು ನೆರವಾಗಲಿದೆ ಎಂದು ತಿಳಿದು ಬಂದಿದೆ.
* ಈ ಪೋಶನ್ ಅಭಿಯಾನ್ ಯೋಜನೆಯನ್ನು ಗ್ರಾಮ ಪಂಚಾಯಿತಿ ಮತ್ತು ನಗರ ಪುರಸಭೆ ಜಾರಿಗೆ ತರಲಿವೆ.
* ಹಿರಿಯ ನಾಗರಿಕರ ಕಲ್ಯಾಣ ನಿಧಿ' ಯನ್ನು ಪೋಶನ್ ಅಭಿಯಾನ್ ಮಿಷನ್'ನ್ನು ಕಾರ್ಯರೂಪಕ್ಕೆ ತರಲು ಬಳಸಿಕೊಳ್ಳಲಾಗುತ್ತದೆ ಎಂದು ತಿಳಿಸಲಾಗಿದೆ.
* ಪೋಶನ್ ಅಭಿಯಾನ್ ಯೋಜನೆಯನ್ನು ರಾಷ್ಟ್ರೀಯ ನ್ಯೂಟ್ರಿಷನ್ ಮಿಷನ್ ಎಂದು ಕರೆಯಲಾಗುತ್ತದೆ.

### ಭಾರತ ಜಪಾನ್ ಜಲಸಂಪನ್ಮೂಲ ಒಪ್ಪಂದಕ್ಕೆ ಸಚಿವ ಸಂಪುಟ ಅನುಮೋದನೆ



* ಭಾರತ ಮತ್ತು ಜಪಾನ್ ದೇಶಗಳು ಜಲಸಂಪನ್ಮೂಲ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರಕ್ಕಾಗಿ ಪರಸ್ಪರ ಒಪ್ಪಿಕೊಂಡು ಸಹಿ ಹಾಕಿವೆ ಮತ್ತು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.
* ಈಜಲಸಂಪನ್ಮೂಲ ಒಪ್ಪಂದದಿಂದಾಗಿ ಮಾಹಿತಿ ಜ್ಞಾನ ಮತ್ತು ತಂತ್ರಜ್ಞಾನದ ವಿಚಾರ ವಿನಿಮಯವನ್ನು ಮಾಡಿಕೊಳ್ಳುವದಕ್ಕೆ ಸಹಾಯ ಮಾಡುತ್ತದೆ ಎಂದು ತಿಳಿಸಿದೆ.
* ಭಾರತ ಸರ್ಕಾರದ ಜಲಶಕ್ತಿ ಸಚಿವಾಲಯ ಅಡಿಯಲ್ಲಿ 'ಜಲಸಂಪನ್ಮೂಲ ಇಲಾಖೆಯು ಗಂಗಾ ನದಿ ಅಭಿವೃದ್ಧಿಗೆ ಬದ್ಧವಾಗಿದೆ ಎಂದು ಒಪ್ಪಂದದಲ್ಲಿ ತಿಳಿಸಿದೆ.
* ಜಪಾನ್ ಸರ್ಕಾರವು ಭೂ ಮೂಲಸೌಕರ್ಯ ಸಚಿವಾಲಯದ ಅಡಿಯಲ್ಲಿ ನೀರು ಮತ್ತು ವಿಪತ್ತು ನಿರ್ವಹಣಾ ಬ್ಯೂರೋ ಸಹಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ತಿಳಿದು ಬಂದಿದೆ.
* ಭಾರತ ಜಪಾನ್ ಜಲಸಂಪನ್ಮೂಲ ಒಪ್ಪಂದದಿಂದಾಗಿ ನೀರಿನ ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರವನ್ನು ಬೆಳೆಸಲು ಅನುಕೂಲವಾಗಲಿದೆ, ಜೊತೆಗೆ ಜ್ಞಾನ, ತಂತ್ರಜ್ಞಾನಗಳ ಮಾಹಿತಿಗಳನ್ನೂ ವಿಚಾರವಿನಿಮಯಮಾಡಿಕೊಳ್ಳಲಾಗುತ್ತದೆಎಂದು ತಿಳಿಸಿದೆ.

## 25-03-2021

### ಕ್ರಿಕೆಟಿಗ ಜಾವಗಲ್ ಶ್ರೀನಾಥ್ 'ಕೂ' ಆಯಪ್‌ನಲ್ಲಿ ಬಂಡವಾಳ ಹೂಡಿಕೆ



* ದೇಶೀ ನಿರ್ಮಿತ ಸಾಮಾಜಿಕ ಜಾಲತಾಣ 'ಕೂ'ನಲ್ಲಿ ಟೀಮ್ ಇಂಡಿಯಾ ಮಾಜಿ ವೇಗಿ ಜಾವಗಲ್ ಶ್ರೀನಾಥ್ ಬಂಡವಾಳ ತೊಡಗಿಸಿದ್ದಾರೆ.
* ಜಾವಗಲ್ ಶ್ರೀನಾಥ್'ರವರು 'ಕೂ'ನ ಮೂಲ ಕಂಪನಿಯಾಗಿರುವ ಬಾಂಬಿನೇಟ್ ಟೆಕ್ನಾಲಜೀಸ್'ನಲ್ಲಿ ಹಣಕಾಸು ಹೂಡಿಕೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ.
* ಕರ್ನಾಟಕದ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್'ರವರು ಮೈಸೂರು ಎಕ್ಸ್‌ಪ್ರೆಸ್ ಖ್ಯಾತಿ ಪಡೆದುಕೊಂಡಿದ್ದರು.
* ಪ್ರಸ್ತುತ ಜಾವಗಲ್ ಶ್ರೀನಾಥ್'ರವರು ಸದ್ಯ ಐಸಿಸಿ(ICC) ಮ್ಯಾಚ್ ರೆಫ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
* ಪ್ರಸ್ತುತ ಜಾವಗಲ್ ಶ್ರೀನಾಥ್'ರವರು 'ಕೂ'ನಲ್ಲಿ ಇದೀಗ 1ಲಕ್ಷಕ್ಕೂ ಹೆಚ್ಚು ಹಿಂಬಾಲಕರನ್ನು ಹೊಂದಿದ್ದಾರೆ.
* ಸದ್ಯ ಈ ಕೂ ಆಪ್ ಹಿಂದಿ, ಇಂಗ್ಲಿಷ್, ತೆಲುಗು, ತಮಿಳು, ಬೆಂಗಾಲಿ ಮತ್ತಿತರ ಭಾಷೆಗಳಲ್ಲಿ ಬಳಸಬಹುದಾಗಿದೆ. ಜಾವಗಲ್ ಶ್ರೀನಾಥ್ ರವರ ಬಗ್ಗೆ ಮಾಹಿತಿ :
*ಜವಾಗಲ್‌ಶ್ರೀನಾಥ್,ಭಾರತದಮಾಜಿಕ್ರಿಕೆಟಿಗಮತ್ತುಪ್ರಸ್ತುತ ಐಸಿಸಿ ಮ್ಯಾಚ್ ರೆಫರಿಯಾಗಿದ್ದಾರೆ
* ಅವರು ಭಾರತದ ಅತ್ಯುತ್ತಮ ವೇಗದ ಬೌಲರ್‌ಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ.
*ಏಕದಿನಪಂದ್ಯಗಳಲ್ಲಿ300ಕ್ಕೂಹೆಚ್ಚು ವಿಕೆಟ್‌ಗಳನ್ನು ಪಡೆದ ಮೊದಲ ಭಾರತೀಯ ವೇಗದ ಬೌಲರ್ ಎಂದು ಎನಿಸಿಕೊಂಡಿದ್ದಾರೆ
* ಜನನ : 31 ಆಗಸ್ಟ್ 1969 ಜವಾಗಲ್
*ಬೌಲಿಂಗ್:ಬಲಗೈವೇಗ*ಏಕದಿನಚೊಚ್ಚಲ:18ಅಕ್ಟೋಬರ್1991 ಪಾಕಿಸ್ತಾನದ ವಿರುದ್ಧ ಕೊನೆಯ ಏಕದಿನ : 23 ಮಾರ್ಚ್ 2003 ಆಸ್ಟ್ರೇಲಿಯಾ

## ಭಾರತಕ್ಕೆ ದಕ್ಷಿಣ ಅಮೆರಿಕದ ಗಯಾನಾದಿಂದ ತೈಲ ಆಮದು




* ವಿಶ್ವದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ರಾಷ್ಟ್ರಗಳ ಪೈಕಿ ಭಾರತವು 3 ಸ್ಥಾನವನ್ನ ಪಡೆದುಕೊಂಡಿದೆ.
* ಸದ್ಯ ಭಾರತಕ್ಕೆ ದಕ್ಷಿಣ ಅಮೆರಿಕದ ಹೊಸ ತೈಲ ಉತ್ಪನ್ನ ಉತ್ಪಾದಕ ಗಯಾನಾದಿಂದ ಮೊದಲ ತೈಲ ಸರಕು ಆಮದು ಮಾಡಿಕೊಳ್ಳಲಾಗುತ್ತಿದೆ.
* ರಿಫಿನಿಟಿವ್ ಐಕಾನ್ ಡೇಟಾವು ನೀಡಿರುವ ಮಾಹಿತಿ ಪ್ರಕಾರ ಇದೀಗ ಗಯಾನಾದಿಂದ ತೈಲ ಸರಕುರಫ್ತಾಗಿದೆಎಂದುತಿಳಿಸಿದ್ದಾರೆ.
* ದಕ್ಷಿಣ ಅಮೆರಿಕದ ತೈಲ ಉತ್ಪನ್ನ ಕೇಂದ್ರ ಗಯಾನಾದಿಂದ 1 ಮಿಲಿಯನ್ ಬ್ಯಾರಲ್ ಕಚ್ಚಾತೈಲ ಮಾರ್ಚ್ 2ರಂದು ಭಾರತದ ಕಡೆ ಸಾಗಿದೆ ಈ ಕಚ್ಚಾ ತೈಲವು ಏಪ್ರಿಲ್ 8ರ ಸುಮಾರಿಗೆ ಭಾರತಕ್ಕೆ ಬರಲಿದೆ ಎಂದು ರಿಫಿನಿಟಿವ್ ಐಕಾನ್ ಡೇಟಾವು ರವರು ತಿಳಿಸಿದರು. ದಕ್ಷಿಣ ಅಮೆರಿಕ ಖಂಡದ ಬಗ್ಗೆ ಮಾಹಿತಿ :
* ದಕ್ಷಿಣ ಅಮೇರಿಕ ಪೆಸಿಫಿಕ್ ಸಾಗರದ ಪಶ್ಚಿಮ ಭಾಗದಲ್ಲಿ, ಮತ್ತು ಅಟ್ಲಾಂಟಿಕ್ ಸಾಗರದ ಉತ್ತರ ಭಾಗದಲ್ಲಿ ನೆಲೆಗೊಂಡಿರುವ ಖಂಡವಾಗಿದೆ.
* ದಕ್ಷಿಣ ಅಮೆರಿಕ ಖಂಡದ ವಿಸ್ತೀರ್ಣವು ಏಷ್ಯಾ, ಆಫ್ರಿಕಾ, ಮತ್ತು ಉತ್ತರ ಅಮೆರಿಕ ಖಂಡಗಳ ನಂತರ ನಾಲ್ಕನೇ ಅತಿದೊಡ್ಡ ಖಂಡವಾಗಿದೆ.
* ಜನಸಂಖ್ಯೆ ದೃಷ್ಟಿಯಿಂದ ಇದಕ್ಕೆ ಐದನೆಯ ಸ್ಥಾನವಿದೆ.
* ದಕ್ಷಿಣ ಅಮೆರಿಕಾದಲ್ಲಿ ವಿಶ್ವದಲ್ಲೇ ಅತಿ ಎತ್ತರದ ಜಲಪಾತ ಏಂಜೆಲ್ ಜಲಪಾತವಿದೆ.
* ನೀರಿನ ಪರಿಮಾಣದ ದೃಷ್ಟಿಯಿಂದ ಅತಿ ದೊಡ್ಡ ನದಿ ಅಮೆಜಾನ್ ನದಿ.
* ಅತಿ ಉದ್ದದ ಪರ್ವತ ಶ್ರೇಣಿ ಆಂಡೀಸ್ ಶ್ರೇಣಿ.
* ಅತಿ ಹೆಚ್ಚು ಆರ್ದ್ರವಾಗಿರುವ ಮರುಭೂಮಿ ಅಟಕಾಮ
* ವಿಸ್ತೀರ್ಣ : 17.84 ಮಿಲಿಯನ್ ಕಿಮೀ
* ಜನಸಂಖ್ಯೆ : 42.25 ಕೋಟಿ 2016 ಪ್ರಕಾರ

## ಏಷ್ಯಾದ ದೊಡ್ಡ ಟ್ಯೂಲಿಪ್ ಉದ್ಯಾನಕ್ಕೆ ಸಾರ್ವಜನಿಕರ ವೀಕ್ಷಣೆಗೆ ಅವಕಾಶ



* ಏಷ್ಯಾದ ಅತಿದೊಡ್ಡ ಟ್ಯೂಲಿಪ್ ಹೂಗಳ ಉದ್ಯಾನವನ್ನು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ನೀಡಲಾಗಿದೆ.
* ಇದು ಶ್ರೀನಗರ ದಾಲ್ ಸರೋವರದ ಸಮೀಪವಿರುವ ಏಷ್ಯಾದ ಅತಿದೊಡ್ಡ ಟ್ಯೂಲಿಪ್ ಹೂಗಳ ಉದ್ಯಾನವವಾಗಿದೆ.
* ಈಗಿರುವ ಟ್ಯೂಲಿಪ್ ಉದ್ಯಾನವನ್ನು ಈ ಮೊದಲು ಸಿರಾಜ್ ಬಾಗ್ ಎಂದು ಕರೆಯುತ್ತಿದ್ದರು.
* 2008ರಲ್ಲಿ ಈ ಉದ್ಯಾನವನ್ನು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಗುಲಾಬ್ ನಬಿ ಆಜಾದ್ ಉದ್ಘಾಟಿಸಿ ಮಾಡಿದ್ದರು.
* ಕಾಶ್ಮೀರದ ಪ್ರವಾಸೋದ್ಯಮ ಇಲಾಖೆಯು ಟ್ಯೂಲಿಪ್ ಹೂಗಳ ಉದ್ಯಾನವನದ ಉಸ್ತುವಾರಿಯನ್ನು ನಿರ್ವಹಿಸುತ್ತಿದೆ.
* ಈ ಉದ್ಯಾನವವು ಹಿಮಚ್ಛಾದಿತ ಜಬರ್‌ವಾನ್ ಪರ್ವತ ಶ್ರೇಣಿಯ ತಪ್ಪಲಿನ 30 ಹೆಕ್ಟೇರ್ ಪ್ರದೇಶದಲ್ಲಿ ನಿರ್ಮಿಸಲಾಗಿದೆ.
* ಈ ಟ್ಯೂಲಿಪ್ ಹೂಗಳ ಉದ್ಯಾನವು 15 ಲಕ್ಷ ಟ್ಯೂಲಿಪ್ ಹೂಗಳಿಂದ ಕೂಡಿದೆಮತ್ತು 62 ಬಗೆಯ ಹೂಗಳಿವೆ ಎಂದು ಉದ್ಯಾನವನದ ಉಸ್ತುವಾರಿ ಇನಾಂ ರೆಹಮಾನ್ ಸೂಫಿ ಯವರು ಮಾಹಿತಿಯನ್ನು ನೀಡಿದರು.

## 'ವಜ್ರ' ನೌಕೆ ನಿಯೋಜನೆ




* ವಜ್ರ ನೌಕೆಯನ್ನು ಕರಾವಳಿ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ನಿಯೋಜನೆ ಮಾಡಲಾಗಿದೆ ಹಾಗು ಇದು ನಿಯೋಜನೆಗೊಂಡ 6ನೇ ನೌಕೆಯಾಗಿದೆ.
* ವಜ್ರ ನೌಕೆಯನ್ನು ಚೆನ್ನೈ ಪೋರ್ಟ್ ಟ್ರಸ್ಟ್‌ನಲ್ಲಿ ರಕ್ಷಣಾ ಮುಖ್ಯಸ್ಥ ಜನರಲ್ ಬಿಪಿನ್ ರಾವತ್'ರವರು ಈ ನಿಯೋಜನೆ ಕಾರ್ಯಕ್ಕೆ ಚಾಲನೆ ನೀಡಿದರು.
* ಲಾರ್ಸನ್ ಅಂಡ್ ಟುಬ್ರೊ ಸಂಸ್ಥೆಗಳು ಈ ವಜ್ರ ನೌಕೆಯನ್ನು ಮೇಕ್ ಇನ್ ಇಂಡಿಯಾ ಅಭಿಯಾನದಡಿ ನಿರ್ಮಿಸಿವೆ, ಹಾಗು ಈ ನೌಕೆ ಹಗಲು ರಾತ್ರಿ ತನ್ನ ಕಾರ್ಯಾಚರಣೆಯನ್ನು ನಡೆಸಲಿದೆ.
* ಈ ವಜ್ರ ನೌಕೆಯಲ್ಲಿ 30MM ಗನ್ ಮತ್ತು 2ಎಫ್‌ಸಿಎಸ್ ನಿಯಂತ್ರಿತ 12. 7 MM ಸ್ಟೆಬಿಲೈಸ್ಡ್ ರಿಮೋಟ್ ಕಂಟ್ರೋಲ್ಡ್ ಗನ್'ಗಳನ್ನೂ ಅಳವಡಿಸಲಾಗಿದೆ.
* ಇದು ದೇಶೀ ನಿರ್ಮಿತ ಕಡಲ ಗಸ್ತು 7ನೌಕೆಗಳಲ್ಲಿ ಈ ವಜ್ರ ನೌಕೆಯು 6ನೇಯದಾಗಿದೆ.

## ಡಾ.ವಿವೇಕ್ ಮೂರ್ತಿ ಅಮೇರಿಕ ಸರ್ಜನ್ ಜನರಲ್ ಹುದ್ದೆಗೆ ನೇಮಕ




* ಅಮೇರಿಕ ಅಧ್ಯಕ್ಷ ಜೋ ಬೈಡನ್ ಸರಕಾರವು ಭಾರತ ಅಮೆರಿಕನ್ ತಜ್ಞ ವೈದ್ಯ ವಿವೇಕ್ ಮೂರ್ತಿಯವರನ್ನು ಸರ್ಜನ್ ಜನರಲ್ ಹುದ್ದೆಗೆ ನೇಮಕ ಮಾಡಿದೆ ಹಾಗೂ ಸೆನೆಟ್ ಅನುಮೋದನೆ ನೀಡಿದೆ.
* ಅಮೆರಿಕದ ಸರ್ಜನ್ ಜನರಲ್ ಹುದ್ದೆಗೆ ಡಾ. ಮೂರ್ತಿ ಅವರು 2ನೇ ಬಾರಿ ನೇಮಕಗೊಂಡಿದ್ದಾರೆ.
* ಈ ಮೊದಲು ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ರವರ ಸರ್ಕಾರವಿದ್ದಾಗ ಅಂದರೆ 2013ರಲ್ಲಿ ಡಾ.ವಿವೇಕ್ ಮೂರ್ತಿ ಸರ್ಜನ್ ಜನರಲ್ ಹುದ್ದೆಗೆ ನೇಮಕಗೊಂಡಿದ್ದರು.
* ಅಮೇರಿಕ ಸರ್ಜನ್ ಜನರಲ್ ಹುದ್ದೆಗೆ ನೇಮಕಗೊಂಡ ಅಂತ್ಯಂತ ಕಿರಿಯ ವಯಸ್ಸಿನ ವೈದ್ಯ ಎಂದು ಹೆಸರುವಾಸಿಯಾಗಿದ್ದಾರೆ.
* ಕರ್ನಾಟಕದ ಡಾ.ವಿವೇಕ್ ಮೂರ್ತಿಯವರು ಅಮೆರಿಕದಲ್ಲಿ ಡಾಕ್ಟರ್ಸ್ ಫಾರ್ ಅಮೆರಿಕ ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ, ಈ ಸಂಸ್ಥೆಯಿಂದ ಅತೀ ಕಡಿಮೆ ದರಗಳಲ್ಲಿ ಆರೋಗ್ಯ ಸೇವೆಗಳನ್ನು ನೀಡುವ ಗುರಿಯನ್ನು ಈ ಸಂಸ್ಥೆ ಹೊಂದಿದೆ ಎಂದು ತಿಳಿಸಿದ್ದಾರೆ. ಡಾ.ವಿವೇಕ್ ಮೂರ್ತಿ ರವರ ಬಗ್ಗೆ ಮಾಹಿತಿ :
* ವಿವೇಕ್ ಹಲ್ಲೆಗೆರೆ ಮೂರ್ತಿ ಅಮೆರಿಕದ ವೈದ್ಯ ಮತ್ತು ಸಾರ್ವಜನಿಕ ಆರೋಗ್ಯ ಸೇವೆ ಆಯೋಗದ ದಳದಲ್ಲಿ ವೈಸ್ ಅಡ್ಮಿರಲ್ ಆಗಿದ್ದರು.
* ಡಾ.ವಿವೇಕ್ ಅವರು ಯುನೈಟೆಡ್ ಸ್ಟೇಟ್ಸ್ ನ 21 ನೇ ಸರ್ಜನ್ ಜನರಲ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.
* 2014 ರಿಂದ 2017 ರವರೆಗೆ 19 ನೇ ಸರ್ಜನ್ ಜನರಲ್ ಆಗಿ ಸೇವೆ ಸಲ್ಲಿಸಿದ್ದರು.
* ಜನನ : 10 ಜುಲೈ 1977 ಹಡರ್ಸ್‌ಫೀಲ್ಡ್, ಯುನೈಟೆಡ್ ಕಿಂಗ್‌ಡಮ್
* ಶಿಕ್ಷಣ : ಯೇಲ್ ಸ್ಕೂಲ್ ಆಫ್ ಮೆಡಿಸಿನ್ 1998 2003

# 26- 03- 2021

## ಬಾಂಗ್ಲಾದೇಶ ಪ್ರವಾಸ ಆರಂಭಿಸಿದ ಪ್ರಧಾನಿ ಮೋದಿ



* ಭಾರತದ ಪ್ರಧಾನಿ ನರೇಂದ್ರ ಮೋದಿಯವರು 2 ದಿನಗಳ ಬಾಂಗ್ಲಾದೇಶದ ಪ್ರವಾಸವನ್ನು ಪ್ರಾರಂಭ ಮಾಡಿದ್ದಾರೆ, ಈ ಪ್ರವಾಸದಿಂದ ಭಾರತ ಬಾಂಗ್ಲಾದೇಶ ನಡುವೆ ಸ್ನೇಹ ಸಂಬಂಧ ಹೆಚ್ಚಲಿದೆ ಎಂದು ಮೋದಿಜೀ ತಿಳಿಸಿದರು.
* ಕಳೆದ ವರ್ಷ ಸಾಂಕ್ರಾಮಿಕ ರೋಗ ಕೋರೋಣ ಹರಡಿದ ಹಿನ್ನಲೆಯಿಂದಾಗಿ ಇದು ಮೋದಿಯವರ ಮೊದಲ ವಿದೇಶ ಪ್ರಯಾಣವಾಗಿದೆ.
* ಭಾರತದ ಪ್ರಧಾನಿ ಮೋದಿಯವರು ಬಾಂಗ್ಲಾದೇಶದ ಸುವರ್ಣ ಸ್ವಾತಂತ್ರ್ಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.
* ಬಾಂಗ್ಲಾದೇಶ ರಾಜಧಾನಿ ಢ ಾಕಾದಲ್ಲಿ ದೇಶದ ಸ್ವಾತಂತ್ರ್ಯೋತ್ಸವ ಸಂಭ್ರಮಾಚರಣೆ ಇದೇ ಮಾರ್ಚ್ 27ರ ತನಕ ನಡೆಯಲಿದೆ.
* ಬಾಂಗ್ಲಾದೇಶಕ್ಕೆ 1971ರ ವಿಮೋಚನಾ ಯುದ್ಧದ ನಂತರ ಪಾಕಿಸ್ತಾನ ದೇಶದಿಂದ ಸ್ವಾತಂತ್ರ್ಯ ದೊರಕಿಸಿ ಕೊಡುವಲ್ಲಿ ಭಾರತ ಪ್ರಮುಖ ಪಾತ್ರವಹಿಸಿತ್ತು.
* ಸ್ವಾತಂತ್ರ್ಯ ದೊರಕಿದ ಸಂಭ್ರಮಾಚರಣೆ ಮತ್ತು ಇದೆ ಸಂದರ್ಭದಲ್ಲಿ ಬಾಂಗ್ಲಾ ರಾಷ್ಟ್ರಪಿತ ಬಂಗಬಂಧು ಶೇಖ್ ಮುಜಿಬುರ್ ರಹಮಾನ್ ಅವರ ಜನ್ಮ ಶತಮಾನೋತ್ಸವದ ಆಚರಣೆ ನಡೆಯಲಿದೆ.

## ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ಸ್ಥಾನಮಾನ ನೀಡಲು ಕೇಂದ್ರ ಸರ್ಕಾರದ ಒಪ್ಪಿಗೆ



* ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಸ್ಥಾನಮಾನವನ್ನು ನೀಡಲು ಕೇಂದ್ರ ಸರ್ಕಾರವು ಒಪ್ಪಿಗೆಯನ್ನು ನೀಡಿದೆ.
* ಕರ್ನಾಟಕ ರಾಜ್ಯದ ಭದ್ರಾ ಮೇಲ್ದಂಡೆ ಯೋಜನೆ ದಶಕಗಳ ಕನಸಿಗೆ ಕೇಂದ್ರ ಸರ್ಕಾರದ ಅನುಮತಿ ಸೂಚಿಸಿದೆ.
* ಭದ್ರಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಯೋಜನೆ ಸ್ಥಾನಮಾನ ಪಡೆದ ರಾಜ್ಯದ ಮೊದಲ ಯೋಜನೆಯಾಗಿದೆ.
* ಈ ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಯಿಂದಾಗಿ ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು ಜಿಲ್ಲೆಗಳ ರೈತರಿಗೆ ಉಪಯೋಗವಾಗುವ ಯೋಜನೆ ಇದಾಗಿದೆ, ಅಂದಾಜು ಈ ಯೋಜನೆಗೆ 21,450 ಕೋಟಿ ರೂ. ವೆಚ್ಚತಗುಲಲಿದೆ ಎಂದು ತಿಳಿಸಲಾಗಿತ್ತು.
* ಈ ರಾಷ್ಟ್ರೀಯ ಯೋಜನೆಗೆ ಕೇಂದ್ರ ಸರ್ಕಾರವು ಕೇಂದ್ರದಿಂದ 16,125 ಕೋಟಿ ಅನುದಾನ ನೀಡಲಿದೆ ಎಂದು ತಿಳಿಸಿದೆ.
* ರಾಷ್ಟ್ರೀಯ ಯೋಜನೆ ಸ್ಥಾನಮಾನ ಸಿಗಬೇಕಾದರೆ ಹನಿ ನೀರಾವರಿ ಯೋಜನೆ ಅಡಿಯಲ್ಲಿ 2 ಲಕ್ಷ ಹೆಕ್ಟೇರ್ ಪ್ರದೇಶವನ್ನು ಹೊಂದಿರಬೇಕು, ಇದೀಗ ಭದ್ರಾ ಮೇಲ್ದಂಡೆ ಯೋಜನೆಯ 2.25 ಲಕ್ಷ ಹೆಕ್ಟೇರ್ ಪ್ರದೇಶವನ್ನು ಹೊಂದಿದೆ ಇದರಿಂದ ಈ ಎಲ್ಲ ಪ್ರದೇಶಕ್ಕೂ ನೀರಾವರಿ ಸೌಲಭ್ಯ ನೀಡಿದಂತಾಗುತ್ತದೆ.
* ಭದ್ರಾ ಮೇಲ್ದಂಡೆ ಯೋಜನೆಗೆ 2003ರಲ್ಲಿ ಒಪ್ಪಿಗೆ ಪಡೆಯಲಾಗಿತ್ತು.

## ಬೆಂಗಳೂರಿನಲ್ಲಿ 100 CNG ಘಟಕಗಳು ನಿರ್ಮಾಣ




* ರಾಜ್ಯ ರಾಜಧಾನಿ ಬೆಂಗಳೂರು ನಗರದಲ್ಲಿ 100 CNG(ನೈಸರ್ಗಿಕ ಅನಿಲ) ಘಟಕಗಳನ್ನೂ ನಿರ್ಮಾಣ ಮಾಡಲು ಒಪ್ಪಂದ.
* CNG ಘಟಕಗಳನ್ನು ನಿರ್ಮಾಣ ಮಾಡಲು ಭಾರತೀಯ ಅನಿಲ ಪ್ರಾಧಿಕಾರವು ಗೇಲ್ (GAIL) ಮತ್ತು ಕಾನ್ಫಿಡೆನ್ಸ್ ಪೆಟ್ರೋಲಿಯಂ ಇಂಡಿಯಾ ಲಿಮಿಟೆಡ್ (CPIL) ಒಪ್ಪಂದವನ್ನು ಮಾಡಿಕೊಂಡಿವೆ.
* ಗೇಲ್'ನ ಮುಖ್ಯ ಪ್ರಧಾನ ವ್ಯವಸ್ಥಾಪಕ ವಿವೇಕ್ ವಾಥೋಡ್ಕರ್ ಹಾಗೂ ಸಿಪಿಐಎಲ್'ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ನಿತಿನ್ ಖರಾ ರವರು ಪರಸ್ಪರ

ಒಪ್ಪಿಕೊಂಡು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.
* ಸದ್ಯ ದೇಶಾದ್ಯಂತ 190 CNG ಘಟಕಗಳಿವೆ ಇವುಗಳ ನಿರ್ವಹಣೆಯನ್ನು ಗೇಲ್ ನೋಡಿಕೊಳ್ಳುತ್ತಿದೆ.
* ಪ್ರಸ್ತುತ ನಮ್ಮ ಬೆಂಗಳೂರಿನಲ್ಲಿ ಇದೀಗ ಒಟ್ಟು 55 CNG ಘಟಕಗಳಿವೆ, ಹಾಗೂ 52 ನಗರಗಳಲ್ಲಿ ಅನಿಲ ಕೊಳವೆ ಮಾರ್ಗಗಳನ್ನೂ ಗೇಲ್ (GAIL) ನಿರ್ಮಿಸುತ್ತಿದೆ, ಇದರಿಂದ ಸರಿ ಸುಮಾರು 6.10 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಅನಿಲ ವ್ಯವಸ್ಥೆ ದೊರಕಲಿದೆ.
* ಅಂದಾಜು 3 ವರ್ಷಗಳಲ್ಲಿ 100 CNG ಘಟಕಗಳನ್ನು ನಿರ್ಮಿಸುವ ಗುರಿಯನ್ನು ಗೇಲ್ ಸಿಪಿಐಎಲ್ ಹೊಂದಿವೆ.

## ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಬಳಕೆ ಹಾಸನ ಜಿಲ್ಲೆಗೆ ಪ್ರಥಮ ಸ್ಥಾನ



* ಹಾಸನ ಜಿಲ್ಲೆಯು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಶೇ. 68 ರಷ್ಟು ಅನುದಾನವನ್ನು ಬಳಕೆ ಮಾಡಿದೆ, ಹಾಗೂ ಅನುದಾನ ಬಳಕೆ ಮಾಡಿಕೊಂಡಿರುವ ಜಿಲ್ಲೆಗಳ ಪೈಕಿ ಇದೆ ಮೊದಲ ಜಿಲ್ಲೆಯಾಗಿ ಹೊರಹೊಮ್ಮಿ ಪ್ರಥಮ ಸ್ಥಾನ ಪಡೆದುಕೊಂಡಿದೆ.
* ಉಡುಪಿ ಜಿಲ್ಲೆಯು ಶೇ. 63 ರಷ್ಟು ಅನುದಾನವನ್ನು ಬಳಸಿ 2ನೇ ಸ್ಥಾನ ಪಡೆದುಕೊಂಡಿದೆ.
* ಚಿಕ್ಕಮಗಳೂರು ಜಿಲ್ಲೆಯು ಶೇ. 61 ರಷ್ಟು ಅನುದಾನವನ್ನು ಜಿಲ್ಲೆಗಳ ಕಾಮಗಾರಿಗಳಿಗೆ ಬಳಸಿಕೊಂಡು 3ನೇ ಸ್ಥಾನ ಪಡೆದುಕೊಂಡಿದೆ.
* ಈ ಮೂರೂ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಗೌರವಿಸಲಾಗುತ್ತದೆ ಎಂದು ಸಚಿವ ಡಾ. ನಾರಾಯಣಗೌಡ ಅವರು ತಿಳಿಸಿದರು.
* 2019 20 ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನಕ್ಕೆ ಶಾಸಕರ ಅನುದಾನದಲ್ಲಿ 2 ಕೋಟಿ ರೂ. ಅನುಮೋದನೆ ನೀಡಲಾಗಿತ್ತು.
* ಪ್ರಸ್ತುತ ಈ ವರ್ಷ ಕೋರೋಣ ಸಾಂಕ್ರಾಮಿಕ ರೋಗದಿಂದಾಗಿ ಕೇವಲ 1 ಕೋಟಿ ರೂ. ಅನುಮೋದನೆ ನೀಡಬೇಕು ಎಂದು ಸರ್ಕಾರ ಸೂಚನೆ ನೀಡಿದೆ.

## ರಾಷ್ಟ್ರೀಯ ಪೋಷನ್ ಅಭಿಯಾನ ಅನುದಾನ ಬಳಕೆಯಲ್ಲಿ ಕರ್ನಾಟಕಕ್ಕೆ 2 ನೇ ಸ್ಥಾನ




* ಪೋಷನ್ ಅಭಿಯಾನವನ್ನು ಪ್ರಧಾನಿ ಮೋದಿ ಅವರು ಮಾರ್ಚ್ 8, 2018 ರಂದು ರಾಜಸ್ಥಾನದ ಜುಂಜುನು ಜಿಲ್ಲೆಯಲ್ಲಿ ಪ್ರಾರಂಭಿಸಿದರು.
* ಈ ಅಭಿಯಾನದಿಂದ ಹದಿಹರೆಯದ ಹುಡುಗಿಯರು, ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು 0 6 ವರ್ಷ ವಯಸ್ಸಿನ ಮಕ್ಕಳ ಪೌಷ್ಠಿಕಾಂಶದ ಸ್ಥಿತಿಗೆ ಒತ್ತು ನೀಡುವುದು ಅಭಿಯಾನದ ಗುರಿಯಾಗಿದೆ.
* ದೇಶದಲ್ಲಿಯೇ ರಾಷ್ಟ್ರೀಯ ಪೋಷನ್ ಅಭಿಯಾನದ ಅನುದಾನದ ಬಳಕೆ ಹಾಗೂ ಸಾಧನೆಯಲ್ಲಿ ಕರ್ನಾಟಕ ಎರಡನೇ ಸ್ಥಾನ ಪಡೆದುಕೊಂಡಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆ ತಿಳಿಸಿದರು.

## ಅಮೇರಿಕದ ಆರೋಗ್ಯ ಇಲಾಖೆಯ ಹುದ್ದೆಗೆ ಟ್ರಾನ್ಸ್ ಜೆಂಡರ್ ನೇಮಕ




* ಅಮೇರಿಕದ ಅಧ್ಯಕ್ಷ ಜೋ ಬೈಡನ್'ರವರ ಸರ್ಕಾರದ ಆರೋಗ್ಯ ಇಲಾಖೆಯ ಸಹಾಯಕ ಕಾರ್ಯದರ್ಶಿ ಹುದ್ದೆಗೆ ಮಕ್ಕಳ ವೈದ್ಯೆ ರಚೆಲ್ ಲೆವಿನ್ ಅವರನ್ನು ನೇಮಕ ಮಾಡಿದೆ, ಇದಕ್ಕೆ US ಸೆನೆಟ್ ಅನುಮೋದನೆ ನೀಡಿದೆ.
* ರಚೆಲ್ ಲೆವಿನ್ ಅವರು ಟ್ರಾನ್ಸ್‌ಜೆಂಡರ್'ಆಗಿದ್ದು ಪ್ರಸ್ತುತ ಇವರು ಅಮೇರಿಕದಲ್ಲಿ ಮಕ್ಕಳ ವೈದ್ಯೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.
* ರಚೆಲ್ ಲೆವಿನ್'ರವರು ಆರೋಗ್ಯ ಮತ್ತು ಸಾರ್ವಜನಿಕ ಸೇವೆಗಳ ಇಲಾಖೆಯಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಅಮೇರಿಕ ಸರ್ಕಾರ ಮಾಹಿತಿಯನ್ನುನೀಡಿದೆ.
* 2017 ರಿಂದ 2021 ರವರೆಗೆ ಪೆನ್ಸಿಲ್ವೇನಿಯಾ ಆರೋಗ್ಯ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.
* ಅವರು ಪೆನ್ ಸ್ಟೇಟ್ ಕಾಲೇಜ್ ಆಫ್ ಮೆಡಿಸಿನ್‌ನಲ್ಲಿ ಮಕ್ಕಳ ಮತ್ತು ಮನೋವೈದ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆ ಆಗಿ ಸೇವೆ ಸಲ್ಲಿಸಿದ್ದರು.

## ಭಾರತ ದಕ್ಷಿಣ ಕೊರಿಯಾ ದ್ವಿಪಕ್ಷೀಯ ಸ್ನೇಹ ಉದ್ಯಾನವನ ದೆಹಲಿಯಲ್ಲಿ ಉದ್ಘಾಟಣೆ




* ದೆಹಲಿ ಕ್ಯಾಂಟ್‌ನಲ್ಲಿ ಭಾರತ ದಕ್ಷಿಣ ಕೊರಿಯಾ ದ್ವಿಪಕ್ಷೀಯ ಸ್ನೇಹ ಉದ್ಯಾನವನವನ್ನು ಭಾರತದ ರಕ್ಷಣಾ ಸಚಿವರಾಗಿರುವ ರಾಜನಾಥ್ ಸಿಂಗ್ ಮತ್ತು ದಕ್ಷಿಣ ಕೊರಿಯಾದ ರಕ್ಷಣಾ ಸಚಿವ ಸುಹ್ ವೂಕ್ ಅವರು ಉದ್ಘಾಟಿಸಿದ್ದಾರೆ.
* 1950 ರಿಂದ 1953ರ ಕೊರಿಯನ್ ಯುದ್ಧದಲ್ಲಿ ಭಾರತೀಯ ಶಾಂತಿಪಾಲಕರ ಕೊಡುಗೆಯನ್ನು ಸ್ಮರಿಸಲು ಈ ಸ್ನೇಹ ಪಾರ್ಕ್ ನಿರ್ಮಾಣ ಮಾಡಲಾಗಿದೆ ಎಂದು ತಿಳಿಸಿದ್ದಾರೆ.
* ದಕ್ಷಿಣ ಕೊರಿಯಾದ 1950 1953ರ ಯುದ್ಧಗಳಲ್ಲಿ ಭಾರತವು ನಿರ್ಣಾಯಕ ಪಾತ್ರ ವಹಿಸಿಕೊಂಡಿತ್ತು.
* ಭಾರತದ ಮೊದಲ ವಿದೇಶಾಂಗ ಕಾರ್ಯದರ್ಶಿ ಕೆ ಪಿ ಎಸ್ ಮೆನನ್ ದಕ್ಷಿಣ ಕೊರಿಯಾದಲ್ಲಿ ಚುನಾವಣೆಗಳನ್ನು ನೋಡಿಕೊಳ್ಳಲು ಸ್ಥಾಪಿಸಲಾದ ವಿಶ್ವಸಂಸ್ಥೆಯ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

## ನಾರ್ವೆ ವಿಶ್ವದ ಮೊದಲ ಹಡಗು ಸುರಂಗಮಾರ್ಗ ನಿರ್ಮಿಸಲಿದೆ



* ನಾರ್ವೆ ವಿಶ್ವದ ಮೊದಲ ಹಡಗು ಸುರಂಗ ಮಾರ್ಗವನ್ನು ನಿರ್ಮಾಣ ಮಾಡಲು ತಯಾರಿನಡೆಸಿದೆ, ಹಾಗೂ ಈ ಸುರಂಗಮಾರ್ಗ ಯೋಜನೆಯ 2022ರಲ್ಲಿ ಆರಂಭವಾಗಿ ಸರಿ ಸುಮಾರು 2025 2026ರ ಸಮಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ನಾರ್ವೆ ತಿಳಿಸಿದೆ.
* ನಾರ್ವೆ ಪರ್ವತಗಳ ಕೆಳಗೆ ಹಡಗು ಸುರಂಗವನ್ನು ನಿರ್ಮಿಸಲು ನಾರ್ವೆ ಚಿಂತನೆ ನಡೆಸಿದೆ.
* ಈ ಸುರಂಗಮಾರ್ಗವು 37 ಮೀಟರ್ ಎತ್ತರ, 1,700 ಮೀಟರ್ ಉದ್ದ ಮತ್ತು 26.5 ಮೀಟರ್ ಅಗಲ ವಿಸ್ತೀರ್ಣ ಹೊಂದಿರಲಿದೆ ಎಂದು ತಿಳಿಸಿದೆ.
* ಈ ಸುರಂಗಮಾರ್ಗವು ನಾರ್ವೆಯ ಸ್ಟ್ಯಾಧಾವೆಟ್ ಪರ್ಯಾಯ ದ್ವೀಪದ ಪರ್ವತಗಳ ಕೆಳಗೆ ಮಾಡಲಾಗುವದು ಎಂದು ತಿಳಿದು ಬಂದಿದೆ.
* ಮೊದಲ ಬಾರಿಗೆ ಸುರಂಗ ಮಾರ್ಗವನ್ನು 2013 ರಲ್ಲಿ ರಾಷ್ಟ್ರೀಯ ಸಾರಿಗೆ ಯೋಜನೆಯಲ್ಲಿ ಅಡಿಯಲ್ಲಿ ಸೇರ್ಪಡೆ ಮಾಡಲಾಯಿತು.
* ನಾರ್ವೆ ಸಾರಿಗೆ ಮತ್ತು ಸಂವಹನ ಸಚಿವಾಲಯವು ಈ ಸುರಂಗಮಾರ್ಗದ ತಯಾರಿಯ ಸಿದ್ಧತೆಗಳಿಗೆ ಅನುಮೋದನೆ ನೀಡಿದೆ.

# 27-03-2021

## ಶ್ರೀಲಂಕಾ ಸರ್ಕಾರವು ಭಾರತದ ಮೀನುಗಾರರನ್ನು ಬಿಡುಗಡೆ ಮಾಡಿದೆ



* ಭಾರತದ 54 ಮೀನುಗಾರರನ್ನು ಶ್ರೀಲಂಕಾ ಸರ್ಕಾರವು ಬಂದಿಸಿತ್ತು ಇದೀಗ ಬಂಧಿತ ಮೀನುಗಾರರ ಪೈಕಿ 40 ಮೀನುಗಾರರನ್ನು ಶ್ರೀಲಂಕಾ ನೌಕಪಡೆ ಬಿಡುಗಡೆ ಮಾಡಿದೆ ಎಂದು ತಮಿಳುನಾಡು ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.
* ಇನ್ನುಳಿದ ಪುದುಚೇರಿ ಮೂಲದ 14 ಮೀನುಗಾರರನ್ನು ಬಿಡುಗಡೆ ಮಾಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ ಆದರೆ ಕಾರಣವನ್ನು ಬಹಿರಂಗ ಪಡಿಸಿಲ್ಲ.
* ಭಾರತ ದೇಶದ ಮೀನುಗಾರರು ತಮ್ಮ ಸರಹದ್ದನ್ನು ಮೀರಿ ಸಮುದ್ರದಲ್ಲಿ ಮೀನುಗಾರಿಕೆಯನ್ನು ಮಾಡುತಿದ್ದರು ಎನ್ನುವ ಆರೋಪದಿಂದಾಗಿ ಭಾರತದ 5ಬೋಟ್ ಮತ್ತು 54 ಮೀನುಗಾರರನ್ನು ಶ್ರೀಲಂಕಾ ನೌಕಾಪಡೆ ಬಂಧಿಸಿದೆ ಎಂದು ಶ್ರೀಲಂಕಾ ಸರ್ಕಾರ ಮಾಹಿತಿಯನ್ನು ನೀಡಿತ್ತು.

## ISRO ಹಸಿರು ಇಂಧನ ಬಳಕೆ



* ಇಸ್ರೊ ಅಧ್ಯಕ್ಷ ಶಿವನ್'ರವರು ಭವಿಷ್ಯದ ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿ ಹಸಿರು ಇಂಧನವನ್ನೇ ಬಳಕೆ ಮಾಡುವ ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.
* ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮಗಳ ಗಗನಯಾನಗಳಲ್ಲಿ ಹಸಿರು ಇಂಧನ ಬಳಕೆ ಮಾಡುವ ಸಾಧ್ಯತೆಯೂ ಬಗ್ಗೆ ಚಿಂತನೆ ನಡೆಸಿದೆ ಎಂದು ಇಸ್ರೊ ಅಧ್ಯಕ್ಷ ಶಿವನ್'ರವರು ಇಂಡಿಯಾ ಎಕನಾಮಿಕ್ ಕಾಂಕ್ಲೇವ್'ನ ಕಾರ್ಯಕ್ರಮದಲ್ಲಿ ಅಡಿಯಲ್ಲಿ ಹೇಳಿದರು.
* ಭಾರತವು ಇಸ್ರೋನ ಗಗನಯಾನ ಕಾರ್ಯಕ್ರಮ ಬಳಕೆಗಾಗಿ ಕೊಕೊ ದ್ವೀಪದಲ್ಲಿ ಭೂಕೇಂದ್ರವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಆಸ್ಟ್ರೇಲಿಯಾದೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ತಿಳಿಸಿದರು.

## ಜಪಾನ್ ದೇಶದಿಂದ ಭಾರತಕ್ಕೆ 14,889 ಕೋಟಿ ರೂ.ಸಾಲ



*ಜಪಾನ್ ದೇಶವು ಭಾರತ ದೇಶಕ್ಕೆ 14,889 ಕೋಟಿ ರೂ.ಸಾಲ ನೀಡಲಿದೆ ಎಂದು ತಿಳಿದು ಬಂದಿದೆ.
* ಈ ಸಾಲದಿಂದಾಗಿ ಭಾರತದ ಯೋಜನೆಗಳಿಗೆ ಅಂದರೆ ದೆಹಲಿ ಮತ್ತು ಬೆಂಗಳೂರಿನಲ್ಲಿ ಮೆಟ್ರೋ ರೈಲು ವಿಸ್ತರಣೆ ಯೋಜನೆ, ಹೀಗೆ ಇನ್ನಿತರ ಯೋಜನೆಗಳಿಗೆ ಈ ಹಣವನ್ನು ಬಳಕೆ ಮಾಡಲಾಗುತ್ತದೆ ಎಂದು ತಿಳಿಸಲಾಗಿದೆ.
* ಜಪಾನ್ ದೇಶ ನೀಡುವ ಸಾಲದಿಂದ, ಹಿಮಾಚಲ ಪ್ರದೇಶದ ಬೆಳೆ ವೈವಿಧ್ಯೀಕರಣ ಯೋಜನೆ, ರಾಜಸ್ಥಾನದಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿನ ವಿದ್ಯುತ್ ಸರಬರಾಜು ಪರಿಸ್ಥಿತಿ ಸುಧಾರಿಸಲು 4 ಬಿಲಿಯನ್ ಯೆನ್ ಅನುದಾನದ ಹಣವನ್ನು ಬಳಸಿಕೊಳ್ಳಲಾಗುತ್ತದೆ ಎಂದು ತಿಳಿಸಿದೆ.
* ಭಾರತದ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಸಿ.ಎಸ್ ಮೊಹಾಪಾತ್ರ ಮತ್ತು ಜಪಾನಿನ ರಾಯಭಾರಿ ಸುಜುಕಿ ಸಟೋಶಿ ರವರು ಈ ಒಪ್ಪಂದಕ್ಕೆ ಪರಸ್ಪರ ಒಪ್ಪಿಗೆಯನ್ನು ನೀಡಿ ಸಹಿ ಹಾಕಿದರು.
* ಜಪಾನಿನಿಂದ ಪಡೆದ ಸಾಲದಲ್ಲಿ 120 ಬಿಲಿಯನ್ ಯೆನ್ ದೆಹಲಿ ಮೆಟ್ರೋ ಯೋಜನೆ ಸಲುವಾಗಿ ಮತ್ತು 50 ಬಿಲಿಯನ್ ಯೆನ್ ಬೆಂಗಳೂರು ಮೆಟ್ರೋ ಯೋಜನೆಗೆ ಬಳಸಿಕೊಳ್ಳಲಿದೆ.
* 45 ಬಿಲಿಯನ್ ಯೆನ್ ಸಾಲದಿಂದ ರಾಜಸ್ಥಾನದಲ್ಲಿ ನೀರಿನ ಯೋಜನೆ ಕಾಮಕಾರಿಗೆ ಬಳಸಿಕೊಳ್ಳಲಾಗುವದು ಎಂದು ಭಾರತ ಸರ್ಕಾರ ತಿಳಿಸಿದೆ.

## ರಾಜಸ್ಥಾನದ ಪೋಖ್ರಾನ್ ನಲ್ಲಿ ಆಕಾಶ್ ಕ್ಷಿಪಣಿಯ ಯಶಸ್ವಿ ಪರೀಕ್ಷೆ




* ಭಾರತೀಯ ಸೇನೆ ಮತ್ತು ಡಿಆರ್‌ಡಿಒ(DRDO)ಯು ಆಕಾಶ್ ಕ್ಷಿಪಣಿಯ ಪರೀಕ್ಷೆಯನ್ನು ರಾಜಸ್ಥಾನದಲ್ಲಿ ಯಶಸ್ವಿಯಾಗಿ ನಡೆಸಿವೆ.
* ದೇಶೀ ನಿರ್ಮಿತ ಆಕಾಶ್ ಕ್ಷಿಪಣಿಯನ್ನು ರಾಜಸ್ಥಾನದ ರಾಜ್ಯದ ಜೈಸಲ್ಮೇರ್ ಜಿಲ್ಲೆಯ ಪೋಖ್ರಾನ್ ಪ್ರದೇಶದಲ್ಲಿ ಕ್ಷಿಪಣಿ ಪರೀಕ್ಷೆಯನ್ನು ನಡೆಸಿತು.
* ಭಾರತೀಯ ವಾಯುಪಡೆ (ಇಂಡಿಯನ್ ಏರ್ ಫೋರ್ಸ್) ಈ ಆಕಾಶ್ ಕ್ಷಿಪಣಿಯನ್ನು ಬಳಸಲಿದೆ.
* ಈ ಆಕಾಶ್ ಕ್ಷಿಪಣಿ 40 ಕಿ.ಮೀ ದೂರದಲ್ಲಿನ ವೈಮಾನಿಕ ದಾಳಿಯನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿದೆ ಎಂದು ಭಾರತೀಯ ವಾಯುಪಡೆ ಅಧಿಕಾರಿಗಳು ತಿಳಿಸಿದ್ದಾರೆ.

## ಉತ್ತರ ಕೊರಿಯಾದಿಂದ ಹೊಸ ಕ್ಷಿಪಣಿ ಪರೀಕ್ಷೆ




* ಉತ್ತರ ಕೊರಿಯಾ ಪೂರ್ವ ಕರಾವಳಿ ಪದೇಶದಲ್ಲಿ ಹೊಸ ಯುದ್ಧತಂತ್ರ ಕ್ಷಿಪಣಿಯನ್ನು ಪರೀಕ್ಷೆ ಮಾಡಿದೆ ಎಂದು ತಿಳಿದು ಬಂದಿದೆ.
* ಉತ್ತರ ಕೊರಿಯಾದ ಅಧಿಕೃತ ಕೇಂದ್ರ ಸುದ್ದಿ ಸಂಸ್ಥೆಯಾಗಿರುವ ರೊಡಾಂಗ್ ಸಿನ್ಮುನ್ ಮಾಹಿತಿಯನ್ನು ನೀಡಿದೆ.
* ಉತ್ತರ ಕೊರಿಯಾ ರಾಷ್ಟ್ರವು ತನ್ನ ಸೇನಾ ಶಕ್ತಿಯನ್ನು ಹೆಚ್ಚಿಸಲು ಈ ಕ್ಷಿಪಣಿಯನ್ನು ಅಭಿವೃದ್ಧಿ ಪಡಿಸಿ ಪ್ರಯೋಗಿಸಿದೆ ಎಂದು ಅಲ್ಲಿನ ಅಧಿಕಾರಿ ರಿ ಪ್ಯಾಂಗ್ ಚೋಲ್ ಮಾಹಿತಿಯನ್ನು ನೀಡಿದರು.

## ಸೋನು ಸೂದ್ ಕೋವಿಡ್ 19 ಹೀರೋ




* ಫೋರ್ಬ್ಸ್ ವತಿಯಿಂದ 2021ರ ಲೀಡರ್‌ಶಿಪ್ ಅವಾರ್ಡ್ ಅನ್ನು ಸೋನು ಸೂದ್ ರವರಿಗೆ ನೀಡಿ ಗೌರವಿಸಿದೆ.
* 2021ರ ಕೋವಿಡ್ 19 ಹೀರೋ ಪಟ್ಟವನ್ನು ನೀಡಿದ ಫೋರ್ಬ್ಸ್‌ಗೆ ಸೋನು ಸೂದ್ ರವರು ಟ್ವೀಟ್ ಮೂಲಕ ಧನ್ಯವಾದವನ್ನು ತಿಳಿಸಿದರು.
* ಸೋನು ಸೂದ್‌ರವರು ಸಾಂಕ್ರಾಮಿಕ ರೋಗವಾಗಿರುವ ಕೋರೋಣ ಸಮಯದಲ್ಲಿ ಸಾಕಷ್ಟು ಜನರಿಗೆ ಸಮಾಜ ಸೇವೆ ರೀತಿಯಲ್ಲಿ ಸಹಾಯವನ್ನು ಮಾಡಿದ್ದಾರೆ, ಇವರು ಮಾಡಿದ ಈ ಕಾರ್ಯಕ್ಕೆ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಫೋರ್ಬ್ಸ್ ಮಾಹಿತಿ ನೀಡಿದೆ.

## ಖ್ಯಾತ ಪತ್ರಕರ್ತ ಅನಿಲ್ ಧಾರ್ಕರ್ ಇನ್ನಿಲ



* ಮುಂಬೈ ಅಂತರ್ ರಾಷ್ಟ್ರೀಯ ಸಾಹಿತ್ಯ ಉತ್ಸವದ ಸಂಸ್ಥಾಪಕ, ಖ್ಯಾತ ಪತ್ರಕರ್ತ ಹಾಗೂ ಬರಹಗಾರ ಅನಿಲ್ ಧಾರ್ಕರ್ ಇತ್ತೀಚಿಗೆ ವಿಧಿವಶರಾದರು.
* ಅನಿಲ್ ಧಾರ್ಕರ್ ತಮ್ಮ ವೃತ್ತಿಜೀವನದಲ್ಲಿ ಅಂಕಣಕಾರ, ಬರಹಗಾರ, ವಾಸ್ತುಶಿಲ್ಪಿ, ಚಲನಚಿತ್ರ ಸೆನ್ಸಾರ್ ಮಂಡಳಿಯ ಸಲಹಾ ಸಮಿತಿಯ ಸದಸ್ಯ ಸೇರಿದಂತೆ ಇನ್ನು ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು.
* ಧಾರ್ಕರ್‌ರವರು ಮಿಡ್ ಡೇ ಹಾಗೂ ದಿ ಇಂಡಿಪೆಂಡೆಂಟ್ ಪತ್ರಿಕೆಗಳ ಸಂಪಾದಕರಾಗಿದ್ದರು, ಹಾಗೂ ದಿ ರೋಮ್ಯಾನ್ಸ್ ಆಫ್ ಸಾಲ್ಟ್' ನ ಲೇಖಕರಾಗಿದ್ದರು.
* ಧಾರ್ಕರ್ ರವರು ಜನಪ್ರಿಯ ಸಾಹಿತ್ಯ ಉತ್ಸವವಾದ ಟಾಟಾ ಲಿಟರೇಚರ್ ಲೈವ್‌ನ ಜೀವನಾಡಿಯಾಗಿದ್ದರು.

## ಉತ್ತರ ಪ್ರದೇಶದಲ್ಲಿ ವಿದ್ಯಾರ್ಥಿಗಳು, ನಗರ ವಲಸಿಗರಿಗೆ ಬಾಡಿಗೆ ವಸತಿ ಯೋಜನೆ



* ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಕ್ಯಾಬಿನೆಟ್ ಕೈಗೆಟುಕುವ ಬಾಡಿಗೆ ವಸತಿ ಯೋಜನೆಯನ್ನು ಘೋಷಿಸಿದೆ.
* ಈ ವಸತಿ ಯೋಜನೆಯಿಂದ ವಿದ್ಯಾರ್ಥಿಗಳು, ನಗರ ವಲಸಿಗರು ಮತ್ತು ನಗರಗಳಲ್ಲಿ ವಾಸಿಸುವ ಬಡ ಜನರಿಗೆ ಕೈಗೆಟುಕುವ ದರದಲ್ಲಿ ಬಾಡಿಗೆ ವಸತಿ ಸಿಗಲಿದೆ ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ.
* ಉತ್ತರ ಪ್ರದೇಶದ ಈ ವಸತಿ ಯೋಜನೆಯನ್ನು ಪ್ರಧಾನ್ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಜಾರಿಗೆ ತರಲಾಗುತ್ತದೆ ಎಂದು ಯು.ಪಿ. ಸರ್ಕಾರ ಹೇಳಿದೆ
*ಭಾರತ ಸರ್ಕಾರದ ಉಪಕ್ರಮ ಅಡಿಯಲ್ಲಿ ಮಾರ್ಚ್ 31, 2022 ರ ಸಮಯಕ್ಕೆ 2 ಕೋಟಿ ವಸತಿ ಮನೆಗಳನ್ನು ನಗರದ ಬಡ ಜನರಿಗೆ ನೀಡುವ ಗುರಿಯನ್ನು ಹೊಂದಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್‌ರವರು ತಿಳಿಸಿದರು.

## 28- 03- 2021

### ಮೇ.1ರಿಂದ ರಾಜಸ್ಥಾನ ಸರ್ಕಾರದಿಂದ ಆರೋಗ್ಯ ವಿಮೆ ಯೋಜನೆ ಜಾರಿ



* ರಾಜಸ್ಥಾನ ಸರ್ಕಾರವು ಆರೋಗ್ಯ ವಿಮೆ ಯೋಜನೆ ಜಾರಿಗೆ ತರಲು ಸಿದ್ಧವಾಗಿದೆ.
* ಈ ಆರೋಗ್ಯ ವಿಮೆ ಮೂಲಕ 850 ರೂ. ಪಾವತಿಸಿದ್ರೆ 5 ಲಕ್ಷ ರೂ.ವರೆಗೂ ವಿಮೆ ಸಿಗಲಿದೆ.
* ಏಪ್ರಿಲ್. 1ರಿಂದ ಆರೋಗ್ಯ ವಿಮೆಯ ನೋಂದಣಿ ಪ್ರಾರಂಭವಾಗಲಿದೆ, ಮತ್ತು ಮೇ.1ರಿಂದ ಸಾರ್ವತ್ರಿಕ ಆರೋಗ್ಯ ವಿಮೆ ಯೋಜನೆ ಜಾರಿಯಾಗಲಿದೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್'ಯವರು ತಿಳಿಸಿದರು.
* ರಾಜಸ್ಥಾನದ ಯಾವುದೇ ಕುಟುಂಬ ವಾರ್ಷಿಕವಾಗಿ 850ರೂಪಾಯಿ ಪಾವತಿಸಿ 5 ಲಕ್ಷ ರೂ. ವರೆಗೆ ಆರೋಗ್ಯವಿಮೆ ಸೌಲಭ್ಯ ಪಡೆಯಬಹುದು.

### ಕಲುಷಿತ ಗಾಳಿ ಶುದ್ಧೀಕರಿಸುವ ಯಂತ್ರ ಸ್ಮೋಗ್ ಟವರ್



* ಬೆಂಗಳೂರು ನಗರದಲ್ಲಿನ ಮಲಿನಗಾಳಿಯನ್ನು ಅಥವಾ ವಾಯು ಮಾಲಿನ್ಯದಿಂದ ಕಲುಷಿತಗೊಂಡ ಗಾಳಿಯನ್ನು ಶುದ್ಧೀಕರಣ ಮಾಡಲು, ನೂತನ್ ಲ್ಯಾಬ್ಸ್ ಕರ್ನಾಟಕ ಎಂಬ ಸ್ಟಾರ್ಟ್ ಅಪ್ ಕಂಪನಿಯು ಈ ಯಂತ್ರವನ್ನು ಅಭಿವೃದ್ಧಿಪಡಿಸಿದೆ.
* ಬೆಂಗಳೂರು ನಗರದ ಹಡ್ಸನ್ ವೃತ್ತದ ಬಳಿ ಕಲುಷಿತ ಗಾಳಿ ಶುದ್ಧೀಕರಿಸುವ ಯಂತ್ರವನ್ನು ಪ್ರಾಯೋಗಿಕವಾಗಿ ಪ್ರಯೋಗಿಸಲು ಅಳವಡಿಸಲಾಗಿದೆ.
* ನೂತನ್ ಲ್ಯಾಬ್ಸ್ ಕರ್ನಾಟಕ ಎಂಬ ಸ್ಟಾರ್ಟ್ ಅಪ್ ಕಂಪನಿಯು (Smog tower) ಸ್ಮೋಗ್ ಟವರ್ ಎಂಬ ಯಂತ್ರವನ್ನು ಅಭಿವೃದ್ಧಿಪಡಿಸಿದೆ, ಹಾಗೂ ಇದಕ್ಕೆ ಭಾರತೀಯ ವಿಜ್ಞಾನ ಸಂಸ್ಥೆಯು ಸಹಕಾರ ನೀಡಿದೆ.
* ಈ ಸ್ಮೋಗ್ ಟವರ್ ಯಂತ್ರವು 15 ಅಡಿ ಎತ್ತರ, 6 ಅಡಿ ಸುತ್ತಳತೆಯನ್ನು ಹೊಂದಿದೆ.
* ಈ ಸ್ಮೋಗ್ ಟವರ್ ಯಂತ್ರವು ತನ್ನ ಕಾರ್ಯ ನಿರ್ವಹಿಸಲು ಒಂದು ಗಂಟೆಗೆ 11 ಕಿಲೋವಾಟ್ ವಿದ್ಯುತ್ ಬಳಸಿಕೊಳ್ಳುತ್ತದೆ, ಹಾಗೂ ಈ ಯಂತ್ರವನ್ನು ಸತತ 10 ಗಂಟೆಗಳ ಕಾಲ ಚಾಲನೆಯಲ್ಲಿ ಇಡಬಹುದಾಗಿದೆ.

### ಪ್ರಧಾನಿ ಮೋದಿಯಿಂದ ಬಾಂಗ್ಲಾಕ್ಕೆ ವಿವಿಧ ಕೊಡುಗೆ ಘೋಷಣೆ



* ಬಾಂಗ್ಲಾದೇಶಕ್ಕೆ12 ಲಕ್ಷ ಕೋರೋಣ ಲಸಿಕೆ ಡೋಸ್‌ಗಳನ್ನು ಉಡುಗೊರೆಯಾಗಿ ನೀಡಿದ ಭಾರತ.
* ಇತ್ತೀಚಿಗೆ ಪ್ರಧಾನಿ ಮೋದಿಯವರ ಬಾಂಗ್ಲಾದೇಶದ 2 ದಿನಗಳ ಪ್ರವಾಸದಲ್ಲಿ ಬಾಂಗ್ಲಾ ರಾಜಧಾನಿ ಢ ಾಕಾದಲ್ಲಿ ಕೋರೋಣ ಲಸಿಕೆಗಳನ್ನೂ ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರಿಗೆ ಮೋದಿಯವರು ನೀಡಿದರು.
* ಇದೆ ಸಂದರ್ಭದಲ್ಲಿ 109 ಆಯಂಬುಲೆನ್ಸ್‌ಗಳ ಕೀಗಳನ್ನೂ ಪ್ರಧಾನಿ ಶೇಖ್ ಹಸೀನಾ ಅವರಿಗೆ ಮೋದಿಜೀ ನೀಡಿದರು.
* ಪ್ರಧಾನಿ ಮೋದಿ ಮತ್ತು ಬಾಂಗ್ಲಾ ಪ್ರಧಾನಿಯವರು ಎರಡು ದೇಶಗಳ ದ್ವಿಪಕ್ಷೀಯ ಸಹಕಾರಕ್ಕೆ ಸಂಬಂಧಿಸಿ 5 ಒಪ್ಪಂದಗಳಿಗೆ ಸಹಿ ಹಾಕಿದರು.
* ಮೋದಿ ಉದ್ಘಾಟಿಸಿದ ಹೊಸ ಪ್ರಯಾಣಿಕರ ರೈಲು 'ಮಿಟಾಲಿ ಎಕ್ಸ್‌ಪ್ರೆಸ್' ರೈಲು ತೇಜ್ ಗಾಂವ್‌ನ ಪ್ರಧಾನ ಮಂತ್ರಿ ಕಚೇರಿಯಿಂದ ವೀಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಣೆ ಮಾಡಿದರು.
* ಉಭಯ ರಾಷ್ಟ್ರಗಳ ನಡುವೆ ಚಲಿಸುವ ಮೈತ್ರೀ ಎಕ್ಸ್‌ಪ್ರೆಸ್, ಢ ಾಕಾ ಕೊಲ್ಕತ್ತಾ ರೈಲು ಮತ್ತು ಬಂಧನ್ ಎಕ್ಸ್‌ಪ್ರೆಸ್, ಖುಲ್ನಾ ಕೋಲ್ಕತಾ ರೈಲಿನ ನಂತರದ ಮೂರನೇ ಪ್ರಯಾಣಿಕ ರೈಲು ಇದಾಗಿದೆ.

### ಪೋಲೆಂಡ್ ಸರ್ಕಾರ ಸರ್ಕಾರಿ ಸೇವೆಯಲ್ಲಿರುವ ನಾಯಿ, ಕುದುರೆಗಳಿಗೆ ಪಿಂಚಣಿ, ಭಾಗ್ಯ



* ಪೋಲೆಂಡ್ ಸರ್ಕಾರವು ಪೊಲೀಸ್, ಗಡಿ ಭದ್ರತಾ ಪಡೆ ಮತ್ತು ಅಗ್ನಿಶಾಮಕ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗುವ ನಾಯಿ ಮತ್ತು ಕುದುರೆಗಳ ಭವಿಷ್ಯದ ಕಲ್ಯಾಣಕ್ಕಾಗಿ ಹಾಗೂ ರಕ್ಷಣೆಗಾಗಿ ಪಿಂಚಣಿ ಸೌಲಭ್ಯ ನೀಡಲು ಮುಂದಾಗಿದೆ.
* ಪೋಲೆಂಡ್ ಸರ್ಕಾರದ ಗೃಹ ಸಚಿವಾಲಯವು ಪ್ರಾಣಿಗಳಿಗೆ ಅಧಿಕೃತ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ಹೊಸ ಮಸೂದೆಯ ಜಾರಿಗೆ ತರಲು ಸಿದ್ಧವಾಗಿದೆ.
* ಈ ಪೋಲೆಂಡ್ ಸರ್ಕಾರ ಆಶೆಯ ಪ್ರಕಾರ ಈ ಹೊಸ ಕಾನೂನು ಜಾರಿಯಾದರೆ ಪ್ರಸ್ತುತ ಸೇವೆಯಲ್ಲಿರುವ ಸುಮಾರು1200ನಾಯಿಗಳುಹಾಗೂ60ಕುದುರೆಗಳಿಗೆಪಿಂಚಿಣಿಸೌಲಭ್ಯ ಸಿಗಲಿದೆ ಎಂದು ಪೋಲೆಂಡ್ ಸರ್ಕಾರ ತಿಳಿಸಿದೆ.

### ಅಮೇರಿಕ ಜಾಗತಿಕ ಹವಾಮಾನ ಶೃಂಗಸಭೆ 40 ರಾಷ್ಟ್ರಗಳ ಮುಖ್ಯಸ್ಥರ ಆಹ್ವಾನ



* ಪ್ರಸ್ತುತ ಅಮೆರಿಕದ ನ್ಯೂಯಾರ್ಕ್'ನಲ್ಲಿ ಏಪ್ರಿಲ್ 22 23 ರಂದು ನಡೆಯಲಿರುವ ಜಾಗತಿಕ ಹವಾಮಾನದ ಶೃಂಗಸಭೆ ಯಲ್ಲಿ ಪಾಲ್ಗೊಳ್ಳುವಂತೆ ಭಾರತದ ಪ್ರಧಾನಿ ಮೋದಿ ಸೇರಿ 40 ರಾಷ್ಟ್ರಗಳ ಮುಖ್ಯಸ್ಥರನ್ನು ಅಮೆರಿಕಾದ ಅಧ್ಯಕ್ಷ ಜೋ ಬೈಡನ್ ರವರು ಆಮಂತ್ರವನ್ನು ನೀಡಿದ್ದಾರೆ.
*ಹವಾಮಾನ ವೈಪರೀತ್ಯ ಕುರಿತಾದ ಜಾಗತಿಕ ನಾಯಕರ ವರ್ಚುವಲ್ ಶೃಂಗಸಭೆಯನ್ನು ಜನರು ವೀಕ್ಷಣೆ ಮಾಡಲು ನೇರ ಪ್ರಸಾರವನ್ನು ಮಾಡಲಾಗುತ್ತದೆ ಎಂದು ತಿಳಿಸಲಾಗಿದೆ.

## ಕೋವಿಡ್ 19 ಲಸಿಕೆ ರಫ್ತು : 180 ರಾಷ್ಟ್ರಗಳ ಬೆಂಬಲ ಪಡೆದ ಭಾರತ




* ವಿಶ್ವಸಂಸ್ಥೆ ನೀಡಿರುವ ಮಾಹಿತಿ ಪ್ರಕಾರ ಭಾರತವು ಜಾಗತಿಕವಾಗಿ ಕೋವಿಡ್ 19 ಲಸಿಕೆಗಳನ್ನು ಪೂರೈಸಿದೆ, ಎಂದು ಯುಎನ್ ಜನರಲ್ ಅಸೆಂಬ್ಲಿಯಲ್ಲಿ ವಿಶ್ವಸಂಸ್ಥೆ ತಿಳಿಸಿದೆ.
* ಭಾರತೀಯ ಈ ಕೋರೋಣ ಲಸಿಕ ನೀಡಿಕೆಯಿಂದ ಬಡ ರಾಷ್ಟ್ರಗಳ ಮೇಲೆ ಹೆಚ್ಚು ಅನುಕೂಲವಾಗಿದೆ, ಮತ್ತು ಜನಗಳಲ್ಲಿನ ರೋಗದ ಭೀತಿಯನ್ನು ಕಡಿಮೆಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ಹೊಂದಿದೆ ಎಂದು ವಿಶ್ವಸಂಸ್ಥೆ ಹೇಳಿಕೆ ನೀಡಿದೆ.
* ಭಾರತವು ಬೇರೆ ಬೇರೆ ದೇಶಗಳಿಗೆ ಸಾಮಾಜಿಕ ಕಳಕಳಿಯಿಂದ ಲಸಿಕೆಯನ್ನು ನೀಡಿದ್ದರಿಂದ ಪ್ರಸ್ತುತ 180ಕ್ಕೂ ಹೆಚ್ಚು ಯುಎನ್ ಸದಸ್ಯ ರಾಷ್ಟ್ರಗಳ ಬೆಂಬಲ ಪಡೆದಿದೆ ಎಂದು ಯುಎನ್ ರಾಯಭಾರಿ ಭಾರತದ ಉಪ ಖಾಯಂ ಪ್ರತಿನಿಧಿ ಕೆ.ನಾಗರಾಜ್ ನಾಯ್ಡು ರವರು ತಿಳಿಸಿದರು.
* ಪ್ರಸ್ತುತ ಭಾರತ ದೇಶವು ಕೋವಿಡ್ 19 ಲಸಿಕೆಯನ್ನು ಜನರಿಗೆ ತಲುಪಿಸುವದರಲ್ಲಿ ಮುಂದೆಯಿದೆ.
*ಸದ್ಯ ಭಾರತವು ದೇಶದ 300 ಮಿಲಿಯನ್ ಜನರಿಗೆ ಲಸಿಕೆಯನ್ನು ನೀಡಿದೆ, ಮತ್ತು ಸರಿ ಸುಮಾರು 70ಕ್ಕೂ ಅಧಿಕ ರಾಷ್ಟ್ರಗಳಿಗೆ ಕೋವಿಡ್ 19 ಲಸಿಕೆ ಪೂರೈಸಿದೆ ಎಂದು ತಿಳಿದು ಬಂದಿದೆ.

## ವಿಶ್ವ ರಂಗಭೂಮಿ ದಿನ ಮಾರ್ಚ್ 27




* ಐಟಿಐ ಕೇಂದ್ರಗಳು ಮತ್ತು ಅಂತರರಾಷ್ಟ್ರೀಯ ನಾಟಕ ಸಂಘಗಳು ವಾರ್ಷಿಕವಾಗಿ ವಿಶ್ವ ರಂಗಭೂಮಿ ದಿನವನ್ನು ಪ್ರತಿವರ್ಷ ಮಾರ್ಚ್ 27, 2021 ರಂದು ಆಚರಿಸುತ್ತವೆ.
* ಈ ವಿಶ್ವ ರಂಗಭೂಮಿ ದಿನವು ನಾಟಕ, ಕಲೆಗಳು, ಹಾಗೂ ಮನರಂಜನಾ ಕ್ಷೇತ್ರಗಳಲ್ಲಿನ ಮಹತ್ವದ ಪಾತ್ರಗಳ ಬಗ್ಗೆ ತಿಳಿಸಲು ದಿನವನ್ನು ಆಚರಣೆ ಮಾಡಲಾಗುತ್ತದೆ.
* 1961ರಲ್ಲಿ ಇಂಟರ್ನ್ಯಾಷನಲ್ ಥಿಯೇಟರ್ ಇನ್ಸ್ಟಿಟ್ಯೂಟ್ (ITI) ವಿಶ್ವ ರಂಗಭೂಮಿ ದಿನವನ್ನು ಆಚರಿಸಲು ಪ್ರಾರಂಭಿಸಿತು.
*ಐಟಿಐ ವಿಶ್ವದಾದ್ಯಂತ 85ಕ್ಕೂ ಅಧಿಕ ಕೇಂದ್ರಗಳನ್ನು ಹೊಂದಿದೆ, ಈ ಕೇಂದ್ರದ ಶಾಲೆಗಳು, ಕಾಲೇಜುಗಳು ಈ ದಿನವನ್ನು ಆಚರಿಸಲು ಪ್ರೋತ್ಸಾಹವನ್ನು ನೀಡುತ್ತವೆ.

## 30- 03- 2021

## ತಜಕಿಸ್ತಾನದ ದುಶಾಂಬೆ ಸಮಾವೇಶದಲ್ಲಿ ವಿದೇಶಾಂಗ ಸಚಿವ ಜೈಶಂಕರ್ ಭಾಗಿ



* ತಜಕಿಸ್ತಾನದ ರಾಜಧಾನಿ ದುಶಾಂಬೆಗೆ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ತಲುಪಿದ್ದಾರೆ.
* ಅಫ್ಘಾನಿಸ್ತಾನದಲ್ಲಿ ಶಾಂತಿ ನೆಲೆಸುವ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಎಸ್.ಜೈಶಂಕರ್ ಪಾಲ್ಗೊಳ್ಳಲಿದ್ದಾರೆ.
* 2011ರ ನವೆಂಬರ್ 2 ರಂದು ಹಾರ್ಟ್ ಆಫ್ ಏಷ್ಯಾ ಇಸ್ತಾಂಬುಲ್ ಪ್ರೊಸೆಸ್' ಸಮಾವೇಶವು ಮೊದಲ ಬಾರಿಗೆ ನಡೆದಿತ್ತು.
* ತಜಕಿಸ್ತಾನದ ದುಶಾಂಬೆದಲ್ಲಿ ನಡೆಯಲಿರುವ 9ನೇ ಸಮಾವೇಶ ಇದಾಗಿದೆ.

## ಭಾರತದಿಂದ ನೇಪಾಳ ಸೇನೆಗೆ 1 ಲಕ್ಷ ಕೊರೊನಾ ಲಸಿಕೆ ಉಡುಗೊರೆ




* ಭಾರತವು ನೆರೆಯ ರಾಷ್ಟ್ರವಾಗಿರುವ ನೇಪಾಳ್ ಸೇನೆಗೆ 1 ಲಕ್ಷ ಡೋಸ್ ಕೋವಿಡ್ 19 ಲಸಿಕೆಗಳನ್ನು ಉಡುಗೊರೆಯಾಗಿ ನೀಡಿದೆ.
* ಭಾರತೀಯ ಸೇನಾ ಅಧಿಕಾರಿಗಳು ನೇಪಾಳ ಸೇನೆಗೆ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್ 19 ಲಸಿಕೆಗಳನ್ನು ನೀಡಿದ್ದಾರೆ ಎಂದು ಕಠ್ಮಂಡುವಿನ ಭಾರತೀಯ ರಾಯಭಾರಿ ಟ್ವೀಟ್ ಮೂಲಕ ತಿಳಿಸಿದ್ದಾರೆ.
* ಈ ಕೋರೋಣ ಲಸಿಕೆ ನೀಡಿದ್ದರಿಂದ ಭಾರತ ನೇಪಾಳ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧ ಇನ್ನಷ್ಟು ಉತ್ತಮವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.
* ನೇಪಾಳ ರಾಷ್ಟ್ರಕ್ಕೆ ಚೀನಾ ಕೂಡ 8 ಲಕ್ಷ ಡೋಸ್ ಕೋವಿಡ್ 19 ಲಸಿಕೆಗಳನ್ನು ನೀಡಿದೆ ಎಂದು ನೇಪಾಳ'ನ ಮೂಲಗಳು ತಿಳಿಸಿವೆ.

## ಚೀನಾ ದೇಶವು ವಿಶ್ವದಲ್ಲೇ 53% ಕಲ್ಲಿದ್ದಲು ಉತ್ಪಾದಣೆ



* ಚೀನಾ ರಾಷ್ಟ್ರವು 2020ರಲ್ಲಿ ವಿಶ್ವದಲ್ಲೇ ಶೇಕಡ 53 ರಷ್ಟು ಕಲ್ಲಿದ್ದಲುನ್ನು ಉತ್ಪಾದಣೆ ಮಾಡಿದೆ ಎಂದು ಜಾಗತಿಕ ಅಧ್ಯಯನವು ವರದಿಯನ್ನು ನೀಡಿದೆ.

* ಪ್ರಸ್ತುತ ಈ ಹಿಂದಿನ ವರ್ಷಗಳಲ್ಲಿ ಚೀನಾ ದೇಶವು, ಗಾಳಿ ವಿದ್ಯುತ್ (Wind) 71.7 ಗಿಗಾವ್ಯಾಟ್ ಹಾಗೂ ಸೌರ ವಿದ್ಯುತ್ 48.2 ಗಿಗಾವ್ಯಾಟ್ ಉತ್ಪಾದಣೆ ಮಾಡಿದೆ ಅದರ ಜೊತೆಯಲ್ಲಿ, ಕಲ್ಲಿದ್ದಲು ಆಧಾರಿತ ವಿದ್ಯುತ್ ಶೇಕಡ 53 ರಷ್ಟು ಉತ್ಪಾದಣೆ ಮಾಡಿದ ಏಕೈಕ ರಾಷ್ಟ್ರವಾಗಿ ಚೀನಾ ಹೊರಹೊಮ್ಮಿದೆ.

## ಶ್ರೀಲಂಕಾದ ಮೊದಲ ಕ್ರಿಕೆಟಿಗ ತಿಸಾರ ಪೆರೇರರಿಂದ ಒಂದೇ ಓವರ್'ನಲ್ಲಿ 6 ಸಿಕ್ಸರ್



* ಶ್ರೀಲಂಕಾದ ಕ್ರಿಕೆಟ್‌ನ ಇತಿಹಾಸ ಪುಟದಲ್ಲಿ ರೆಕಾರ್ಡ್ ಸೃಷ್ಟಿಸಿದ ಶ್ರೀಲಂಕಾದ ಆಲ್‌ರೌಂಡರ್ ತಿಸಾರ ಪೆರೇರ.
* ತಿಸಾರ ಪೆರೇರ ಅವರು ದೇಶೀಯ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಒಂದೇ ಓವರ್‌ನಲ್ಲಿ ಆರು ಸಿಕ್ಸರ್‌ಗಳನ್ನು ಸಿಡಿಸಿದ ಶ್ರೀಲಂಕಾದ ಮೊದಲ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಇವರದಾಗಿದೆ.
* ಶ್ರೀಲಂಕಾದ ಪನಗೊಡಾ ಪಟ್ಟಣದ ಆರ್ಮಿ ಗ್ರೌಂಡ್ ನಲ್ಲಿ ಬ್ಲೂಮ್ ಫೀಲ್ಡ್ ಕ್ರಿಕೆಟ್ ಹಾಗೂ ಅಥ್ಲೆಟಿಕ್ ಕ್ಲಬ್ ವಿರುದ್ಧ ನಡೆದ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಶ್ರೀಲಂಕಾದ ಆರ್ಮಿ ತಂಡದ ಪರ ಆಟವಾಡಿದ 31 ವರ್ಷದ ತಿಸಾರ ಪೆರೇರ ಅವರು ಈ ಸಾಧನೆ ಮಾಡಿದ್ದಾರೆ.
* ತಿಸಾರ ಪೆರೇರ ಅವರು ಒಟ್ಟಾರೆ 13 ಎಸೆತಗಳಲ್ಲಿ 52 ರನ್ ಗಳಿಸಿದ್ದಾರೆ.
* ಈ ಹಿಂದೆ 2005ರಲ್ಲಿ ಶ್ರೀಲಂಕಾದ ಮಾಜಿ ಆಲ್‌ರೌಂಡರ್ ಕೌಶಲ್ಯ ವೀರರತ್ನೆ ಅವರು 12 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಸಾಧನೆ ಮಾಡಿದ್ದರು.
* ಒಂದೇ ಓವರ್'ನಲ್ಲಿ 6 ಸಿಕ್ಸರ್ ಸಿಡಿಸಿದ ವಿಶ್ವದ 9ನೇ ಕ್ರಿಕೆಟಿಗ ಎಂಬ ಹೆಗ್ಗಳಿಕೆ ತಿಸಾರ ಪೆರೇರ ಅವರದಾಗಿದೆ.

## ಸರ್ಕಾರಿ ಕಟ್ಟಡ, ಸಂಸ್ಥೆಗಳಲ್ಲಿ ರಾಷ್ಟ್ರಧ್ವಜ ಹಾರಿಸಲು ಜಮ್ಮು ಕಾಶ್ಮೀರ ಆದೇಶ



* ಜಮ್ಮು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ರವರು 15 ದಿನಗಳ ಒಳಗಾಗಿ ಜಮ್ಮು ಕಾಶ್ಮೀರದ ಸರ್ಕಾರಿ ಕಟ್ಟಡ ಮತ್ತು ಸಂಸ್ಥೆಗಳಲ್ಲಿ ರಾಷ್ಟ್ರಧ್ವಜ ಹಾರಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದಾರೆ.
* 75ನೇ ಸ್ವಾತಂತ್ರ್ಯೋತ್ಸವದ ವರ್ಷಾಚರಣೆಯ ಹಿನ್ನಲೆಯ ಆಜಾದಿ ಕಾ ಅಮೃತ್ ಮಹೋತ್ಸವ್ ಕಾರ್ಯಕ್ರಮದ ಅಡಿಯಲ್ಲಿ ಜಿಲ್ಲಾಧಿಕಾರಿಗಳು, ಆಯುಕ್ತರು ಹಾಗೂ ಪೊಲೀಸ್ ಸುಪರಿಂಟೆಂಡೆಂಟ್‌ಗಳ ಜೊತೆ ಸಭೆ ನಡೆಸಿ ಸರ್ಕಾರಿ ಕಟ್ಟಡ ಮತ್ತು ಸಂಸ್ಥೆಗಳಲ್ಲಿ ರಾಷ್ಟ್ರಧ್ವಜ ಹಾರಿಸುವ ಕುರಿತ ಸೂಚನೆಯನ್ನೂ ನೀಡಿದ್ದಾರೆ.
* ದೇಶದಾದ್ಯಂತ ಕೇಂದ್ರ ಸರ್ಕಾರವು 'ಆಜಾದಿ ಕಾ ಅಮೃತ್ ಮಹೋತ್ಸವ್' ಕಾರ್ಯಕ್ರಮಗಳನ್ನು ಆಯೋಜಿಸಿದೆ, ಈ ಕಾರ್ಯಕ್ರಮಕ್ಕೆ ಇದೆ ಮಾರ್ಚ್ 12ರಂದು ಪ್ರಧಾನಿ ಮೋದಿ ಚಾಲನೆ ನೀಡಿದ್ದರು.

## ಆಕಾಶವಾಣಿ ನ್ಯೂಸ್ ರೀಡರ್ ಎ.ವಿ.ಚಿತ್ತರಂಜನ್ ದಾಸ್ ನಿಧನ



* ಆಕಾಶವಾಣಿ ನವದೆಹಲಿಯಿಂದ ಪ್ರಸಾರವಾಗುತ್ತಿದ್ದ ಕನ್ನಡ ಸುದ್ದಿ ವಾಚಕರಾಗಿದ್ದ (ನ್ಯೂಸ್ ರೀಡರ್) ಎ.ವಿ.ಚಿತ್ತರಂಜನ್ ದಾಸ್ ತಮ್ಮ 61ನೇ ವಯಸ್ಸಿನಲ್ಲಿ ಅನಾರೋಗ್ಯದಿಂದಾಗಿ ನಿಧನರಾದರು.
* ಎವಿ ಚಿತ್ತರಂಜನ್ ದಾಸ್ ರವರು ಅಖಿಲ ಭಾರತ ರೇಡಿಯೋ ದೆಹಲಿಯಲ್ಲಿ 12 ವರ್ಷಗಳ ಕಾಲ ಕನ್ನಡ ನ್ಯೂಸ್ ರೀಡರ್ ಆಗಿ ಕೆಲಸ ಮಾಡಿದ್ದಾರೆ.
* ಎ ವಿ ಚಿತ್ತರಂಜನ್ ದಾಸ್ ರವರು ಪರಿಣಿತ ಕನ್ನಡ ಅನುವಾದಕ, ಮತ್ತು ಇಂಗ್ಲಿಷ್ / ಹಿಂದಿಯಿಂದ ಕನ್ನಡಕ್ಕೆ ಭಾಷಾಂತರಿಸುವ ಸಾಮರ್ಥ್ಯವನ್ನು ಹೊಂದಿದ್ದರು.
* ಪ್ರಸ್ತುತ ಇವರಿಗೆ 17 ವರ್ಷಗಳ ಕಾಲ ಕನ್ನಡ ಅನುವಾದದ ಅನುಭವವಿದೆ, ಇವರು ಈ ಸಮಯದಲ್ಲಿ ವಿವಿಧ ಪುಸ್ತಕಗಳು, ನಿಯತಕಾಲಿಕೆಗಳು, ಕ್ಯಾಟಲಾಗ್‌ಗಳು, ಕಿರುಪುಸ್ತಕಗಳು, ರೇಡಿಯೊ ತಾಣಗಳು ಜಾಹೀರಾತು ಸಾಮಗ್ರಿಗಳು, ಟಿವಿಸಿಗಳು, ಜಂಗಲ್‌ಗಳು ಇತ್ಯಾದಿಗಳನ್ನು ಅನುವಾದಿಸಿದ್ದಾರೆ.

## ವಿರಾಟ್ ಕೊಹ್ಲಿ ನಾಯಕನಾಗಿ 200ನೇ ಅಂತರ್‌ರಾಷ್ಟ್ರೀಯ ಪಂದ್ಯ



* ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಯವರು ಇತ್ತೀಚಿಗೆ ಪುಣೆಯಲ್ಲಿ 200 ನೇ ಅಂತರ್‌ರಾಷ್ಟ್ರೀಯ ಪಂದ್ಯವನ್ನು ಮುನ್ನಡೆಸಿದ್ದಾರೆ.
* ಇದು ಪುಣೆಯಲ್ಲಿ ನಡೆದ ಇಂಗ್ಲೆಂಡ್ ವಿರುದ್ಧ ನಡೆದ ಏಕದಿನ ಸರಣಿಯ ಅಂತಿಮ ಪಂದ್ಯವಾಗಿತ್ತು.
* ಈ ಹಿಂದೆ ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ನಂತರ ಅಂದರೆ 2017ರ ಜನವರಿಯಲ್ಲಿ ಭಾರತ ತಂಡದ ನಾಯಕನಾಗಿ ವಿರಾಟ್ ಕೊಹ್ಲಿ ನೇಮಕ ಮಾಡಲಾಗಿತ್ತು.
* ಪ್ರಸ್ತುತ ವಿರಾಟ್ ಕೊಹ್ಲಿ ಯವರು 60 ಟೆಸ್ಟ್, 95 ಏಕದಿನ ಮತ್ತು 45 ಟ್ವೆಂಟಿ 20 ಪಂದ್ಯಗಳಲ್ಲಿ ಭಾರತದ ತಂಡವನ್ನು ನಾಯಕರಾಗಿ ಮುನ್ನಡೆಸಿದ್ದಾರೆ.
* ವಿರಾಟ್ ಕೊಹ್ಲಿ, ಧೋನಿ ಮತ್ತು ಅಝರುದ್ದೀನ್ ಈ ಮೂರು ನಾಯಕರು 200ಕ್ಕಿಂತ ಹೆಚ್ಚು ಅಂತರ್‌ರಾಷ್ಟ್ರೀಯ ಪಂದ್ಯಗಳಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದಾರೆ.

## ದೆಹಲಿ ಮುಖ್ಯಮಂತ್ರಿಗಿಂತ ಲೆಫ್ಟನಂಟ್ ಗವರ್ನರ್'ಗೆ ಹೆಚ್ಚಿನ ಅಧಿಕಾರ




* ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್'ರವರು ದೆಹಲಿಯ ಲೆಫ್ಟಿನೆಂಟ್ ಗೌರ್ನರ್'ಗೆ ಹೆಚ್ಚಿನ ಅಧಿಕಾರ ನೀಡುವ ಮಸೂದೆ 2021ಗೆ ಸಹಿ ಹಾಕಿದ್ದಾರೆ.
* 2021ರ ಈ ಮಸೂದೆಯಿಂದಾಗಿ ಇನ್ನುಮುಂದೆ ದೆಹಲಿಯಲ್ಲಿ ಚುನಾಯಿತ ಸರ್ಕಾರಕ್ಕಿಂತ ಗವರ್ನರ್'ಅವರಿಗೆ ಹೆಚ್ಚಿನ ಅಧಿಕಾರ ಇರಲಿದೆ.
* ಇನ್ನು ಮುಂದೆ ದೆಹಲಿಯಲ್ಲಿರುವ ಸರ್ಕಾರವು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೂ ಮೊದಲು ಲೆಫ್ಟನಂಟ್ ಗವರ್ನರ್ ಅಭಿಪ್ರಾಯವನ್ನೂ ಪಡೆಯಬೇಕಾಗುತ್ತದೆ. ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ರವರ ಬಗ್ಗೆ ಮಾಹಿತಿ :
* ಜನನ: 1 ಅಕ್ಟೋಬರ್ 1945
* ರಾಮ್ ನಾಥ್ ಕೋವಿಂದ್ ಅವರು ಭಾರತದ 14 ನೇ ಮತ್ತು ಪ್ರಸ್ತುತ ಭಾರತದ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.
* ಭಾರತೀಯ ರಾಜಕಾರಣಿ. ಅವರು 2015 ರಿಂದ 2017 ರವರೆಗೆ ಬಿಹಾರದ 26 ನೇ ರಾಜ್ಯಪಾಲರಾಗಿ ಮತ್ತು 1994 ರಿಂದ 2006 ರವರೆಗೆ ರಾಜ್ಯಸಭೆಯ ಸಂಸತ್ ಸದಸ್ಯರಾಗಿ ಸೇವೆ ಸಲ್ಲಿಸಿದರು.
* ಪಕ್ಷ: ಭಾರತೀಯ ಜನತಾ ಪಕ್ಷ

## ಅಬುದಾಬಿಯಲ್ಲಿ ಹಿಂದೂ ದೇವಾಲಯ ನಿರ್ಮಾಣಕ್ಕೆ ಅಡಿಪಾಯ



* ಅಬುದಾಬಿಯಲ್ಲಿ ಸರಿ ಸುಮಾರು 880 ಕೋಟಿ ರೂ. ವೆಚ್ಚದಲ್ಲಿ ಹಿಂದೂ ದೇವಾಲಯ ನಿರ್ಮಾಣಕ್ಕೆ ಅಡಿಪಾಯ ಹಾಕಲಾಯಿತು ಹಾಗೂ ಇದು ಏಪ್ರಿಲ್ ತಿಂಗಳಿನಲ್ಲಿ ಪೂರ್ಣಗೊಳ್ಳಲಿದೆ ತಿಳಿದು ಬಂದಿದೆ.
* ಅಬುದಾಬಿಯ ಅಬುಮುರೇಖಾ ನಗರದ 27 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಹಿಂದೂ ದೇವಾಲಯದ ಕಾಮಗಾರಿ ಭರದಿಂದ ಸಾಗಿದೆ ಎಂದು ತಿಳಿದು ಬಂದಿದೆ.
* ಈ ಹಿಂದೂ ದೇವಾಲಯವು ಭೂಮಿ ಮಟ್ಟದಿಂದ 4.5 ಮೀಟರ್ ಎತ್ತರದ ಅಡಿಪಾಯ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಅಬುಧಾಬಿಯ ಬಿಎಪಿಎಸ್ ಯೋಜನಾ ಇಂಜಿನಿಯರ್ ಮಾಹಿತಿಯನ್ನು ನೀಡಿದ್ದಾರೆ.
* ಈ ಹಿಂದೂ ದೇವಾಲಯ ನಿರ್ಮಾಣಕ್ಕಾಗಿ ಕಾಮಗಾರಿಗಳಿಗೆ ರಾಜಸ್ಥಾನನಿಂದ ಗುಲಾಬಿ ಕಲ್ಲುಗಳು ಮತ್ತು ಗುಜರಾತನಿಂದ ಕಲ್ಲುಗಳನ್ನು ತರಲಾಗಿದೆ, ಇಟಲಿಯ ಮ್ಯಾಸಿಡೋನಿಯಾದಿಂದ ಅಮೃತಶಿಲೆ ಕಲ್ಲುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿದು ಬಂದಿದೆ.
* ಈ ದೇವಾಲಯದ ನಿರ್ಮಾಣದ ಕಾರ್ಯಗಳಲ್ಲಿ 2000 ವಾಸ್ತುಶಿಲ್ಪಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

## ವಿಶ್ವದಾದ್ಯಂತ ಭೂಸಮಯ(EarthHour)ದಿನ ಆಚರಣೆ



* ಪ್ರತಿ ವರ್ಷವು ಜಾಗತಿಕ ತಾಪಮಾನ ಹಾಗೂ ಹವಾಮಾನ ವೈಪರೀತ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಭೂಸಮಯ ದಿನವನ್ನು ಆಚರಣೆಯನ್ನು ಮಾಡಲಾಗುತ್ತದೆ.
* ಪ್ರಸ್ತುತ ವರ್ಷದ ಭೂಸಮಯ (ಅರ್ಥ್ ಅವರ್)ದಿನವನ್ನು ಪ್ಯಾರಿಸ್ ಐಫೆಲ್ ಟವರ್,ಅಮೆರಿಕದ ಎಂಪೈರ್ ಸ್ಟೇಟ್ ಕಟ್ಟಡ, ಲಂಡನ್‌ನ ಸಂಸತ್ ಭವನ ಕಟ್ಟಡ, ರೋಮ್‌ನ ಪುರಾತನ ಕೊಲೋಸಿಯಂ ಭವನ, ಮಾಸ್ಕೊದ ಕ್ರೆಮ್ಲಿನ್ , ಸಿಡ್ನಿಯ ಅಪೇರಾ ಹೌಸ್ ಸೇರಿದಂತೆ ವಿಶ್ವಪ್ರಸಿದ್ಧ ಕಟ್ಟಡಗಳಲ್ಲಿ ಮಾರ್ಚ್ 27 ರಾತ್ರಿ ಸ್ಥಳೀಯ ಸಮಯ 8:30ರಿಂದ 9:30ರವರೆಗೆ ವಿದ್ಯುತ್ ದೀಪಗಳನ್ನು ಆರಿಸಿ ಭೂಸಮಯ ದಿನವನ್ನು ಆಚರಿಸಲಾಯಿತು.

# 31-03-2021

## ಛತ್ತೀಸ್‌ಗಢ ರಾಜ್ಯದ ಶಾಲಾ ಮಕ್ಕಳಿಗೆ ಇನ್ನು ಭಾರತೀಯ ಸಂವಿಧಾನದ ಬಗ್ಗೆ ಅಧ್ಯಯನ




* ಛತ್ತೀಸ್‌ಗಢ ರಾಜ್ಯದ ಶಾಲಾ ಮಕ್ಕಳು ಮುಂಬರುವ ಶೈಕ್ಷಣಿಕ ವರ್ಷದಿಂದ ಭಾರತೀಯ ಸಂವಿಧಾನದ ಬಗ್ಗೆ ಅಧ್ಯಯನ ಮಾಡಲು ತಿಳಿಸಿದೆ ಎಂದು ಶಿಕ್ಷಣ ಸಚಿವ ಪ್ರೇಮ್ ಸಾಯಿ ಸಿಂಗ್ ಟೆಕಮ್ ತಿಳಿಸಿದ್ದಾರೆ.
* ಪ್ರಸ್ತುತ ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲ್ ಹಂತದ ವಿದ್ಯಾರ್ಥಿಗಳಿಗಾಗಿ ಛತ್ತೀಸ್‌ಗಢ ರಾಜ್ಯವು ಸಂವಿಧಾನದ ಬಗ್ಗೆ ಪ್ರತ್ಯೇಕ ಪಠ್ಯಗಳನ್ನು ತಯಾರಿಸಿದೆ ಎಂದು ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ ಮಾಹಿತಿಯನ್ನು ನೀಡಿದೆ.
* ಶೈಕ್ಷಣಿಕ ಪಠ್ಯಕ್ರಮದಲ್ಲಿ ಸಂವಿಧಾನದ ಮೂಲತತ್ವಗಳು ಮತ್ತು ಮೌಲ್ಯಗಳ ಮಾಹಿತಿಗಳನ್ನು ಹೇಳಿಕೊಡಲಾಗುವದು.
* ಛತ್ತೀಸ್‌ಗಢ ರಾಜ್ಯದಲ್ಲಿ ಮುಂಬರುವ ಶೈಕ್ಷಣಿಕ ವರ್ಷದಿಂದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಸಂವಿಧಾನ ಅಧ್ಯಯನ ಪುಸ್ತಕ ಸಿಗಲಿವೆ ಎಂದು ಶಾಲಾ ಶಿಕ್ಷಣದ ಪ್ರಧಾನ ಕಾರ್ಯದರ್ಶಿ ಅಲೋಕ್ ಶುಕ್ಲಾ ತಿಳಿಸಿದರು.

## ಅರಣ್ಯ ವಿಚಾರದಲ್ಲಿ ಕೇಂದ್ರದ ನಿರ್ಣಯವೇ ಅಂತಿಮ



* ಪ್ರಸ್ತುತ ಕೇಂದ್ರ ಸರಕಾರದಿಂದ ಅನುಮತಿ ಪಡೆದ ಅರಣ್ಯ ಪ್ರದೇಶಗಳಲ್ಲಿನ ಯೋಜನೆಗಳಿಗೆ ರಾಜ್ಯ ಸರ್ಕಾರವು ಹೆಚ್ಚುವರಿ ನಿಯಮಗಳನ್ನೂ ವಿಧಿಸುವಂತಿಲ್ಲ ಎಂದು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯವು ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಅರಣ್ಯ ಇಲಾಖೆ ಕಾರ್ಯದರ್ಶಿಗಳಿಗೆ ಲಿಖಿತ ರೂಪದ ಪತ್ರದಲ್ಲಿ ತಿಳಿಸಿದೆ.
* ಕೇಂದ್ರ ಸರ್ಕಾರದ ಪರವಾನಿಗೆ ಪಡೆದಿರುವ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಕೆಲ ಸಂದರ್ಭಗಳಲ್ಲಿ ಅರಣ್ಯ ಸಂರಕ್ಷಣೆ ಮತ್ತು ಪರಿಸರ ನಿಯಮಗಳನ್ನು ವಿಧಿಸಲು ಅವಕಾಶ ಕಲ್ಪಿಸಲಾಗಿದೆ.
* ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ಕೋರೋಣ ಹಿನ್ನಲೆಯಿಂದ ಹೇರಿದ ಲಾಕ್‌ಡೌನ್ ತೆರುವು ಗೊಳಿಸಿದ ನಂತರ 439 ಯೋಜನೆಗಳಿಗೆ ಚಾಲನೆ ನೀಡಿದೆ.

## ಕರ್ನಾಟಕ ರಾಜ್ಯಕ್ಕೆ GST ಪರಿಹಾರ ಬಿಡುಗಡೆ




* ಕೇಂದ್ರ ಸರ್ಕಾರವು GST ಪರಿಹಾರವನ್ನು ಆಯಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಆದಾಯ ತೆರಿಗೆಯ ಮೂಲಕ ಬಿಡುಗಡೆ ಮಾಡಿದೆ.
* ಕೇಂದ್ರ ಸರ್ಕಾರದ ಪ್ರಸ್ತುತ ಹಣಕಾಸು ವರ್ಷ ಅಂತ್ಯವಾಗುತ್ತಿರುವದರಿಂದ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರವು 30 ಸಾವಿರ ಕೋಟಿ ರೂ. GST ಪರಿಹಾರ ಬಿಡುಗಡೆಗೊಳಿಸಿದೆ.
* ಕೇಂದ್ರ ಸರ್ಕಾರವು ಕರ್ನಾಟಕಕ್ಕೆ 2970 ಕೋಟಿ ರೂ GST ಪರಿಹಾರ ಸೇರಿದಂತೆ ಹೊಸದಾಗಿ 30 ಸಾವಿರ ಕೋಟಿ ರೂ. ಪರಿಹಾರವನ್ನು ನೀಡಿದೆ.
* ಪ್ರಸ್ತುತ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರವು 2021ರ ಮಾರ್ಚ್ ಕೊನೆಗೊಂಡಂತೆ ಅಡಾಕ್ ಪರಿಹಾರವಾಗಿ 28 ಸಾವಿರ ಕೋಟಿ ರೂ. ಪರಿಹಾರ ಬಿಡುಗಡೆಗೊಳಿಸಿದೆ. ಕೇಂದ್ರಾಡಳಿತ ಪ್ರದೇಶಗಳ ಬಗ್ಗೆ ಮಾಹಿತಿ :
* ಕೇಂದ್ರಾಡಳಿತ ಪ್ರದೇಶವು ಒಂದು ಭಾರತ ಗಣರಾಜ್ಯದ ಅವಿಭಾಜ್ಯ ಅಂಗವಾಗಿದೆ.
* ಕೇಂದ್ರಾಡಳಿತ ಪ್ರದೇಶವು ಕೇಂದ್ರ ಸರ್ಕಾರದ ನೇರ ಆಡಳಿತಕ್ಕೆ ಒಳಪಡುತ್ತದೆ.
* ಭಾರತದ ಇತರೆ ರಾಜ್ಯಗಳು ಹೊಂದಿರುವಂತೆ ಇವುಗಳು ಪ್ರತ್ಯೇಕ ಸರ್ಕಾರಗಳನ್ನು ಹೊಂದಿರುವುದಿಲ್ಲ, ಆದರೆ ಭಾರತದ ಸಂಸತ್ತು ಸಂವಿಧಾನ ತಿದ್ದುಪಡಿಯ ಮೂಲಕ ಕೇಂದ್ರಾಡಳಿತ ಪ್ರದೇಶಗಳಿಗೆ ಶಾಸನ ಸಭೆಯ ಸ್ಥಾನ ಕಲ್ಪಿಸಬಹುದು.
* ಭಾರತದ ಕೇಂದ್ರಾಡಳಿತ ಪ್ರದೇಶಗಳು: ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳು, ಚಂಡಿಗಡ್, ದಿಯು ಮತ್ತು ದಮನ್, ಲಕ್ಷದ್ವೀಪ್, ದೆಹಲಿಯ, ಪುದುಚೆರಿ, ಜಮ್ಮು ಮತ್ತು ಕಾಶ್ಮೀರ, ಲಡಾಕ್

## ಭಾರತ ಬಾಂಗ್ಲಾದೇಶ ರೂಪೂರು ಪರಮಾಣು ವಿದ್ಯುತ್ ಸ್ಥಾವರಒಪ್ಪಂದ



* ಬಾಂಗ್ಲಾದೇಶದ ಮೊದಲ ಪರಮಾಣು ವಿದ್ಯುತ್ ಸ್ಥಾವರ ಇದಾಗಿದೆ.
* ಭಾರತವು ಬಾಂಗ್ಲಾದೇಶದೊಂದಿಗೆ ವಿದ್ಯುತ್ ಸ್ಥಾವರದ ಒಪ್ಪಂದ ಮಾಡಿಕೊಂಡಿದೆ, ಈ ಒಪ್ಪಂದದಿಂದಾಗಿ ಭಾರತೀಯ ಕಂಪನಿಗಳು ಬಾಂಗ್ಲಾದೇಶ ರೂಪುರ್ ಪರಮಾಣು ವಿದ್ಯುತ್ ಸ್ಥಾವರ ಪ್ರಸರಣ ಮಾರ್ಗಗಳನ್ನು ಅಭಿವೃದ್ಧಿಪಡಿಸುತ್ತವೆ.
* ಬಾಂಗ್ಲಾದೇಶದ ಪದ್ಮಾ ನದಿಯ ದಡದಲ್ಲಿನ ಪಬ್ನಾ ಜಿಲ್ಲೆಯ ರೂಪಪುರದಲ್ಲಿ 2.4 GW ಸಾಮರ್ಥ್ಯದ ಪರಮಾಣು ವಿದ್ಯುತ್ ಸ್ಥಾವರ ನಿರ್ಮಾಣ ಮಾಡಲಾಗುತ್ತಿದೆ.
* ಈ ಪರಮಾಣು ವಿದ್ಯುತ್ ಸ್ಥಾವರದಲ್ಲಿ ಎರಡು ಘಟಕಗಳ ನಿರ್ಮಾಣ ಮಾಡಲಾಗುತ್ತಿದೆ ಪ್ರತಿಯೊಂದರಲ್ಲೂ 1200 MWವಿದ್ಯುತ್ ಉತ್ಪಾದಿಸಲಾಗುತ್ತದೆ ಎಂದು ತಿಳಿಸಲಾಗಿದೆ.
* 2018ರಲ್ಲಿ ತ್ರಿಪಕ್ಷೀಯ ಅಂದರೆ ರಷ್ಯಾ, ಭಾರತ ಮತ್ತು ಬಾಂಗ್ಲಾದೇಶದ ನಡುವೆ ರೂಪೂರ್ ಪರಮಾಣು ವಿದ್ಯುತ್ ಯೋಜನೆಗೆ ಸಹಿ ಹಾಕಲಾಯಿತು.
* ಈ ರೂಪೂರ್ ಪರಮಾಣು ವಿದ್ಯುತ್ ಯೋಜನೆಯನ್ನು ರಷ್ಯಾದ ರೊಸಾಟಮ್ ಸ್ಟೇಟ್ ಅಟಾಮಿಕ್ ಎನರ್ಜಿ ಕಾರ್ಪೊರೇಷನ್ ನಿರ್ಮಿಸಲಿದೆ. ಭಾರತ ಪರಮಾಣು ವಿದ್ಯುತ್ ಸ್ಥಾವರ ಬಗ್ಗೆ ಮಾಹಿತಿ :
* 2013 ರ ಹಾಗೆ, ಭಾರತ 7 ಪರಮಾಣು ಶಕ್ತಿ ಸ್ಥಾವರಗಳ 6780 ಮೆವ್ಯಾ ಸಾಮರ್ಥ್ಯದ ಕಾರ್ಯಾಚರಣೆಯಲ್ಲಿ ಅಳವಡಿಕೆಯಾದ 21 ಪರಮಾಣು ರಿಯಾಕ್ಟರ್‌ಗಳನ್ನು ಹೊಂದಿದೆ.
* ಒಟ್ಟು 30,292.91 ಗಿವ್ಯಾ ವಿದ್ಯುತ್ ಉತ್ಪಾದಿಸುವ ಪರಮಾಣು ರಿಯಾಕ್ಟರ್‌ಗಳನ್ನು ಹೊಂದಿದೆ.
* 6 ವಿದ್ಯುತ್ ಉತ್ಪಾದಿಸುವ ರಿಯಾಕ್ಟರ್ ನಿರ್ಮಾಣ ಹಂತದಲ್ಲಿದೆ ಮತ್ತು 4,300 ಮೆವ್ಯಾ ಹೆಚ್ಚುವರಿ ವಿದ್ಯುತ್ ಉತ್ಪಾದನೆ ನಿರೀಕ್ಷಿಸಲಾಗಿದೆ.
* ಭಾರತ 2032 ರಲ್ಲಿ 63,000 ಮೆವ್ಯಾ ಒಂದು ಅಣು ವಿದ್ಯುತ್ ಶಕ್ತಿಯ ಸಾಮರ್ಥ್ಯತಲುಪಲುಮಹತ್ವಾಕಾಂಕ್ಷೆಯಯೋಜನೆಯನ್ನುರೂಪಿಸಿದೆ.

## ಪಾಕಿಸ್ತಾನವು ಶಾಹೀನ್ 1 ಎ ಬ್ಯಾಲಿಸ್ಟಿಕ್ ಕ್ಷಿಪಣಿ ಉಡಾವಣೆ



* ಪಾಕಿಸ್ತಾನವು ಮಾರ್ಚ್ 26, 2021ರಂದು ಪರಮಾಣು ಸಾಮರ್ಥ್ಯದ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಯಶಸ್ವಿಯಾಗಿ ಹಾರಿಸಿತು.
* ಈ ಶಾಹೀನ್ 1 ಎ ಕ್ಷಿಪಣಿ 900 ಕಿಲೋಮೀಟರ್ ವ್ಯಾಪ್ತಿಯನ್ನು ತಲುಪುವ ಸಾಮರ್ಥ್ಯವನ್ನು ಹೊಂದಿದೆ.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App